ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 9 ಮಂಗಳವಾರ 2024

ಸಂಪುಟ: 44 | ಸಂಚಿಕೆ: 263 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಸಂಚರಿಸಿದಷ್ಟು ದೂರ ಮಾತ್ರ ಟೋಲ್ ಕಟ್ಟುವಂತಹ ಜನೋಪಯೋಗಿ ವ್ಯವಸ್ಥೆ ಜಾರಿಗೆ ಕೇಂದ್ರದ ಜನಸ್ನೇಹಿ ಚಿಂತನೆ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಜಿಪಿಎಸ್ ಆಧಾರಿತ ಟೋಲ್ ಸಂಗ್ರಹ

● ಇಲ್ಲಿನ ಯಶಸ್ಸು ಆಧರಿಸಿ ದೇಶದೆಲ್ಲೆಡೆ ಪರಿಚಯ
● ಜಿಯೋ ಫೆನ್ಸಿಂಗ್ ಕಾರ್ಯ ಆರಂಭ


ಇಡೀ ದೇಶದಲ್ಲಿ ಮೊದಲ ಬಾರಿಗೆ ಪ್ರಾಯೋಗಿಕವಾಗಿ ವ್ಯವಸ್ಥೆ ಜಾರಿ

● ಎಷ್ಟು ದೂರ ಕ್ರಮಿಸುತ್ತಾರೋ ಅಷ್ಟೇ ಶುಲ್ಕ ಪಾವತಿ
● ಕಡಿಮೆ ಅಂತರ ಸಾಗುವವರಿಗೆ ಟೋಲ್ ಹೊರೆ ಕಡಿತ

● ಬಾಪುಲಿಂಗರಾಜ್ ಅರಸ್

ಮೈಸೂರು, ಜ.8– ಇಡೀ ದೇಶದಲ್ಲಿ ಮೊದಲ ಬಾರಿಗೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಜಿಪಿಎಸ್ ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆ ಜಾರಿಗೊಳಿಸಲು ಕೇಂದ್ರ ಸರ್ಕಾರ ಮಹತ್ವದ ತೀರ್ಮಾನ ಕೈಗೊಂಡಿದೆ. ಆಧುನಿಕ ತಂತ್ರಜ್ಞಾನ ಆಧಾರಿತ ಹೊಸ ವ್ಯವಸ್ಥೆಯನ್ನು ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಪರಿಚಯಿಸಿ, ಅದರ ಯಶಸ್ಸು ಆಧರಿಸಿ ನಂತರ ದೇಶದೆಲ್ಲೆಡೆ ಜಾರಿಗೊಳಿಸಲು ಕೇಂದ್ರ ಸರ್ಕಾರ ನಿರ್ಧಾರ ಮಾಡಿದೆ.

ಅಮೇರಿಕಾ, ಜಪಾನ್, ಚೀನಾ ಸೇರಿದಂತೆ ಇತರೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿರುವ ಜಿಪಿಎಸ್ ಆಧಾರಿತ ಟೋಲ್ ವ್ಯವಸ್ಥೆಯನ್ನು ಈಗ ಭಾರತದಲ್ಲಿ ಜಾರಿಗೊಳಿಸಲಾಗುತ್ತಿದೆ. ಇದನ್ನು ಮೊದಲು ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆ(ಎನ್‌ಹೆಚ್ 275)ಯಲ್ಲಿ ಪರಿಚಯಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ಈ ವ್ಯವಸ್ಥೆಯನ್ನು ರಾಷ್ಟ್ರ ರಾಜಧಾನಿ ದೆಹಲಿ–ಜೈಪುರ ರಾಷ್ಟ್ರೀಯ ಹೆದ್ದಾರಿ 48ರಲ್ಲೂ ಆರಂಭಿಸಲಾಗುತ್ತಿದೆ. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆ ಹಾಗೂ ದೆಹಲಿ–ಜೈಪುರ ಎಕ್ಸ್‌ಪ್ರೆಸ್ ಹೈವೆಯಲ್ಲಿ ವ್ಯವಸ್ಥೆ ಜಾರಿಗೊಳಿಸಿ ಅಲ್ಲಿ ಕಂಡುಬರುವ ಲೋಪದೋಷಗಳನ್ನು ಸರಿಪಡಿಸಲಾಗುತ್ತದೆ. ತರುವಾಯ ಈ ಯೋಜನೆ ತಾಂತ್ರಿಕವಾಗಿ ಪಕ್ಕಾ ಆಗಿದೆ ಎಂಬುದು ಖಚಿತವಾದ ಮೇಲೆ ಇಡೀ ದೇಶದಲ್ಲಿ ಇದನ್ನು ಪರಿಚಯಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ.





ಈ ಮೊದಲು ಮೈಸೂರಿನಿಂದ ಬೆಂಗಳೂರಿಗೆ ಎಕ್ಸ್‌ಪ್ರೆಸ್ ಹೈವೆ ಟೋಲ್ ಪ್ಲಾಜಾ ದಾಟಿದರೆ ಸಾಕು ಪೂರ್ಣ ಹಣ ಪಾವತಿ ಮಾಡಬೇಕಿತ್ತು. ಬಹಳಷ್ಟು ಸವಾರರು ಮಂಡ್ಯ ಸೇರಿದಂತೆ ಇತರೆಡೆ ಪ್ರಯಾಣ ಸೀಮಿತಗೊಳಿಸಿದರೂ ಪೂರ್ಣ ಹಣ ಪಾವತಿ ಮಾಡಬೇಕಿತ್ತು. ನಾವು ಕ್ರಮಿಸುವ 50 ಕಿಲೋ ಮೀಟರ್‌ಗೆ ಬೆಂಗಳೂರಿಗೆ ಹೋಗುವಷ್ಟು ಟೋಲ್ ಹಣ ಪಾವತಿಸಬೇಕೇ ಎಂದು ವಾಹನ ಸವಾರರು ಬೇಸರಿಸುತ್ತಿದ್ದರು, ಕಿರಿಕಿರಿ ಅನುಭವಿಸುತ್ತಿದ್ದರು. ಜಿಪಿಎಸ್ ಆಧಾರಿತ ಟೋಲ್ ಸಂಗ್ರಹದಿಂದ ವಾಹನ ಸವಾರರಿಗೆ ಹಣ ಉಳಿತಾಯವಾಗಲಿದೆ. ವಾಹನ ಸವಾರರು ಎಷ್ಟು ● 9ನೇ ಪುಟಕ್ಕೆ

KRS ಸುತ್ತಮುತ್ತ ಗಣಿಗಾರಿಕೆ ನಿಷಿದ್ಧ

● ಹೈಕೋರ್ಟ್ ವಿಭಾಗೀಯ ಪೀಠ ಮಹತ್ವದ ತೀರ್ಪು ● ವಿವಿಧ ನ್ಯಾಯಾಲಯಗಳಿಂದ ಅನುಮತಿ ಪಡೆದು ಮಾಡುತ್ತಿರುವ ಗಣಿಗಾರಿಕೆ ಸ್ಥಗಿತಕ್ಕೂ ಆದೇಶ





ಬೆಂಗಳೂರು, ಜ.8(ಕೆಎಂಶಿ)– ಕೃಷ್ಣರಾಜ ಸಾಗರ(ಕೆಆರ್‌ಎಸ್) ಅಣೆಕಟ್ಟೆ ಸುತ್ತಮುತ್ತ 20 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಗಣಿಗಾರಿಕೆ ನಿಷೇಧಿಸಿ ರಾಜ್ಯ ಹೈಕೋರ್ಟ್ ಇಂದಿಲ್ಲಿ ಆದೇಶ ಹೊರಡಿಸಿದೆ.

ಮೈಸೂರು ಮಹಾರಾಜರ ಆಡಳಿತದಲ್ಲಿ ದೂರದೃಷ್ಟಿಯಿಂದ ನಿರ್ಮಾಣಗೊಂಡಿರುವ ಅಣೆಕಟ್ಟೆಯನ್ನು ಸಂರಕ್ಷಿಸುವುದು ಎಲ್ಲರ ಆದ್ಯ ಕರ್ತವ್ಯ ಎಂದು ನ್ಯಾಯಾಲಯ ಹೇಳಿದೆ. ಮುಖ್ಯನ್ಯಾಯಮೂರ್ತಿ ಪ್ರಸನ್ನ ಬಿ. ವರಾಳೆ, ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರನ್ನೊಳಗೊಂಡ ವಿಭಾಗೀಯ ಪೀಠ, ಸಾರ್ವಜನಿಕ ಹಿತದೃಷ್ಟಿಯಿಂದ ಸ್ವಯಂಪ್ರೇರಿತವಾಗಿ ಅರ್ಜಿಯನ್ನು ಕೈಗೆತ್ತಿಕೊಂಡು ಗಣಿಗಾರಿಕೆ ಹಾಗೂ ಕ್ವಾರಿಯಿಂಗ್ ಸೇರಿದಂತೆ ಎಲ್ಲ ರೀತಿಯ ಗಣಿಗಾರಿಕೆಯನ್ನು ನಿಷೇಧಿಸಿ ಮಧ್ಯಂತರ ಆದೇಶ ಹೊರಡಿಸಿತು. ಕೃಷ್ಣರಾಜ ಸಾಗರ ಅಣೆಕಟ್ಟೆ ಈಗಾಗಲೇ ಸಂಕಷ್ಟದಲ್ಲಿದೆ. ಇಂತಹ ಸಂದರ್ಭದಲ್ಲಿ ಗಣಿಗಾರಿಕೆ ಹಾಗೂ ಸ್ಫೋಟ ನಡೆಸುವುದರಿಂದ ಜಲಾಶಯಕ್ಕೆ ಧಕ್ಕೆ ಆಗಲಿದೆ ಎಂದು ಅಭಿಪ್ರಾಯಪಟ್ಟಿದೆ.

ಅಣೆಕಟ್ಟು ಸಂರಕ್ಷಣೆಗೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ನೆರವು ನೀಡಲು ನೇಮಕಗೊಂಡಿದ್ದ ಹಿರಿಯ ವಕೀಲ ಆದಿತ್ಯ ಸೋಂಧಿ ಅವರ ವರದಿಯನ್ನೇ ಆಧಾರವಾಗಿಟ್ಟುಕೊಂಡು ಪೀಠ ಈ ಮಹತ್ತರ ಆದೇಶ ನೀಡಿತು. ಅಷ್ಟೇ ಅಲ್ಲದೆ, ವಿವಿಧ ನ್ಯಾಯಾಲಯಗಳಿಂದ ಅನುಮತಿ ಪಡೆದು ಯಾವುದೇ ರೀತಿಯ ● 6ನೇ ಪುಟಕ್ಕೆ

> “ಕೆಆರ್‌ಎಸ್ ಸುತ್ತಮುತ್ತ 20 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಗಣಿಗಾರಿಕೆ ನಿಷೇಧ ಮಾಡಿ ಹೈಕೋರ್ಟ್ ವಿಭಾಗೀಯ ಪೀಠ ಆದೇಶ ಅತ್ಯಂತ ಸೂಕ್ತವಾಗಿದೆ. ಇಂಥದ್ದೊಂದು ಮಹತ್ವದ ಆದೇಶವನ್ನು ನೀಡಿರುವ ನ್ಯಾಯಮೂರ್ತಿಗಳಾದ ಪಿ.ಬಿ.ವರಾಳೆ ಹಾಗೂ ಕೃಷ್ಣ ದೀಕ್ಷಿತ್ ಅವರಿಗೆ ಧನ್ಯವಾದಗಳು. ಕೆಆರ್‌ಎಸ್ ವ್ಯಾಪ್ತಿಯಲ್ಲಿ ಗಣಿಗಾರಿಕೆ ನಿಷೇಧ ಮಾಡಬೇಕೆಂಬ ನನ್ನ ಬಹುದಿನಗಳ ಹೋರಾಟಕ್ಕೆ ಮತ್ತಷ್ಟು ಬಲ ಬಂದಿದ್ದು, ನಾವು ಅಣೆಕಟ್ಟೆಯನ್ನು ಉಳಿಸಿಕೊಳ್ಳಬೇಕು.
> –ಸುಮಲತಾ ಅಂಬರೀಷ್, ಮಂಡ್ಯ ಸಂಸದೆ



ಕಂಪ್ಯೂಟರ್ ಆಪರೇಟರ್ ಆತ್ಮಹತ್ಯೆ: ಉಪ ತಹಸೀಲ್ದಾರ್ ಅಮಾನತು



ಶಿವಕುಮಾರ್

ನಂಜನಗೂಡು, ಜ.8– ನನ್ನ ಸಾವಿಗೆ ಉಪ ತಹಸೀಲ್ದಾರ್ ಅವರೇ ನೇರ ಕಾರಣ ಎಂದು ಡೆತ್‌ನೋಟ್ ಬರೆದಿಟ್ಟು ನಾಡ ಕಚೇರಿಯಲ್ಲೇ ಕಂಪ್ಯೂಟರ್ ಆಪರೇಟರ್ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಉಪ ತಹಶೀಲ್ದಾರ್ ಎನ್.ಪಿ.ಶಿವಕುಮಾರ್ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ.ಪ್ರಕಾಶ್ ಆದೇಶ ಹೊರಡಿಸಿದ್ದಾರೆ.

ಕಳೆದ ಹಲವಾರು ವರ್ಷಗಳಿಂದಲೂ ಹೊರಗುತ್ತಿಗೆ ಆಧಾರದ ಮೇಲೆ ಕಂಪ್ಯೂಟರ್ ಆಪರೇಟರ್ ಆಗಿ ಕೆಲಸ ಮಾಡಿಕೊಂಡಿದ್ದ ಪರಮೇಶ್ ಭಾನುವಾರ ಮಧ್ಯಾಹ್ನ 2 ಗಂಟೆ ಸಮಯದಲ್ಲಿ ಕಚೇರಿಯಲ್ಲಿಯೇ ವಿಷ ● 6ನೇ ಪುಟಕ್ಕೆ

ಎಕ್ಸೆಲ್ ಸಾಫ್ಟ್ ಮುಖ್ಯಸ್ಥರಾದ ಪ್ರೊ.ಎಂ.ಹೆಚ್.ಧನಂಜಯ ನಿಧನ



ಮೈಸೂರು, ಜ.8– ಮೈಸೂರಿನ ಎಕ್ಸೆಲ್ ಸಾಫ್ಟ್ ಟೆಕ್ನಾಲಜೀಸ್ ಹಾಗೂ ಎಕ್ಸೆಲ್ ಪಬ್ಲಿಕ್ ಸ್ಕೂಲ್ ಅಧ್ಯಕ್ಷರು ಮತ್ತು ಜೆಎಸ್‌ಎಸ್ ಮಹಾವಿದ್ಯಾಪೀಠದ ಸಲಹೆಗಾರರಾಗಿದ್ದ ಪ್ರೊ.ಎಂ.ಹೆಚ್.ಧನಂಜಯ (91 ವರ್ಷ) ಅವರು ವಯೋಸಹಜ ಅನಾರೋಗ್ಯದಿಂದ ಸೋಮವಾರ ಮಧ್ಯಾಹ್ನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನಿಧನರಾದರು.

ಇವರು ಪುತ್ರ ಸುಧನ್ವ ಧನಂಜಯ್ (ಎಕ್ಸೆಲ್ ಸಾಫ್ಟ್ ಎಂಡಿ ಹಾಗೂ ಎಕ್ಸೆಲ್ ಪಬ್ಲಿಕ್ ಸ್ಕೂಲ್ ಕಾರ್ಯದರ್ಶಿ), ಸೊಸೆ ಲಜ್ವತಿ ಸುಧನ್ವ, ಮೊಮ್ಮಗಳು ಶ್ರುತಿ ಸುಧನ್ವ, ಆದರ್ಶ ಸುಧೀಂದ್ರ(ಶ್ರುತಿ ಪತಿ), ಮರಿಮಕ್ಕಳಾದ ಅಕ್ಷಜ್ ಆದರ್ಶ ಹಾಗೂ ಅಕ್ಷರ ಆದರ್ಶ ಸೇರಿದಂತೆ ಅಪಾರ ಬಂಧು–ಬಳಗ ಹಾಗೂ ಮಿತ್ರರನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಸೋಮವಾರ ರಾತ್ರಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ನಗರದ ದಟ್ಟಗಳ್ಳಿ, 3ನೇ ಹಂತದಲ್ಲಿರುವ 'ಸುಕನ್ಯ' ನಿವಾಸದಲ್ಲಿ ಪ್ರೊ.ಎಂ.ಹೆಚ್.ಧನಂಜಯ ಅವರ ಸ್ನೇಹಿತರು, ಸಂಬಂಧಿಕರು, ಎಕ್ಸೆಲ್ ಸಾಫ್ಟ್ ಟೆಕ್ನಾಲಜೀಸ್ ಹಾಗೂ ಶಾಲೆಯ ಉದ್ಯೋಗಿಗಳು ಸೇರಿದಂತೆ ನೂರಾರು ಮಂದಿ ಅಂತಿಮ ದರ್ಶನ ಪಡೆದರು.

ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಧನಂಜಯರ ಸ್ಮರಣೀಯ ಸೇವೆ
■ ಪುಟ–4

ನಟ ಯಶ್ ಕಟೌಟ್ ನಿಲ್ಲಿಸುವಾಗ ಮೂವರು ಅಭಿಮಾನಿಗಳು ವಿದ್ಯುತ್ ಸ್ಪರ್ಶದಿಂದ ಸಾವು

● ಮೃತರ ಕುಟುಂಬಕ್ಕೆ ತಲಾ 2 ಲಕ್ಷ ರೂ., ಗಾಯಾಳುಗಳಿಗೆ 50 ಸಾವಿರ ರೂ. ಪರಿಹಾರ ಘೋಷಿಸಿದ ಸರ್ಕಾರ ● ಅಗಲಿದ ಅಭಿಮಾನಿಗಳ ಮನೆಗೆ ಭೇಟಿ ನೀಡಿ ಸಂತ್ರಸ್ತರಿಗೆ ಸಾಂತ್ವನ ಹೇಳಿದ ಯಶ್

ಗದಗ: ರಾಕಿಂಗ್ ಸ್ಟಾರ್ ಯಶ್ ಹುಟ್ಟುಹಬ್ಬದ ಪ್ರಯುಕ್ತ ತಮ್ಮ ಊರಿನ ಬೀದಿಯಲ್ಲಿ ಬೃಹತ್ ಕಟೌಟ್ ಕಟ್ಟುವಾಗ ವಿದ್ಯುತ್ ತಂತಿ ತಗುಲಿ ಮೂವರು ಯುವಕರು ಘೋರ ದುರ್ಮರಣಕ್ಕೀಡಾಗಿದ್ದಾರೆ. ಈ ಘಟನೆ ಗದಗ ಜಿಲ್ಲೆಯ ಸೂರಣಗಿ ಗ್ರಾಮದಲ್ಲಿ ನಡೆದಿದ್ದು, ಅಲ್ಲಿ ಸೂತಕದ ಛಾಯೆ ಆವರಿಸಿದೆ.

ದುರಂತದಲ್ಲಿ ಗ್ರಾಮದ ಹಣಮಂತ ಹರಿಜನ, ಮುರಳಿ ನಡುವಿನಮನಿ ಮತ್ತು ನವೀನ್ ಅಸುನೀಗಿದವರು. ನಿನ್ನೆ ರಾತ್ರಿ ತಮ್ಮ ನೆಚ್ಚಿನ ನಟ ಯಶ್ ಹುಟ್ಟುಹಬ್ಬದ ● 6ನೇ ಪುಟಕ್ಕೆ



ಮೈಸೂರು ಪೊಲೀಸ್ ಬ್ಯಾಂಡ್ ಹೌಸ್ ಪಾರಂಪರಿಕ ಕಟ್ಟಡ

ನವೀಕರಣ ಕಾಮಗಾರಿ ಪೂರ್ಣ

● ಜ. 22ರ ನಂತರ ಉದ್ಘಾಟನೆ; ಕರ್ನಾಟಕ ಪೊಲೀಸ್ ಬ್ಯಾಂಡ್ ಮ್ಯೂಸಿಯಂ ಆಗಿ ಪರಿವರ್ತನೆ; ಸಾರ್ವಜನಿಕರ ವೀಕ್ಷಣೆಗೆ ಮುಕ್ತ
● ಬ್ಯಾಂಕ್ ನೋಟ್ ಪೇಪರ್ ಮಿಲ್ ಇಂಡಿಯಾ ಪ್ರೈ.ಲಿ. ಪ್ರಾಯೋಜಕತ್ವದಲ್ಲಿ ಯಶಸ್ವಿ ಸಂರಕ್ಷಣಾ ಕಾರ್ಯ

ಅಪರೂಪದ ಸಂಗೀತ ಸಲಕರಣೆಗಳು

ಪ್ರಸ್ತುತ ಮೌಂಟೆಡ್ ಕಂಪನಿಯಲ್ಲಿರುವ ಅಪರೂಪದ ಹಳೇ ಸಂಗೀತ ಪರಿಕರಗಳನ್ನು ನವೀಕೃತ ಪೊಲೀಸ್ ಬ್ಯಾಂಡ್ ಹೌಸ್‌ಗೆ ಸ್ಥಳಾಂತರಿಸಲಾಗುವುದು. ಕ್ಲಾರಿನೋನೆಟ್ಸ್, ಪಿಕೊಲೋ, ಕೊಳಲು, ಓಬಾಯ್, ಬಾಸೂನ್, ಸ್ಯಾಕ್ಸೋಫೋನ್, ಟ್ರಂಪೆಟ್‌ಗಳು, ಫ್ರೆಂಚ್ ಹಾರ್ನ್, ಸರ್ಕಲ್ ಬೇಸ್, ಯುಫೋನಿಯಂ, ಟ್ರಾಂಬೋನ್, ಡ್ರಮ್‌ಗಳು ಅಪರೂಪದ ಸಲಕರಣೆಗಳಾಗಿವೆ. ಪೊಲೀಸ್ ಬ್ಯಾಂಡ್ ಘಟಕವೂ ಸಹ ಕೆಲ ಸಂಗೀತ ಸಲಕರಣೆಗಳನ್ನು ಸಂಗ್ರಹಿಸಿದೆ. ಆ ಪೈಕಿ ಪಿಯಾನೋ, ವಯಲಿನ್. ವಯೊಲಾ, ಸೆಲ್ಲೋ, ಡಬಲ್ ಬೇಸ್, ಹಾರ್ಪ್, ಬೇಸ್–ಸ್ಯಾಕ್ಸೋಫೋನ್, ಹಾರ್ನ್ ಸೆಲ್ಲೋ, ಟ್ಯೂಬುಲಾರ್–ಬೆಲ್‌ಗಳು, ಡೀಗನ್, ಆರ್ಗನ್ ಪೈಪ್ಸ್, ಅಕಾರ್ಡಿಯನ್, ಗ್ಲೋಕನಸ್ಪಯಲ್, ಗ್ಸೈಲೊಫೋನ್‌ಗಳಂತಹ ಇನ್‌ಸ್ಟ್ರುಮೆಂಟ್‌ಗಳನ್ನೂ ಸಂರಕ್ಷಿಸಲಾಗಿದ್ದು, ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಗುತ್ತಿದೆ.



● ಎಸ್.ಟಿ.ರವಿಕುಮಾರ್

ಮೈಸೂರು, ಜ. 8– ಶಿಥಿಲಾವಸ್ಥೆಯಲ್ಲಿದ್ದ ಮೈಸೂರಿನ ನಜರ್‌ಬಾದ್‌ನ ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿ ಆವರಣದಲ್ಲಿರುವ ಬ್ಯಾಂಡ್ ಹೌಸ್ ಪಾರಂಪರಿಕ ಕಟ್ಟಡದ ನವೀಕರಣ ಕಾಮಗಾರಿ ಪೂರ್ಣಗೊಂಡಿದ್ದು, ಉದ್ಘಾಟನೆಗೆ ಸಿದ್ಧವಾಗಿದೆ.

ನವೀಕೃತ ಬ್ಯಾಂಡ್ ಹೌಸ್ ಅನ್ನು ಕರ್ನಾಟಕ ಪೊಲೀಸ್ ಬ್ಯಾಂಡ್ ಮ್ಯೂಸಿಯಂ ಆಗಿ ಪರಿವರ್ತಿಸಿ ಲಲಿತ ಮಹಲ್ ರಸ್ತೆಯ ಮೌಂಟೆಡ್ ಪೊಲೀಸ್ ಪಡೆ ಕಟ್ಟಡದಲ್ಲಿರುವ ಸಂಗೀತ ಪರಿಕರಗಳನ್ನು ಇಲ್ಲಿರಿಸಿ ಸಾರ್ವಜನಿಕರಿಗೆ ವರ್ಷವಿಡೀ ವೀಕ್ಷಿಸಲು ಮುಕ್ತ ಅವಕಾಶ ನೀಡಲು ಉದ್ದೇಶಿಸಲಾಗಿದೆ. ಅಲ್ಲದೇ ಮೈಸೂರಿಗೆ ಬರುವ ಪ್ರವಾಸಿಗರನ್ನೂ ಸಂಗ್ರಹಾಲಯಕ್ಕೆ ಆಕರ್ಷಿಸಲು ತೀರ್ಮಾನಿಸಲಾಗಿದೆ. ಮೈಸೂರು ಅರಮನೆ ಸಂಗೀತ ಕಾರ್ಯಕ್ರಮ (ಆರ್ಕೆಸ್ಟ್ರಾ)ಗಳಿಗಾಗಿ 1920ರಲ್ಲಿ ನಿರ್ಮಿಸಿದ್ದ ಬ್ಯಾಂಡ್ ಹೌಸ್ ಕಟ್ಟಡಕ್ಕೆ 103 ವರ್ಷ. ಓಪನ್ ಬಾಲ್ಕನಿ, ಮಂಗಳೂರು ಹೆಂಚು, ಛಾವಣಿಯಿಂದ ಕೂಡಿದ ಕಟ್ಟಡದಲ್ಲಿ ಕಾಲ ಕ್ರಮೇಣ ಮೈಸೂರು ನಗರ ಪೊಲೀಸ್ ಆಯುಕ್ತರ ● 9ನೇ ಪುಟಕ್ಕೆ

> “ನಮ್ಮ ಕಚೇರಿ ಆವರಣದಲ್ಲಿರುವ ಹಳೇ ಬ್ಯಾಂಡ್ ಹೌಸ್ ಪಾರಂಪರಿಕ ಕಟ್ಟಡವನ್ನು ಬ್ಯಾಂಕ್ ನೋಟ್ ಪೇಪರ್ ಮಿಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಪ್ರಾಯೋಜಕತ್ವದಲ್ಲಿ ನವೀಕರಿಸಲಾಗಿದ್ದು, ಜನವರಿ 22ರ ನಂತರ ಉದ್ಘಾಟಿಸಲಾಗುವುದು. ಪಾರಂಪರಿಕ ಇಲಾಖೆಯವರು ಇಷ್ಟರಲ್ಲೇ ನವೀಕೃತ ಕಟ್ಟಡವನ್ನು ನಮಗೆ ಹಸ್ತಾಂತರಿಸಲಿದ್ದು, ನಂತರ ಆ ಕಟ್ಟಡದಲ್ಲಿ ಖಾಯಂ ಆಗಿ ಕರ್ನಾಟಕ ಪೊಲೀಸ್ ಸಂಗೀತ ಪರಿಕರಗಳನ್ನು ಪ್ರದರ್ಶಿಸಿ, ಸಾರ್ವಜನಿಕರ ವೀಕ್ಷಣೆಗೆ ಮುಕ್ತಗೊಳಿಸುವ ಉದ್ದೇಶವಿದೆ. ಮೈಸೂರಿಗೆ ಬರುವ ಪ್ರವಾಸಿಗರಿಗೂ ಮ್ಯೂಸಿಯಂ ಮುಕ್ತಗೊಳಿಸುವ ಚಿಂತನೆ ಇದೆ.
> – ಬಿ.ರಮೇಶ್, ಮೈಸೂರು ಪೊಲೀಸ್ ಆಯುಕ್ತ



ಮುಂದಿನ ತಿಂಗಳಿಂದ ಶಾಲಾ ಮಕ್ಕಳಿಗೆ 'ರಾಗಿ ಮಾಲ್ಟ್'

● ವಾರದಲ್ಲಿ 2 ದಿನ ಮೊಟ್ಟೆ
● ಶಿಕ್ಷಣ ಸಚಿವರ ಮಾಹಿತಿ





ಮಡಿಕೇರಿ, ಜ.8–ಸರ್ಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳಿಗೆ ಮುಂದಿನ ತಿಂಗಳಿಂದ ರಾಗಿ ಮಾಲ್ಟ್ ನೀಡಲು ಚಿಂತಿಸಲಾಗಿದೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಪೊನ್ನಂಪೇಟೆ ಪ್ರವಾಸಿ ಮಂದಿರದಲ್ಲಿ ಸೋಮವಾರ 17 ವರ್ಷದೊಳಗಿನ ಬಾಲಕಿಯರ ರಾಷ್ಟ್ರಮಟ್ಟದ ಹಾಕಿ ಪಂದ್ಯಾವಳಿಯ ಸಮಾರೋಪದಲ್ಲಿ ಮಾತನಾಡಿದ ಸಚಿವರು, ಈಗಾಗಲೇ ವಾರದಲ್ಲಿ ಒಂದು ದಿನ ಮೊಟ್ಟೆ ವಿತರಿಸಲಾಗುತ್ತಿದ್ದು, ಅದನ್ನು ಎರಡು ದಿನಕ್ಕೂ ಹೆಚ್ಚಿಸಲಾಗುವುದು. ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಹಲವು ಸಮಸ್ಯೆಗಳಿದ್ದು, ಅವುಗಳನ್ನು ಹಂತ ಹಂತವಾಗಿ ಬಗೆಹರಿಸಲಾಗುತ್ತಿದೆ. 13 ಸಾವಿರ ಶಿಕ್ಷಕರ ನೇಮಕಾತಿಗೆ ಅಗತ್ಯ ಕ್ರಮ ವಹಿಸಲಾಗಿದೆ. 37 ಸಾವಿರ ಶಿಕ್ಷಕರನ್ನು ಕೌನ್ಸೆಲಿಂಗ್ ಮೂಲಕ ವರ್ಗಾವಣೆಗೆ ಅಗತ್ಯ ಕ್ರಮ ವಹಿಸಲಾಗಿದೆ ಎಂದು ಹೇಳಿದರು. ● 9ನೇ ಪುಟಕ್ಕೆ

ಜಿಲ್ಲಾಧಿಕಾರಿ ಡಾ.ರಾಜೇಂದ್ರರಿಂದ ಇವಿಎಂ ಕಾರ್ಯನಿರ್ವಹಣೆ ಪ್ರಾತ್ಯಕ್ಷಿಕೆಗೆ ಚಾಲನೆ



ವಿದ್ಯುನ್ಮಾನ ಮತಯಂತ್ರ ಹಾಗೂ ವಿವಿ ಪ್ಯಾಟ್‌ಗಳ ಕಾರ್ಯನಿರ್ವಹಣೆ ಬಗ್ಗೆ ಜನರಿಗೆ ಅರಿವು ಮೂಡಿಸಲು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೋಮವಾರ ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ತಮ್ಮ ಕಚೇರಿಯಲ್ಲಿ ಪ್ರಾತ್ಯಕ್ಷಿಕೆಗೆ ಚಾಲನೆ ನೀಡಿದರು.

ಮೈಸೂರು, ಜ. 8(ಆರ್‌ಕೆ)–ಮುಂಬರುವ ಲೋಕಸಭಾ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ವಿದ್ಯುನ್ಮಾನ ಮತಯಂತ್ರ (ಇವಿಎಂ) ಹಾಗೂ ವಿವಿ ಪ್ಯಾಟ್‌ಗಳ ಕಾರ್ಯನಿರ್ವಹಣೆ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೋಮವಾರ ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ತಮ್ಮ ಕಚೇರಿಯಲ್ಲಿ ಪ್ರಾತ್ಯಕ್ಷಿಕೆಗೆ ಚಾಲನೆ ನೀಡಿದರು.

ಹೊಸದಾಗಿ ತರಿಸಿರುವ ಇವಿಎಂ ಮತ್ತು ವಿವಿ ಪ್ಯಾಟ್ ಮತಯಂತ್ರಗಳ ಕಾರ್ಯವೈಖರಿ, ನಿಖರತೆ, ಅವುಗಳನ್ನು ಮತದಾರರು ಬಳಸುವ ರೀತಿ, ವಿವಿ ಪ್ಯಾಟ್‌ನಲ್ಲಿ ಮತ ಚಲಾಯಿಸಿದ ಅಭ್ಯರ್ಥಿಯ ಖಾತರಿ ರಶೀದಿ ಗೋಚರಿಸುವ ಬಗ್ಗೆ ಪ್ರಾತ್ಯಕ್ಷಿಕೆ ನೀಡಲಾಗುವುದು ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ನಿರಂತರವಾಗಿ ಮತಯಂತ್ರಗಳನ್ನಿರಿಸಿ ಅಲ್ಲಿಗೆ ಸಿಬ್ಬಂದಿ ನೇಮಿಸಿ ಜಾಗೃತಿ ಮೂಡಿಸಲು ವ್ಯವಸ್ಥೆ ಮಾಡಲಾಗಿದೆಯಲ್ಲದೇ, ಮುಂದೆ ನೇಮಿಸ ಲಾಗುವ ಸೆಕ್ಟರ್ ಅಧಿಕಾರಿಗಳು ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಎಲ್ಲಾ ಮತಗಟ್ಟೆಗಳಲ್ಲೂ ಇವಿಎಂ ಕಾರ್ಯನಿರ್ವಹಿಸುವ ಹಾಗೂ ಬಳಸುವ ಕುರಿತು ಪ್ರಾತ್ಯಕ್ಷಿಕೆ ಮೂಲಕ ಮತದಾರರಿಗೆ ಅರಿವು ಮೂಡಿಸಲಾಗುವುದು ಎಂದರು.

ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪ್ರಾತ್ಯಕ್ಷಿಕೆಯಲ್ಲಿ ಭಾಗವಹಿಸಿ ಇವಿಎಂ ಮತ್ತು ವಿವಿ ಪ್ಯಾಟ್ ಯಂತ್ರಗಳ ಬಳಕೆ, ಸಂಶಯಗಳ ಪರಿಹಾರದ ಬಗ್ಗೆ ತಿಳಿದುಕೊಳ್ಳಬೇಕೆಂದೂ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್, ಚುನಾವಣಾ ಶಿರಸ್ತೇದಾರ ಸುರೇಶ್ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಜಾಗೃತಿ ಮೂಡಿಸಿ ಮತದಾನದ ಪ್ರಮಾಣ ಹೆಚ್ಚಿಸಿ

ಮೈಸೂರಲ್ಲಿ ಸ್ವೀಪ್ ಅಧಿಕಾರಿಗಳಿಗೆ ಅಪರ ಮುಖ್ಯ ಚುನಾವಣಾಧಿಕಾರಿ ಕೂರ್ಮರಾವ್ ಸೂಚನೆ



ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಸ್ವೀಪ್ ಸಮಿತಿ ಅಧಿಕಾರಿಗಳ ಸಭೆಯಲ್ಲಿ ರಾಜ್ಯ ಅಪರ ಮುಖ್ಯ ಚುನಾವಣಾಧಿಕಾರಿ ಕೂರ್ಮರಾವ್ ಮಾತನಾಡಿದರು. ಜಿಲ್ಲಾ ಸ್ವೀಪ್ ಸಮಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ನಗರಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಶರೀಫ್ ಇನ್ನಿತರರು ಚಿತ್ರದಲ್ಲಿದ್ದಾರೆ.

ಮೈಸೂರು, ಜ. 8(ಆರ್‌ಕೆ)– ಜಾಗೃತಿ ಮೂಡಿಸುವ ಮೂಲಕ ಲೋಕಸಭಾ ಚುನಾವಣೆಯಲ್ಲಿ ಮತದಾನದ ಪ್ರಮಾಣ ಹೆಚ್ಚಳ ಮಾಡಲು ಸಹಕರಿಸುವಂತೆ ರಾಜ್ಯ ಅಪರ ಮುಖ್ಯ ಚುನಾವಣಾಧಿಕಾರಿ ಕೂರ್ಮರಾವ್ ಇಂದಿಲ್ಲಿ ಸ್ವೀಪ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸ್ವೀಪ್ ಸಮಿತಿ ಅಧಿಕಾರಿಗಳ ಸಭೆ ನಡೆಸಿದ ಅವರು, ಕಳೆದ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಕಡಿಮೆ ಮತದಾನವಾಗಿರುವ ಕ್ಷೇತ್ರಗಳನ್ನು ಗುರ್ತಿಸಿ ಅಲ್ಲಿ ಸ್ವೀಪ್ ಚಟುವಟಿಕೆಗಳನ್ನು ಹೆಚ್ಚಿಸಬೇಕು, ಸಾಮಾನ್ಯವಾಗಿ ನಗರ ಪ್ರದೇಶದಲ್ಲಿ ಅತೀ ಕಡಿಮೆ ಮತದಾನವಾಗುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಅರಿವು ಮೂಡಿಸಿ ಎಂದರು.

ಸಾಕ್ಷರತಾ ಕ್ಲಬ್ ಮಾಡಿಕೊಂಡು ಯುವ ಹಾಗೂ ಪ್ರಥಮ ಬಾರಿ ಮತದಾರರನ್ನು ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕು. ವಲಸಿಗರಿದ್ದರೆ, ಅವರಿರುವ ಸ್ಥಳಕ್ಕೆ ನಮೂನೆ–8 ಅನ್ನು ತಲುಪಿಸಿ ಅಲ್ಲಿಗೆ ಹೆಸರು ಸ್ಥಳಾಂತರಿಸಿಕೊಳ್ಳುವಂತೆ ಮಾಡಿ ಎಂದರು. ಈ ಸಂದರ್ಭ ಮಾಹಿತಿ ನೀಡಿದ ಜಿಲ್ಲಾ ಸ್ವೀಪ್ ಸಮಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ. ಗಾಯತ್ರಿ, ಜಿಲ್ಲಾದ್ಯಂತ ಶಾಲಾ–ಕಾಲೇಜುಗಳಲ್ಲಿ ಚುನಾವಣಾ ಸಾಕ್ಷರತಾ ಕ್ಲಬ್ ಮಾಡಿ ಮತದಾರ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದರು.

ಅಲ್ಲಲ್ಲಿ ಕಾಲ್ನಡಿಗೆ ಜಾಥಾ, ಪ್ರಬಂಧ, ಚಿತ್ರ ಸ್ಪರ್ಧೆ, ಭಾಷಣ ಸ್ಪರ್ಧೆ, ಬೀದಿ ನಾಟಕಗಳನ್ನು ಏರ್ಪಡಿಸಿ ಜನಸಂದಣಿ ಸ್ಥಳಗಳಲ್ಲಿ ಮತದಾನದಿಂದ ಸದೃಢ ಪ್ರಜಾಪ್ರಭುತ್ವ ವ್ಯವಸ್ಥೆ ನಿರ್ಮಿಸುವ ಬಗ್ಗೆ ಪ್ರಚುರಪಡಿಸಲಾಗುತ್ತಿದೆ ಎಂದು ತಿಳಿಸಿದರು.

> “ಮತದಾನದ ಮಹತ್ವ ಕುರಿತು ಜನರ ಮನಸ್ಸಿಗೆ ನಾಟುವಂತಹ ಕಿರುಚಿತ್ರ ಪ್ರದರ್ಶನ, ಬೀದಿ ನಾಟಕ, ಜಾನಪದ ಕಲಾ ರೂಪದಲ್ಲಿ ಅರಿವು ಮೂಡಿಸಬೇಕಾಗಿದೆ. ಪ್ರತೀ ಹೋಬಳಿ ಮಟ್ಟದಲ್ಲಿ ಕಾರ್ಯಕ್ರಮ ಆಯೋಜಿಸಿ ಈ ಬಾರಿ ಮತದಾನದ ಪ್ರಮಾಣ ಹೆಚ್ಚಿಸಿ.
> –ಕೂರ್ಮರಾವ್, ರಾಜ್ಯ ಅಪರ ಮುಖ್ಯ ಚುನಾವಣಾಧಿಕಾರಿ

ಧನಗಹಳ್ಳಿಯಲ್ಲಿ ಮನೆ ಮನೆಗೆ ಮಂತ್ರಾಕ್ಷತೆ



ಮೈಸೂರು,ಜ.8–ಅಂಯೋಧ್ಯೆಯಲ್ಲಿ ಶ್ರೀರಾಮಮಂದಿರ ನಿರ್ಮಾಣವಾಗುತ್ತಿರುವ ಹಿನ್ನೆಲೆಯಲ್ಲಿ ಮೈಸೂರು ತಾಲೂಕು, ಜಯಪುರ ಹೋಬಳಿ, ಧನಗಹಳ್ಳಿ ಗ್ರಾಮದಲ್ಲಿ ಶ್ರೀರಾಮನ ಫೋಟೋ, ಕುಂಕುಮ, ಮಂತ್ರಾಕ್ಷತೆಯನ್ನು ಪ್ರತಿ ಮನೆಗೂ ತಲುಪಿಸುವ ಮೂಲಕ ಚಾಲನೆಗೊಳಿಸಲಾಯಿತು.

ಈ ವೇಳೆ ಮಾತನಾಡಿದ ಮೈಸೂರು ಕೆ.ಆರ್ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ, ಶ್ರೀರಾಮಮಂದಿರದಲ್ಲಿ ಪ್ರತಿಷ್ಠಾಪನೆಗೆ ತಯಾರಾಗಿರುವ ರಾಮನ ವಿಗ್ರಹಕ್ಕೆ ಬಳಸಲಾಗಿರುವ ಕಲ್ಲು (ಶಿಲೆ) ನಮ್ಮ ಮೈಸೂರು ತಾಲೂಕು ಜಯಪುರ ಹೋಬಳಿಯ ಹಾರೋಹಳ್ಳಿ ಗ್ರಾಮದ ರಾಮದಾಸ್‌ರವರ ಜಮೀನಿನಲ್ಲಿದ್ದು, ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅವರು ಆ ಶಿಲೆಯಲ್ಲಿ ಶ್ರೀರಾಮನನ್ನು ಮೂಡಿಸಿರುವುದು ನಮ್ಮೆಲ್ಲರ ಹೆಮ್ಮೆ ಎಂದರು.

ಜನವರಿ 22ರಂದು ಉದ್ಘಾಟನೆಗೊಳ್ಳಲಿರುವ ಅಂಯೋಧ್ಯೆಯ ಶ್ರೀರಾಮ ಮಂದಿರದ ಪ್ರಯುಕ್ತ ಅಂದು ಎಲ್ಲರೂ ಪ್ರತಿ ಮನೆಗಳಲ್ಲಿ ದೀಪ ಬೆಳಗಿಸುವ ಮುಖಾಂತರ ರಾಮನ ಅನುಗ್ರಹಕ್ಕೆ ಭಾಗಿಯಾಗೋಣ ಎಂದು ಹೇಳಿದರು.

ಈ ಸಂದರ್ಭದಲ್ಲಿ ರಾಮಭಕ್ತರಾದ ಮಲ್ಲಿಕಾರ್ಜುನ್, ಪ್ರಸನ್ನಕುಮಾರ್, ಗೆಜ್ಜಗಳ್ಳಿ ಮಹೇಶ್, ಸುನೀಲ್ ದಾರಿಪುರ ಮತ್ತು ಗ್ರಾಮಸ್ಥರು ಪಾಲ್ಗೊಂಡಿದ್ದರು.

ನಾಳೆ ಕಾನೂನು–ಅರಿವು ಕಾರ್ಯಕ್ರಮ



ಗೋಷ್ಠಿಯಲ್ಲಿ ಮಾನವ ಹಕ್ಕುಗಳ ರಕ್ಷಣಾ ಸಮಿತಿ ಅಧ್ಯಕ್ಷೆ ಸುಶೀಲ ಮಾತನಾಡಿದರು.

ಮೈಸೂರು,ಜ.8(ಎಂಟಿವೈ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಜ.10ರಂದು ಬೆಳಗ್ಗೆ 11.30ಕ್ಕೆ ಕಾನೂನು ಅರಿವು ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿಯ ಅಧ್ಯಕ್ಷೆ ವಿ.ಪಿ.ಸುಶೀಲ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾನೂನು ಅರಿವು ಕಾರ್ಯಕ್ರಮವನ್ನು ಹಿರಿಯ ಸಿವಿಲ್ ನ್ಯಾಯಾಧೀಶರಾದ ಬಿ.ಜಿ. ದಿನೇಶ್ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿಯ ಅಧ್ಯಕ್ಷೆ ವಿ.ಪಿ.ಸುಶೀಲ ವಹಿಸಲಿದ್ದಾರೆ, ಮುಖ್ಯ ಅತಿಥಿಗಳಾಗಿ ಕೆ.ಆರ್.ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ.ಹೆಚ್.ಪಿ. ಶೋಭಾ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಯೊಂದಿಗೆ ವಿಕಲಚೇತನರೊಬ್ಬರಿಗೆ ವ್ಹೀಲ್‌ಚೇರ್ ನೀಡಲಾಗುತ್ತಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿಯ ಎಂ.ಪುಟ್ಟರಾಜು, ಅಮೀನಾ ಬೇಗಂ, ಮೊಹಮದ್ ಹಶ್ರಫ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ಜಿಲ್ಲೆಯ ಪದವಿಪೂರ್ವ ಶಿಕ್ಷಣ ಇಲಾಖೆಯ ಬೋಧಕೇತರ ನೌಕರರ ಸಂಘದ ವತಿಯಿಂದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಡಾ.ಟಿ.ಆರ್.ಸಿದ್ದರಾಜು, ಲಯನ್ ಸಿ.ಆರ್.ದಿನೇಶ್, ಎಂ.ಎಂ.ಮಹದೇವ್, ನಂದೀಶ್ ಕುಮಾರ್, ಕಾಂತರಾಜ್, ಸಂಘದ ಅಧ್ಯಕ್ಷ ರಾಜಕುಮಾರ್, ಚಂದ್ರಮ್ಮ, ನಾಗಭೂಷಣ್, ಮುಕುಂದ್, ಕೃಪಾಕರ್, ಕಾಲೇಜಿನ ಪ್ರಾಂಶುಪಾಲ ರಾಕೇಶ್ ಉಪಸ್ಥಿತರಿದ್ದರು.

ನಿಧನ



ಶಂಕರನಾರಾಯಣ ರಾವ್

ಮೈಸೂರು, ಜ. 8– ಸಮಾಜ ಕಲ್ಯಾಣ ಇಲಾಖೆ ನಿವೃತ್ತ ಸೂಪರಿಂಟೆಂಡೆಂಟ್ ಹಾಗೂ ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆ ನಿವಾಸಿ ಶಂಕರನಾರಾಯಣ ರಾವ್ (96) ಭಾನುವಾರ ಬೆಳಗ್ಗೆ ವಯೋಸಹಜ ಕಾಯಿಲೆಯಿಂದ ನಿಧನರಾದರು. ಮೃತರು ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಇವರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಭಾನುವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಶ್ರೀಮತಿ ಎನ್.ಸರಸ್ವತಿ

ಮೈಸೂರಿನ ವಿಜಯನಗರ ಮೂರನೇ ಹಂತದ ನಿವಾಸಿ ಲೇಟ್ ಬಸವರಾಜು ಅವರ ಪತ್ನಿ ಶ್ರೀಮತಿ ಎನ್. ಸರಸ್ವತಿ (64) ನಿನ್ನೆ (ಭಾನುವಾರ) ಹೃದಯಾಘಾತದಿಂದ ಸ್ವಗೃಹದಲ್ಲಿ ನಿಧನರಾದರು. ಮೃತರು ಮಕ್ಕಳಾದ ಡಾ.ದೀಪಾ, ಆನಂದ್, ಅಳಿಯ ಪ್ರಕಾಶ್, ಮೊಮ್ಮಗ ಸಮೃದ್ಧ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆಂಚಲಗೂಡಲ್ಲಿ ಅಸ್ಪೃಶ್ಯತೆ ಆಚರಣೆ

ಮಾಜಿ ಮೇಯರ್ ಪುರುಷೋತ್ತಮ್ ಆರೋಪ



ಪುರುಷೋತ್ತಮ್

ಮೈಸೂರು,ಜ.8(ಎಂಟಿವೈ)– ಮೈಸೂರು ತಾಲೂಕಿನ ಕೆಂಚಲಗೂಡು ಗ್ರಾಮದಲ್ಲಿ ಅಸ್ಪೃಶ್ಯತೆ ಆಚರಿಸುತ್ತಿದ್ದು, ದಲಿತರು ಪ್ರವೇಶಿಸಿದರು ಎಂಬ ಕಾರಣದಿಂದ ಮುಜರಾಯಿ ಇಲಾಖೆಗೆ ಸೇರಿದ ದೇವಾಲಯಕ್ಕೆ ಪರ್ಯಾಯವಾಗಿ ದೇವಸ್ಥಾನ ನಿರ್ಮಿಸಿ, ದಲಿತರಿಗೆ ಪ್ರವೇಶ ನಿರಾಕರಿಸಲಾಗುತ್ತಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ಆರೋಪಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಂಚಲಗೂಡು ಗ್ರಾಮದಲ್ಲಿ ಮುಜರಾಯಿ ಇಲಾಖೆಗೆ ಸೇರಿದ ಲಕ್ಷ್ಮೀನಾರಾಯಣ ಸ್ವಾಮಿ ದೇವಾಲಯಕ್ಕೆ ದಲಿತರು ಪ್ರವೇಶಿಸಿದರು ಎಂಬ ಕಾರಣಕ್ಕೆ ಹೊಸ ದೇವಾಲಯ ನಿರ್ಮಿಸಲಾಗುತ್ತಿದೆ. ನೂತನ ದೇವಾಲಯದಲ್ಲಿ ಈ ಬಾರಿಯ ಸಂಕ್ರಾಂತಿ ವೇಳೆ ಉತ್ಸವ ಆಚರಿಸಲು ನಿರ್ಧರಿಸಲಾಗಿದ್ದು, ಅಸ್ಪೃಶ್ಯತೆ ಆಚರಣೆಗೆ ಕುಮ್ಮಕ್ಕು ನೀಡಲಾಗಿದೆ. ಹೀಗಾಗಿ ಜಿಲ್ಲಾಡಳಿತ, ಪೊಲೀಸ್ ಇಲಾಖೆ ಕೂಡಲೇ ಶಾಂತಿಸಭೆ ಕರೆದು ಪರಿಸ್ಥಿತಿ ತಿಳಿಗೊಳಿಸಬೇಕು ಎಂದು ಆಗ್ರಹಿಸಿದರು.

ಕೆಂಚಲಗೂಡು ಗ್ರಾಮದಲ್ಲಿ 150 ಕುಟುಂಬಗಳಿದ್ದು, ಅದರಲ್ಲಿ 4–5 ದಲಿತ ಸಮುದಾಯ ಕುಟುಂಬವಿದೆ. ಈ ಗ್ರಾಮದಲ್ಲಿ ಮೊದಲಿನಿಂದಲೂ ಅಸ್ಪೃಶ್ಯತೆ ಆಚರಣೆಯಲ್ಲಿದ್ದು, ದೇವಸ್ಥಾನಗಳಿಗೆ ದಲಿತರಿಗೆ ಪ್ರವೇಶ ಕಲ್ಪಿಸಬೇಕೆಂದು ಸಂಬಂಧಿಸಿದವರಿಗೆ ಮನವಿ ಸಲ್ಲಿಸಿದ ಕಾರಣ ಪ್ರವೇಶ ನೀಡಲಾಗಿತ್ತು. ಈ ಬಳಿಕ ಪ್ರಬಲ ಸಮುದಾಯದವರು ಆ ದೇವಸ್ಥಾನ ಬಂದ್ ಮಾಡಿ, ಬೇರೊಂದು ದೇವಸ್ಥಾನವನ್ನು ಸರ್ಕಾರಿ ಜಾಗದಲ್ಲಿ ನಿರ್ಮಿಸಿ, ಇಲ್ಲಿ ದಲಿತರಿಗೆ ಪ್ರವೇಶ ನೀಡದಿರಲು ನಿರ್ಧರಿಸಿದ್ದಾರೆ. ಹಿಂದೂ ನಾವೆಲ್ಲ ಒಂದು ಎನ್ನುವವರು ಇತ್ತ ಗಮನ ಹರಿಸಿಲ್ಲ. ಗ್ರಾಮದ ಪ್ರಬಲ ಸಮುದಾಯದವರ ನಿರ್ಧಾರ ಅಸ್ಪೃಶ್ಯತೆ ಆಚರಣೆಗೆ ಪುಷ್ಟಿ ನೀಡುತ್ತಿದ್ದು, ಕೂಡಲೇ ಶಾಂತಿಸಭೆ ನಡೆಸಿ, ಈ ಬಾರಿಯ ಸಂಕ್ರಾಂತಿ ವೇಳೆ ಅಸ್ಪೃಶ್ಯತೆ ಆಚರಣೆಯಾಗದಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ದಲಿತ ಸಮುದಾಯಗಳು ತೀವ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಮುದ್ದುರಾಜ್, ಜೆ. ಸ್ವಾಮಿ, ಚೆಲುವರಾಜ್, ಮಹದೇವಮ್ಮ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಜ.12ರಂದು ಬೃಹತ್ ರಕ್ತದಾನ ಶಿಬಿರ



ಮೈಸೂರು,ಜ.8–ಮೈಸೂರು ಶ್ರೀ ಜನಜಾಗರಣ ಟ್ರಸ್ಟ್, ರಕ್ತದಾನ್ ಮಹಾದಾನ್ ಗೋ ಭಕ್ತ ಸಂಘಟನ್ ಟ್ರಸ್ಟ್, ಸಾವರ್ಕರ್ ಪ್ರತಿಷ್ಠಾನದ ವತಿಯಿಂದ ರಾಷ್ಟ್ರೀಯ ಯುವ ದಿನದ ಅಂಗವಾಗಿ ಜ.12ರಂದು ಬೆಳಗ್ಗೆ 8.30ರಿಂದ ಮಧ್ಯಾಹ್ನ 2 ರವರೆಗೆ ಜೆಎಲ್‌ಬಿ ರಸ್ತೆಯಲ್ಲಿರುವ ಮಾಧವ ಕೃಪಾದಲ್ಲಿ ಬೃಹತ್ ರಕ್ತದಾನ ಶಿಬಿರ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 97409 29218, 93439 45256, 86602 19746 ಸಂಪರ್ಕಿಸಬಹುದು.

ಇಂದು ರಿಂಗ್ ರಸ್ತೆ ಸ್ವಚ್ಛತೆ ಬಗ್ಗೆ ಪ್ರತಾಪ್ ಸಿಂಹ ಸಭೆ



ಮೈಸೂರು,ಜ.8(ಬಿಎಲ್‌ಯು) ಮೈಸೂರಿನ ರಿಂಗ್ ರಸ್ತೆಯ ಸ್ವಚ್ಛತೆಗೆ ಸಂಬಂಧಿಸಿದಂತೆ ಸಂಸದ ಪ್ರತಾಪ್ ಸಿಂಹ ನಾಳೆ (ಜ.9) ಅಧಿಕಾರಿಗಳ ಸಭೆ ನಡೆಸಲಿದ್ದಾರೆ.

ಮೈಸೂರು ನಗರ ಪಾಲಿಕೆಯ ಶ್ರೀ ಜಯ ಚಾಮರಾಜೇಂದ್ರ ಒಡೆಯರ್ ಸಭಾಂಗಣದಲ್ಲಿ ನಾಳೆ ಬೆಳಗ್ಗೆ 10.30 ಗಂಟೆಗೆ ನಡೆಯುವ ಸಭೆಯಲ್ಲಿ ಮುಡಾ ಆಯುಕ್ತರು, ನಗರಪಾಲಿಕೆ ಆಯುಕ್ತರು, ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳು ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಮೈಸೂರು ಕುಶಾಲನಗರ (ಎನ್‌ಹೆಚ್–275), ಮೈಸೂರು ತಿ.ನರಸೀಪುರ ಹೆದ್ದಾರಿ (ಎನ್‌ಹೆಚ್–766) ಯೋಜನೆಗೆ ಸಂಬಂಧಿಸಿದಂತೆ ನಾಳೆ ಬೆಳಿಗ್ಗೆ 11.30 ಗಂಟೆಗೆ ಜಲದರ್ಶಿನಿ ಅತಿಥಿ ಗೃಹದಲ್ಲಿ ಪ್ರತಾಪ್ ಸಿಂಹ ಸಭೆ ನಡೆಸಲಿದ್ದಾರೆ.



ರೋಟರಿ ಮೈಸೂರು ಸೌತ್ ಈಸ್ಟ್ ಮತ್ತು ನಾರ್ತ್ ರೋಟರಿ ವೆಸ್ಟ್ ಹಾಲ್‌ನಲ್ಲಿ ಆಯೋಜಿಸಿದ್ದ ಜಿಲ್ಲಾಮಟ್ಟದ ಸಾಂಸ್ಕೃತಿಕ ಸ್ಪರ್ಧೆ ಕಾರ್ಯಕ್ರಮವನ್ನು ನಿಯೋಜಿತ ಜಿಲ್ಲಾ ಗವರ್ನರ್ ರಾಮಕೃಷ್ಣ(ರಾಂಕಿ) ಅವರು ಉದ್ಘಾಟಿಸಿದರು. ಜಿಲ್ಲಾ ಸಾಂಸ್ಕೃತಿಕ ಸಮಿತಿ ಕಾರ್ಯಾಧ್ಯಕ್ಷ ರಾಜಶೇಖರ ಕದಂಬ,ಮುರಳೀಧರ್, ಶ್ರೀಧರ್, ಎಂ.ಕೆ.ನಂಜಯ್ಯ, ಸತೀಶ್ ಬೋಳಾರ್, ಜಗದೀಶ್, ಗಿರೀಶ್ ಇತರರಿದ್ದಾರೆ.

ಹೊಸ ಪಿಂಚಣಿ ಯೋಜನೆ ರದ್ಧತಿಗಾಗಿ ಪ್ರತಿಭಟನೆ



ಹಳೆ ಪಿಂಚಣಿ ವ್ಯವಸ್ಥೆ ಮರು ಜಾರಿಗೆ ಆಗ್ರಹಿಸಿ ನೈರುತ್ಯ ರೈಲ್ವೆ ಮಜ್ದೂರ್ ಸಂಘದ ನೇತೃತ್ವದಲ್ಲಿ ನೌಕರರು ಪ್ರತಿಭಟಿಸಿದರು.

ಮೈಸೂರು,ಜ.8(ಎಂಟಿವೈ)– ಹೊಸ ಪಿಂಚಣಿ ಯೋಜನೆ(ಎನ್‌ಪಿಎಸ್) ರದ್ದುಪಡಿಸಿ, ಹಳೆ ಪಿಂಚಣಿ ಯೋಜನೆಯನ್ನೇ ಮುಂದುವರೆಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ನೈರುತ್ಯ ರೈಲ್ವೆ ನೌಕರರ ಸಂಘದ ಸದಸ್ಯರು ಪ್ರತಿಭಟನೆ ನಡೆಸಿದರು.

ಮೈಸೂರಿನ ರೈಲ್ವೆ ನಿಲ್ದಾಣದ ಸಮೀಪ ಡಿಆರ್‌ಎಂ ಕಚೇರಿ ಹಾಗೂ ಮಾನಂದವಾಡಿ ರಸ್ತೆಯಲ್ಲಿರುವ ರೈಲ್ವೆ ವರ್ಕ್‌ಶಾಪ್ ಬಳಿ ಎರಡು ಪ್ರತ್ಯೇಕ ಸ್ಥಳದಲ್ಲಿ ಉಪವಾಸ ಸತ್ಯಾಗ್ರಹ ನಡೆಸಿದ ರೈಲ್ವೆ ನೌಕರರು, 2004ರಲ್ಲಿ ಹಳೆಯ ಪಿಂಚಣಿ ಪದ್ಧತಿಯನ್ನು ರದ್ದುಗೊಳಿಸಿ ಹೊಸ ಪಿಂಚಣಿ ಜಾರಿಗೊಳಿಸಲಾಗಿದೆ. ಇದರಲ್ಲಿ ಪ್ರತಿ ತಿಂಗಳೂ ದೇಣಿಗೆ ನೀಡಿ ನಿವೃತ್ತಿಯ ಸಮಯದಲ್ಲಿ ಶೇ.60ರಷ್ಟನ್ನು ಹಿಂಪಡೆದು, ಉಳಿದ ಶೇ.40 ಅನ್ನು ಷೇರು ಮಾರುಕಟ್ಟೆಯಲ್ಲಿ ಹೂಡಿ, ಅದರಲ್ಲಿ ದೊರೆತ ಲಾಭದಿಂದ ಪಿಂಚಣಿ ಕೊಡಲಾಗುತ್ತಿದೆ. ಇದು ಮಾರುಕಟ್ಟೆ ಆಧಾರಿತವಾದ ಕಾರಣ ನಿಯಮಿತ ಪಿಂಚಣಿಯ ಖಾತ್ರಿ ಇದರಲ್ಲಿ ಇಲ್ಲ. ಹೀಗಾಗಿ ಇದು ನೌಕರರಿಗೆ ಹಿತವಾಗುತ್ತಿಲ್ಲ. ಬದಲಿಗೆ ಮಾರಕವಾಗಿದೆ ಎಂದು ಕಿಡಿಕಾರಿದರು. ಹಳೆ ಪಿಂಚಣಿ ವ್ಯವಸ್ಥೆಯನ್ನು ಮರು ಸ್ಥಾಪನೆ ಮಾಡಬೇಕು. ಈ ಮೂಲಕ ಸರ್ಕಾರಿ ನೌಕರರ ಹಿತ ಕಾಯಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಸಂಘಟನೆ ಮುಖಂಡರಾದ ಪಿ.ಶಿವಪ್ರಕಾಶ್, ಸೋಮಶೇಖರ್, ವಿ.ಅಶೋಕ್‌ಕುಮಾರ್, ಎಂ. ನಾಗೇಶ್ ಇನ್ನಿತರರು ಪಾಲ್ಗೊಂಡಿದ್ದರು.

ಪ್ರಾಸ್ಟೇಟ್ ಗ್ರಂಥಿಯ ತಪಾಸಣಾ ಶಿಬಿರ

ಮೈಸೂರು,ಜ.8–ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಜ.13ರವರೆಗೆ ಪ್ರಾಸ್ಟೇಟ್ ಗ್ರಂಥಿಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಯುರಾಲಜಿಸ್ಟ್ ಆದ ಡಾ.ಮಂಜುನಾಥ್ ಯು.ಎನ್ ನೇತೃತ್ವದಲ್ಲಿ ಈ ಶಿಬಿರ ನಡೆಯಲಿದೆ. ಈ ಶಿಬಿರದಲ್ಲಿ ಮೂತ್ರ ವಿಸರ್ಜನೆಯಲ್ಲಿ ತೊಂದರೆ, ಕಡಿಮೆ ಮೂತ್ರ, ಮೂತ್ರಕಟ್ಟಿಕೊಳ್ಳುವುದು, ರಾತ್ರಿಯಲ್ಲಿ ಆಗಾಗ್ಗೆ ಮೂತ್ರ ವಿಸರ್ಜನೆ, ಮೂತ್ರ, ವೀರ್ಯದಲ್ಲಿ ರಕ್ತ, ಅಸಹಜವಾದ ಗಂಟು ಹಾಗೂ ಲೈಂಗಿಕ ಅಸ್ವಸ್ಥತೆ ಈ ಸಮಸ್ಯೆಗಳಿರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ವೈದ್ಯರು ಸೂಚಿಸುವ ಪರೀಕ್ಷೆಗಳಿಗೆ ಶೇ.20% ರಿಯಾಯಿತಿ ಇದೆ. ಹೆಚ್ಚಿನ ಮಾಹಿತಿಗಾಗಿ 0821–2533600, 99863 99862 ಸಂಪರ್ಕಿಸಬಹುದಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.1.2024 ಮಂಗಳವಾರ, ಮಳೆ ನಕ್ಷತ್ರ: ಪೂಷಾ 29.12.2023 ರಿಂದ 10.01.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ,
ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯುದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಬಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಮೈಸೂರು ವಿಶ್ವವಿದ್ಯಾಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ :** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಗದಗದ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾನಿಲಯ ಪ್ರಾಧ್ಯಾಪಕ ಪ್ರೊ ಡಿ.ಜೀವನ್ ಕುಮಾರ್ ಅವರಿಂದ ಭಾರತದ ಸಂವಿಧಾನದಲ್ಲಿರುವ ನ್ಯಾಯ ಸಮ್ಮತವಲ್ಲದ ದೃಷ್ಟಿಕೋನದ ಸಮಕಾಲೀನ ಪ್ರತಿಬಿಂಬಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ: ಸಂತ ಫಿಲೋಮಿನಾ ಕಾಲೇಜು ಪ್ರಾಂಶುಪಾಲ ಡಾ. ರವಿ ಜೆ.ಡಿ.ಸಲ್ಡಾನ್ಹಾ, ಸ್ಥಳ: ಸಂತ ಫಿಲೋಮಿನಾ ಕಾಲೇಜು, ಬನ್ನಿಮಂಟಪ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಇಂಗ್ಲಿಷ್ ಅಧ್ಯಯನ ವಿಭಾಗ :** ಕುಮಾರವ್ಯಾಸ–ಕನ್ನಡ ಮಹಾಭಾರತ ಇಂಗ್ಲಿಷ್ ಅನುವಾದಿತ ಕೃತಿ ಬಿಡುಗಡೆ, ಕೃತಿ ಬಿಡುಗಡೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಸಂಪಾದಕರು : ಭಾಷಾಶಾಸ್ತ್ರ ಪ್ರಾಧ್ಯಾಪಕ ಪ್ರೊ. ಎಸ್.ಎನ್. ಶ್ರೀಧರ್, ಮುಖ್ಯ ಅತಿಥಿಗಳು: ಇಂಗ್ಲಿಷ್ ಪ್ರಾಧ್ಯಾಪಕ ಪ್ರೊ. ಎಚ್.ಎಸ್. ಶಿವಪ್ರಕಾಶ್, ಉಪಸ್ಥಿತರು : ಇಂಗ್ಲಿಷ್ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ. ಕೆ. ಸದಾಶಿವ, ನಿವೃತ್ತ ಕನ್ನಡ ಪ್ರಾಧ್ಯಾಪಕ ಪ್ರೊ. ಕೃಷ್ಣಮೂರ್ತಿ ಹನೂರು, ಸ್ಥಳ: ಎಂ.ಎ. ಸೀನಿಯರ್ ಹಾಲ್, ಇಂಗ್ಲಿಷ್ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಬೆಂಗಳೂರು, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ, ಸಹಕಾರ ಇಲಾಖೆ:** ಹುಣಸೂರು ಮತ್ತು ಪಿರಿಯಾಪಟ್ಟಣ ತಾಲೂಕಿನ ಚುನಾವಣೆ ನಡೆಯುವ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ವಿಶೇಷ ತರಬೇತಿ ಕಾರ್ಯಕ್ರಮ, ಉದ್ಘಾಟನೆ: ಸಹಕಾರ ಸಂಘಗಳ ಜಂಟಿ ನಿಬಂಧಕ ಸಿ.ಪ್ರಸಾದ್ ರೆಡ್ಡಿ, ಅಧ್ಯಕ್ಷತೆ: ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಡಾ.ಹೆಚ್.ವಿ.ರಾಜೀವ್, ಮುಖ್ಯ ಅತಿಥಿಗಳು: ಒಕ್ಕೂಟದ ಉಪಾಧ್ಯಕ್ಷ ಬಿ.ಎಸ್.ಸದಾನಂದ, ನಿರ್ದೇಶಕರಾದ ಕೆ.ಎಸ್.ಕುಮಾರ್, ಡಾ.ಎಂ.ಬಿ.ಮಂಜೇಗೌಡ, ಬಿ.ಮಹದೇವಸ್ವಾಮಿ, ಕೆ.ಕೆ.ಹರೀಶ್, ವೈ.ಭೈರಪ್ಪ, ಹೆಚ್.ಎಸ್.ಪ್ರಶಾಂತ್ ತಾತಾಚಾರ್, ಸಹಕಾರ ಸಂಘಗಳ ಉಪನಿಬಂಧಕರಾದ ಆರ್.ಮಂಜುನಾಥ್, ಅನುಸೂಯ, ಎಸ್.ಹೆಚ್.ಮನೋಜ್‌ಕುಮಾರ್, ಸಹಕಾರ ಅಭಿವೃದ್ಧಿ ಅಧಿಕಾರಿ ಹಸೀನ, ಹಿತೇಂದ್ರ, ಸ್ಥಳ: ಕೆಐಸಿಎಂ ಸಭಾಂಗಣ, ಸಹಕಾರ ಭವನ, ಬೆಳಗ್ಗೆ 11ಕ್ಕೆ.

■ **ಬಸವ ಭಾರತ ಪ್ರತಿಷ್ಠಾನ :** ಜಗಜ್ಯೋತಿ ಶ್ರೀ ಬಸವೇಶ್ವರ ವಿಶೇಷ ಅಂಚೆ ಕಾರ್ಡ್ ಬಿಡುಗಡೆ, ಸಾನ್ನಿಧ್ಯ : ಹೊಸಮಠದ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಸಮ್ಮುಖ : ಬರಡನಪುರ ಮಠದ ಶ್ರೀ ಪರಶಿವಮೂರ್ತಿ ಸ್ವಾಮಿ, ಕುದೇರು ಗುರುಮಲ್ಲೇಶ್ವರ ಮಠದ ಶ್ರೀ ಗುರುಶಾಂತ ಸ್ವಾಮೀಜಿ, ಶ್ರೀ ಬಸವಯೋಗಿ ಪ್ರಭು ಸ್ವಾಮೀಜಿ, ಅಂಚೆ ಕಾರ್ಡ್ ಲೋಕಾರ್ಪಣೆ : ಶ್ರೀ ನಿಜಗುಣಾನಂದ ಸ್ವಾಮೀಜಿ, ಉಪಸ್ಥಿತರು : ಹಿರಿಯ ಅಂಚೆ ಅಧೀಕ್ಷಕ ಡಾ. ಎಂಜಲ್‌ರಾಜ್, ಉದ್ಘಾಟನೆ : ಪ್ರಗತಿಪರ ಕೃಷಿಕ ಶರಣ ಪ್ರಶಾಂತ್, ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಶಾಸಕರಾದ ಕೆ.ಹರೀಶ್‌ಗೌಡ, ನಿರಂಜನ್‌ಕುಮಾರ್, ಜಿ.ಡಿ. ಹರೀಶ್‌ಗೌಡ, ಮುಖಂಡರಾದ ಕೆ.ವಿ. ಮಲ್ಲೇಶ್, ಪ್ರದೀಪ್ ಕುಮಾರ್, ಮಹದೇವಪ್ಪ, ಮರಪ್ಪ, ಸ್ಥಳ: ಶ್ರೀ ನಟರಾಜ ಸಭಾ ಭವನ, ಶ್ರೀ ಹೊಸಮಠ, ಸಂಜೆ 4ಕ್ಕೆ

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪ್ರಖ್ಯಾತ ಪಂಡಿತ್ ಕಲ್ಲಾಪುರ ಪವಮಾನಾಚಾರ್ಯ ಅವರಿಂದ ಭಗವದ್ಗೀತೆ 14ನೇ ಅಧ್ಯಾಯ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ, ಸಂಜೆ 5ರಿಂದ 6ರವರೆಗೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ (ಬೆಂಗಳೂರು), ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ (ಮೈಸೂರು) :** ಹೆಸರಾಂತ ಉಪನ್ಯಾಸಕರಾದ ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀ ರಾಮ ಮಂದಿರ, ಕಾಂತರಾಜ ರಸ್ತೆ, ಸಂಜೆ 6.15ರಿಂದ.

■ **ಶ್ರೀ ಉತ್ತರಾದಿ ಮಠ ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀ ಪಾದಂಗಳವರ ಆಜ್ಞೆ ಮತ್ತು ಅನುಗ್ರಹದಿಂದ ಹೆಸರಾಂತ ಪ್ರವಚನಕಾರರಾದ ಪಂಡಿತ್ ಶ್ರೀ ಪವಮಾನಾಚಾರ್ಯ ಕಲ್ಲಾಪುರ ಅವರಿಂದ ಶ್ರೀ ಭಗವದ್ಗೀತಾ ಅಭಿಯಾನ, ಸ್ಥಳ: ರೋಗ ಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಶ್ರದ್ಧೆಯ ಶಿಲ್ಪ, ಲೇಖನ ಮತ್ತು ಪ್ರಸ್ತುತಿ– ಟಿ.ಎಸ್. ಗೋಪಾಲ್, 6.40 ಪದಸಂಸ್ಕೃತಿ–ಡಾ.ಸಂಗಮೇಶ್ ಸವದತ್ತಿ ಮಠ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ –ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 8.30 ಪರಾಗ–ಬೇಸಾಯದ ಬದುಕು ಸರಾಗ–ಬಾನುಲಿ ಸರಣಿ, 8.45 ಕರೆಗೊಂದು ಗೀತೆ, 10.00 ಎನ್.ಆರ್. ಪ್ರಶಾಂತ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.00 ವನಿತಾ ವಿಹಾರ–ಚೇತನ–ರೋಲರ್ ಸ್ಕೇಟರ್ ಹಾಗೂ ಸಮಾಜ ಸೇವಕಿ ಸೌಹಾರ್ದಿನಿ ಎನ್. ರಾಜ್ ಅವರೊಂದಿಗೆ ಮಾತುಕತೆ, ಪ್ರಸ್ತುತಿ–ಎಂ.ಎಸ್.ಭಾರತಿ, 12.30 ದೇವರನಾಮ –ಕೆ.ಎಸ್. ಸುರೇಖಾ, ಮಂಜುಳಾ ಗುರುರಾಜ್, 12.45 ಮಹಿಳೆಯರಿಗೆ ಉದ್ಯಮಶೀಲತೆಯ ತರಬೇತಿ ಕುರಿತು ಡಾ. ನಳಿನಿ ತಮ್ಮಯ್ಯ ಅವರೊಂದಿಗೆ ಸಂದರ್ಶನ. ಸಂದರ್ಶಕರು– ದಿವಾಕರ ಹೆಗಡೆ, 1.20 ಭಾವಗೀತೆಗಳು–ಕೆ.ಆರ್. ಸುಬ್ರಹ್ಮಣ್ಯ, ರತ್ನಮಾಲಾ ಪ್ರಕಾಶ್, ಅರ್ಚನಾ ಉಡುಪ, 3.00 ಪಿ. ಸುಬ್ರಹ್ಮಣ್ಯಂ–ಕ್ಲಾರಿಯೋನೆಟ್ ವಾದನ, 4.00 ಕಥಾ ಕಾಲಕ್ಷೇಪ–ಸತ್ಸಂಗದ ಮಹಿಮೆ, ಪ್ರಸ್ತುತಿ– ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ–ಬಾಳೆ ಬೆಳೆ ಮೌಲ್ಯವರ್ಧನೆ ಕುರಿತು ಶ್ರೀಕಂಠಸ್ವಾಮಿ ಅವರೊಂದಿಗೆ ಸಂದರ್ಶನ, 9.30 ಚಿಟ್ಟಿಬಾಬು–ವೀಣಾವಾದನ 10.00 ಗಮಕ ವ್ಯಾಖ್ಯಾನ, ವಾಚನ– ಹೆ.ಯಜ್ಞೇಶ್, ವ್ಯಾಖ್ಯಾನ– ಸರ್ಪಂಗಳ ಈಶ್ವರಭಟ್

ದೇವರಾಜ ಮಾರುಕಟ್ಟೆಯಲ್ಲಿ ಗ್ರಾಹಕರಿಗೆ ಉಸಿರುಗಟ್ಟುವಂತಹ ವಾತಾವರಣ

ಅನಿವಾರ್ಯವಾಗಿ ಒಳಹೊಕ್ಕಿ ಹೊರಬಂದವರು ಒಮ್ಮೆ ನಿಟ್ಟುಸಿರು ಬಿಡುವಂತಹ ಪರಿಸ್ಥಿತಿ



ದೇವರಾಜ ಮಾರುಕಟ್ಟೆಯೊಳಗೆ ತಿರುಗಾಡುವ ದಾರಿಯಲ್ಲೇ ವ್ಯಾಪಾರ ವಹಿವಾಟು.



ಕಳೆದುಕೊಳ್ಳುವುದಕ್ಕೆ ಪರೋಕ್ಷ ಬೆಂಬಲ...!

"ಪಾರಂಪರಿಕ ಹಾಗೂ ಅಚ್ಚುಕಟ್ಟಿನ ವ್ಯವಸ್ಥೆಯನ್ನೊಳಗೊಂಡ ದೇವರಾಜ ಮಾರುಕಟ್ಟೆಯನ್ನು ಕಳೆದುಕೊಳ್ಳುವುದಕ್ಕೆ ವ್ಯಾಪಾರಸ್ಥರ ದಾಹ ಪರೋಕ್ಷ ಬೆಂಬಲ ನೀಡಿದಂತಾಗಿದೆ. ನೋಡುವವರಿಗೆ ಇಲ್ಲಿ ಜಾಗವೇ ಇಲ್ಲವೇನೋ ಎಂಬಂತೆ ತೋರಿಸಲಾಗುತ್ತಿದೆ. ಸುವಿಶಾಲ ದೇವರಾಜ ಮಾರುಕಟ್ಟೆ ಇದ್ದರೆ ನಮ್ಮ ಜೀವನ ಎಂಬುದನ್ನು ಮರೆತು ಗ್ರಾಹಕರಿಗೆ ಇಕ್ಕಟ್ಟಿನ ಪರಿಸ್ಥಿತಿ ನಿರ್ಮಾಣ ಮಾಡಲಾಗುತ್ತಿದೆ. ಈ ಸಂಬಂಧ ಈಗಾಗಲೇ ಹಲವರು ನನ್ನಲ್ಲಿ ದೂರಿದ್ದಾರೆ. ನಾನು ಪ್ರಮುಖರಿಗೆ ಹೇಳಿದ್ದೇನೆ. ಆದರೆ ಬದುಕು ಕಟ್ಟಿಕೊಳ್ಳುವ ಭರದಲ್ಲಿ ಆಸರೆಯನ್ನೇ ಕಳೆದುಕೊಳ್ಳುವ ಸ್ಥಿತಿಯನ್ನು ವ್ಯಾಪಾರಸ್ಥರೆ ತಂದುಕೊಳ್ಳುತ್ತಿದ್ದಾರೆ. ಬಾಡಿಗೆ ವಸೂಲಿ ಮಾಡುವ ಪಾಲಿಕೆ ಅಧಿಕಾರಿಗಳ ಅಸಡ್ಡೆ ಮತ್ತಷ್ಟು ಬೇಸರ ತರಿಸುವಂತಿದೆ. ದೇವರಾಜ ಮಾರುಕಟ್ಟೆಗೆ ಸುಣ್ಣ-ಬಣ್ಣ ಬಳಿದು ವರ್ಷಗಳೇ ಉರುಳಿವೆ. ಶೌಚಾಲಯ ಸೇರಿದಂತೆ ಕನಿಷ್ಠ ಮೂಲ ಸೌಕರ್ಯಗಳು ಇಲ್ಲ. ಇದರ ನಡುವೆ ವ್ಯಾಪಾರಸ್ಥರ ನಡವಳಿಕೆ ನೋವುಂಟು ಮಾಡುತ್ತಿದೆ. **– ಎಸ್.ಮಹದೇವ್, ಅಧ್ಯಕ್ಷರು, ದೇವರಾಜ ಮಾರುಕಟ್ಟೆ ಮಳಿಗೆದಾರರ ಸಂಘ**

ಮೈಸೂರು,ಜ.8(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನ ಪಾರಂಪರಿಕ ಕಟ್ಟಡಗಳಲ್ಲೊಂದಾದ ಸುವಿಶಾಲ ದೇವರಾಜ ಮಾರುಕಟ್ಟೆಯಲ್ಲಿ ಭಾರಿ ಇಕ್ಕಟ್ಟು...!

ಸುಮಾರು ಮೂರೂವರೆ ಎಕರೆ ವಿಸ್ತೀರ್ಣದಲ್ಲಿರುವ ದೇವರಾಜ ಮಾರುಕಟ್ಟೆಯಲ್ಲಿ ಸುಮಾರು 822 ಮಳಿಗೆಗಳಿದ್ದು, ದಿನವಹಿ ಬಾಡಿಗೆದಾರರು ಸೇರಿ 1 ಸಾವಿರಕ್ಕೂ ಹೆಚ್ಚು ಮಂದಿ ವ್ಯಾಪಾರ–ವಹಿವಾಟು ನಡೆಸುತ್ತಿದ್ದಾರೆ. ತರಕಾರಿ, ಹೂ, ಹಣ್ಣು ಪೂಜಾ ಸಾಮಗ್ರಿಗಳು ಹಾಗೂ ಇನ್ನಿತರೆ ವಸ್ತುಗಳ ಮಾರಾಟ ಸಾಗುತ್ತಿದ್ದು, ವ್ಯಾಪಾರಸ್ಥರಲ್ಲಿನ ಪೈಪೋಟಿ ಗ್ರಾಹಕರಿಗೆ ಭಾರಿ ಇಕ್ಕಟ್ಟಾಗಿ ಪರಿಣಮಿಸಿದೆ.

ಮಳಿಗೆಗಳಿಂದ ಎರಡರಿಂದ ಮೂರು ಅಡಿಯಷ್ಟು ಹೊರಕ್ಕೆ(ತಿರುಗಾಡುವ ದಾರಿಗೆ) ಹೂ, ಹಣ್ಣು, ತರಕಾರಿ, ಬೆಲ್ಲ, ಪೂಜಾ ಸಾಮಗ್ರಿಗಳನ್ನಿಟ್ಟು ವ್ಯಾಪಾರ ನಡೆಸುತ್ತಿರುವ ಮಳಿಗೆದಾರರಿಂದ ಸುವಿಶಾಲ ಮಾರುಕಟ್ಟೆಯಲ್ಲೂ ಉಸಿರುಗಟ್ಟು ವಾತಾವರಣ ಸೃಷ್ಟಿಯಾಗಿದೆ. ವ್ಯಾಪಾರಕ್ಕೆ ಅನುಕೂಲವಾಗುವಂತೆ ಮಳಿಗೆಗಳಲ್ಲಿ ಜಾಗವಿದ್ದರೂ ಗ್ರಾಹಕರ ಸೆಳೆಯುವ ಭರದಲ್ಲಿ ಗ್ರಾಹಕರಿಗೆ ಅರಿವಿಲ್ಲದೆಯೇ ತೊಂದರೆ ನೀಡಲಾಗುತ್ತಿದೆ.







ಪೂಜಾ ಸಾಮಗ್ರಿಗಳ ಜೊತೆಗೆ ಕಡ್ಲೆ ಪುರಿ, ಬೆಲ್ಲ, ಹೂ ಹಾಗೂ ತರಕಾರಿ ಮಾರಾಟದ ಸ್ಥಳದಲ್ಲಿ ಏಕಮುಖವಾಗಿ ಒಬ್ಬರಷ್ಟೇ ತಿರುಗಾಡಲು ಜಾಗವಿದ್ದು, ಜನಸಂದಣಿ ಹೆಚ್ಚಾದರೆ ಉಸಿರಾಡುವುದಕ್ಕೂ ಕಷ್ಟವಾಗುತ್ತದೆ. ಕೈಯಲ್ಲಿ ಚೀಲ (ಬ್ಯಾಗ್)ಗಳನ್ನಿಡಿದು ನಡೆದುಕೊಂಡು ಹೋಗುವುದು ಸಾಹಸವೇ ಆಗಿದೆ. ಹಬ್ಬದ ಸಂದರ್ಭದಲ್ಲಿ ಒಬ್ಬರನ್ನೊಬ್ಬರು ತಳ್ಳದೆ ಸಾಗಲು ಸಾಧ್ಯವೇ ಇಲ್ಲ. ಗ್ರಾಹಕರು ಇಕ್ಕಟ್ಟಿನಲ್ಲಿ ಖರೀದಿಸಿದರೆ, ವ್ಯಾಪಾರಸ್ಥರು ಮಳಿಗೆಯೊಳಗೆ ಜಾಗಬಿಟ್ಟು ತಿರುಗಾಡುವ ದಾರಿಯ ಬದಿಯಲ್ಲಿ ನಿಂತು ವ್ಯಾಪಾರ ಮಾಡುವುದು ಸಾಮಾನ್ಯವಾಗಿಬಿಟ್ಟಿದೆ. ತರಕಾರಿ ಮಾರಾಟದ ಕಡೆ ತಿರುಗಾಡುವ ದಾರಿಗೆ ಟಾರ್ಪಲ್(ಶೆಡ್ ಮಾದರಿ) ಹಾಕಿಕೊಳ್ಳುವುದು ಗ್ರಾಹಕರಿಗೆ ತೀವ್ರ ಕಿರಿಕಿರಿ ಉಂಟುಮಾಡುತ್ತಿದೆ.

ದೇವರಾಜ ಮಾರುಕಟ್ಟೆಯಲ್ಲಿ ಅವ್ಯವಸ್ಥೆ

ಮೈಸೂರು ಮಹಾರಾಜರ ಬಳುವಳಿಯಾದ ದೇವರಾಜ ಮಾರುಕಟ್ಟೆಯಲ್ಲಿ ಎಲ್ಲವೂ ವ್ಯವಸ್ಥಿತವಾಗಿದೆ. ಆದರೆ ವ್ಯಾಪಾರಿಗಳ ಕೆಟ್ಟ ವರ್ತನೆಯಿಂದಾಗಿ ಅವ್ಯವಸ್ಥೆ ತುಂಬಿ ತುಳುಕುತ್ತಿದೆ. ನೆಮ್ಮದಿಯಿಂದ ಒಂದೆರಡು ವಸ್ತುಗಳನ್ನು ಖರೀದಿಸಲು ಸಾಧ್ಯವಾಗದ ಪರಿಸ್ಥಿತಿ. ದೇವರಾಜ ಮಾರುಕಟ್ಟೆಯ ಒಳಗೆ ಹೋಗಿ ಹೊರಬಂದರೆ ನಿಟ್ಟುಸಿರು ಬಿಡುವಂತಾಗುತ್ತದೆ ಎಂದು ಕೆಲ ಗ್ರಾಹಕರು ಬೇಸರ ವ್ಯಕ್ತಪಡಿಸಿದರು.


ಪೈಪೋಟಿಯಿಂದ ಇಕ್ಕಟ್ಟು: ವ್ಯಾಪಾರಸ್ಥರಲ್ಲಿನ ಪೈಪೋಟಿಯಿಂದಾಗಿ ಇಕ್ಕಟ್ಟು ಹೆಚ್ಚಾಗಿದೆ. ಕೆಲವರು ಮಳಿಗೆಯೊಳಗೆ ವ್ಯಾಪಾರ ನಡೆಸಿದರೆ, ಬಹುತೇಕರು ತಿರುಗಾಡುವ ದಾರಿಯಲ್ಲೇ ಗ್ರಾಹಕರನ್ನು ಅಡ್ಡ ಹಾಕಿ ವ್ಯಾಪಾರ ನಡೆಸುತ್ತಿದ್ದಾರೆ. ಬೆಲ್ಲದ ಮಳಿಗೆಗಳಿರುವ ಕಡೆ ಬಹುತೇಕ ದಾರಿಯನ್ನೇ ಆವರಿಸಿಕೊಳ್ಳಲಾಗಿದೆ. ತರಕಾರಿ ಸ್ಥಳದಲ್ಲಿ ಎಲ್ಲೆಂದರಲ್ಲಿ ಸುರಿದುಕೊಂಡು ಮಾರಾಟ ಮಾಡಲಾಗುತ್ತಿದೆ. ಇದರ ನಡುವೆ ಕೆಲವರು ಉಗುಳುವುದು, ಬೀಡಿ, ಸಿಗರೇಟ್ ಸೇದಿ ಬಿಸಾಡುವುದು ಅಸಹ್ಯ ಉಂಟು ಮಾಡಿದೆ. ನ್ಯಾಯವಾಗಿ ಮಳಿಗೆ ಜಾಗದಲ್ಲಿ ಕುಳಿತು ವ್ಯಾಪಾರ ಮಾಡುವವರಿಗೆ ಅನ್ಯಾಯವಾಗುತ್ತಿದೆ. ಗ್ರಾಹಕರ ಎದೆ ಮೇಲೆ ನಿಂತು ಕೊಂಡುಕೊಳ್ಳಿ ಎನ್ನುವವರ ಸಂಖ್ಯೆ ವಿಪರೀತವಾಗಿದೆ. ಇಡೀ ಮಾರುಕಟ್ಟೆ ದೊಂಬಿಯಂತಾಗಿದೆ. ಹಬ್ಬದ ಸಂದರ್ಭದಲ್ಲಿ ಮಾರುಕಟ್ಟೆ ಒಳಗೆ ಭಾರಿ ಇಕ್ಕಟ್ಟಿನ ಅನುಭವವಾಗುತ್ತದೆ ಎಂದು ವ್ಯಾಪಾರಿಯೊಬ್ಬರು 'ಮೈಸೂರು ಮಿತ್ರ'ನಲ್ಲಿ ದೂರಿದರು.

ಕೇಳೋರಿಲ್ಲ

"ದೇವರಾಜ ಮಾರುಕಟ್ಟೆ ನಿರ್ವಹಣೆ ಜವಾಬ್ದಾರಿ ಹೊತ್ತಿರುವ ಮೈಸೂರು ಪಾಲಿಕೆ ಇದ್ದು ಇಲ್ಲದಂತಿದೆ. ತಿರುಗಾಡುವ ದಾರಿಯಲ್ಲೇ ವ್ಯಾಪಾರ ಮಾಡುತ್ತಿದ್ದರೂ ಅದನ್ನು ಸರಿಪಡಿಸುವ ಪರಿ ಜ್ಞಾನವೂ ಅಧಿಕಾರಿಗಳಿಗಿಲ್ಲ. ಅವರಿಗೆ ಬಾಡಿಗೆ ಕೊಟ್ಟರೆ ಸಾಕು. ವ್ಯಾಪಾರಿಗಳ ಕೆಟ್ಟ ವರ್ತನೆ ಸರಿಪಡಿಸುವ ಯೋಚನೆಯನ್ನೂ ಸಹ ಮಾಡುತ್ತಿಲ್ಲ. **–ಗ್ರಾಹಕರು**

ಯಶಸ್ವಿ ಶಸ್ತ್ರಚಿಕಿತ್ಸೆ ಮೂಲಕ ಕ್ಯಾನ್ಸರ್ ರೋಗಿ ಬದುಕಿಸಿದ ಕೆ.ಆರ್.ಆಸ್ಪತ್ರೆ ವೈದ್ಯರು!

ಮೈಸೂರು, ಜ.8(ಎಸ್‌ಬಿಡಿ)– ಮಾರಣಾಂತಿಕ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ರೋಗಿಯನ್ನು ಯಶಸ್ವಿ ಶಸ್ತ್ರಚಿಕಿತ್ಸೆ ಮೂಲಕ ಮೈಸೂರಿನ ಕೆ.ಆರ್.ಆಸ್ಪತ್ರೆ ವೈದ್ಯರು ಜೀವಾಪಾಯದಿಂದ ಪಾರು ಮಾಡಿದ್ದಾರೆ.



ಅಪರೂಪದ ರೆಟ್ರೋಪೆರಿಟೋನಿಯಲ್ ಲೈಪೋಸಾರ್ಕೋಮ ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿದ್ದ ಸುಮಾರು 65 ವರ್ಷದ ವ್ಯಕ್ತಿಯೊಬ್ಬರು ಕೆ.ಆರ್.ಆಸ್ಪತ್ರೆಗೆ ದಾಖಲಾಗಿದ್ದರು. ಕ್ಯಾನ್ಸರ್ ಬಾಧಿತರಲ್ಲಿ ಕೇವಲ ಶೇ.1ರಷ್ಟು ಜನರಲ್ಲಿ ಕಾಣಿಸುವ, ದೇಹದ ಅಂಗಗಳಿಗೆ ಅತಿವೇಗವಾಗಿ ಹರಡಿ ಕೆಲವೇ ತಿಂಗಳಲ್ಲಿ ಜೀವ ಕಸಿಯುವ ಕಾಯಿಲೆ ಇರುವುದು ಪರೀಕ್ಷೆಯಲ್ಲಿ ಪತ್ತೆಯಾಗಿದೆ.

ಆಸ್ಪತ್ರೆಯ ಶಸ್ತ್ರಚಿಕಿತ್ಸಾ ವಿಭಾಗದ ಪ್ರಾಧ್ಯಾಪಕ ಡಾ.ಬಿ.ಎನ್.ಆನಂದರವಿ ನೇತೃತ್ವದಲ್ಲಿ ಸಹಾಯಕ ಪ್ರಾಧ್ಯಾಪಕರಾದ ಡಾ.ಆರ್.ಡಿ.ಮಂಜುನಾಥ್, ಡಾ.ದೀಪ, ಅರವಳಿಕೆ ತಜ್ಞರಾದ ಡಾ.ವಿ.ವೈ.ಶ್ರೀನಿವಾಸ್ ಹಾಗೂ ಡಾ.ಮಾಲಿನಿ ಅವರನ್ನೊಳಗೊಂಡ ತಜ್ಞ ವೈದ್ಯರ ತಂಡ ಆ ರೋಗಿಗೆ ಶಸ್ತ್ರಚಿಕಿತ್ಸೆ ನಡೆಸಿ, ಹೊಟ್ಟೆ ಮುಂಭಾಗದಲ್ಲಿದ್ದ ಸುಮಾರು 7.5 ಕೆ.ಜಿ ತೂಕದ ಕ್ಯಾನ್ಸರ್ ಗಡ್ಡೆಯನ್ನು ಹೊರತೆಗೆಯುವಲ್ಲಿ ಯಶಸ್ವಿಯಾಗಿದೆ.

ಈ ಬಗ್ಗೆ ಮಾಹಿತಿ ನೀಡಿದ ಡಾ.ಬಿ.ಎನ್.ಆನಂದರವಿ, ರೋಗಿ ಹೊಟ್ಟೆಯ ಮುಂಭಾಗದಲ್ಲಿದ್ದ ಹಲವು ಸೌಮ್ಯವಾದ ಕೊಬ್ಬಿನ ಗಂಥಿಗಳು ಕಾಲಾಂತರದಲ್ಲಿ ಹೊಟ್ಟೆಯ ಒಳಭಾಗದಲ್ಲಿ ಕ್ಯಾನ್ಸರ್ ಕೊಬ್ಬಿನ ಗಂಥಿಯಾಗಿ ಪರಿವರ್ತನೆಗೊಂಡಿದ್ದವು. ಶಸ್ತ್ರಚಿಕಿತ್ಸೆಯ ಸಮಯದಲ್ಲಿ ಕ್ಯಾನ್ಸರ್ ಗಡ್ಡೆಯು ಎಡಭಾಗದ ಮೂತ್ರಪಿಂಡಕ್ಕೆ ಹರಡಿದ್ದ ಕಾರಣ ಅದನ್ನು ತೆಗೆಯಬೇಕಾದ್ದರಿಂದ ಲೆಫ್ಟ್ ರ‍್ಯಾಡಿಕಲ್ ನೆಫೆಕ್ಟೋಮಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಯಿತು. ಕ್ಯಾನ್ಸರ್ ಖಾಯಿಲೆಗಳಿಗೆ ಆಹಾರ ಪದ್ಧತಿ, ಕಲುಷಿತ ಪರಿಸರ, ಅನುವಂಶಿಕತೆ ಹಾಗೂ ಬದಲಾಗುತ್ತಿರುವ ಜೀವನ ಶೈಲಿಯೇ ಕಾರಣ ಎಂದು ಎಚ್ಚರಿಸಿದ್ದಾರೆ.

ಲೋಕಸಭಾ ಚುನಾವಣೆಗೆ ಕಾಂಗ್ರೆಸ್ ರಣತಂತ್ರ!

ಮಾರ್ಚ್ ಬದಲು ಫೆಬ್ರವರಿಯಲ್ಲೇ ಬಜೆಟ್ ಮಂಡನೆ

- ಮತದಾರರಿಗೆ ಗಾಳ ಹಾಕಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸಿದ್ಧತೆ
- ಫೆ.12ರಿಂದ ಅಧಿವೇಶನ ಆರಂಭ; ಫೆ.16ರಂದು ಬಜೆಟ್ ಮಂಡನೆ

ಬೆಂಗಳೂರು, ಜ.8(ಕೆಎಂಶಿ)– ಲೋಕಸಭಾ ಚುನಾವಣೆಗೆ ರಾಜ್ಯದ ಮೂರು ರಾಜಕೀಯ ಪಕ್ಷಗಳು ಚುನಾವಣಾ ಸಿದ್ಧತೆ ಮಾಡಿಕೊಳ್ಳುತ್ತಿದ್ದು, ಈ ಮಧ್ಯೆ ಮುಖ್ಯಮಂತ್ರಿ ಸಿದ್ದರಾಮಯ್ಯ, ನೀತಿ ಸಂಹಿತೆ ಜಾರಿಗೊಳ್ಳುವ ಮುನ್ನವೇ 2024–25ರ ಮುಂಗಡಪತ್ರ ಮಂಡಿಸಲಿದ್ದಾರೆ.



ರಾಜ್ಯ ವಿಧಾನಮಂಡಲದ ಅಧಿವೇಶನವನ್ನು ಫೆಬ್ರವರಿ 12ರಂದು ಕರೆಯಲು ಸರ್ಕಾರ ತೀರ್ಮಾನಿಸಿದ್ದು, ಅಂದೇ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ.

ಮುಖ್ಯಮಂತ್ರಿ ಅವರು, ಫೆಬ್ರವರಿ 16ರಂದು ಬಜೆಟ್ ಮಂಡನೆ ಮಾಡಲಿದ್ದಾರೆ. ಮಾರ್ಚ್ ತಿಂಗಳ ಮಧ್ಯೆ ಭಾಗದಲ್ಲಿ ಕೇಂದ್ರ ಚುನಾವಣಾ ಆಯೋಗ ದೇಶದ 543 ಲೋಕಸಭಾ ಕ್ಷೇತ್ರಗಳಿಗೆ ಚುನಾವಣಾ ವೇಳಾಪಟ್ಟಿ ಪ್ರಕಟಿಸಿ, ನೀತಿ ಸಂಹಿತೆ ಜಾರಿಗೆ ತರಲಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಮಾರ್ಚ್‌ನಲ್ಲಿ ಮಂಡಿಸಬೇಕಿದ್ದ ಮುಂಗಡಪತ್ರವನ್ನು ಫೆಬ್ರವರಿಯಲ್ಲೇ ಮಂಡಿಸಿ ಲೇಖಾನುದಾನ ಪಡೆಯಲಿದ್ದಾರೆ.

ರಾಜ್ಯದ 28 ಲೋಕಸಭಾ ಕ್ಷೇತ್ರಗಳಲ್ಲಿ ಹೆಚ್ಚು ಸ್ಥಾನ ಗಳಿಸಲು ಆಡಳಿತಾರೂಢ ಕಾಂಗ್ರೆಸ್ ಹಾಗೂ ಪ್ರತಿಪಕ್ಷ ಬಿಜೆಪಿ–ಜೆಡಿಎಸ್ ಈಗಿನಿಂದಲೇ ಚುನಾವಣಾ ತಯಾರಿ ನಡೆಸಿವೆ. ಚುನಾವಣಾ ಸಿದ್ಧತೆ ಸಂಬಂಧ ಬಿಜೆಪಿ ಹಾಗೂ ಜೆಡಿಎಸ್ ಇಂದು ಮುಖಂಡರ ಸಭೆ ನಡೆಸಿದರೆ, ಕಾಂಗ್ರೆಸ್ ಜನವರಿ 10ರಿಂದ ಮೂರು ದಿನಗಳ ಕಾಲ ಸರಣಿ ಸಭೆ ಹಮ್ಮಿಕೊಂಡಿದೆ.

28 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ಆಯ್ಕೆಗಾಗಿ ಮೂರೂ ಪಕ್ಷಗಳು ಪ್ರತ್ಯೇಕ ಸಮೀಕ್ಷೆ ನಡೆಸಿ, ಸಮರ್ಥ ಅಭ್ಯರ್ಥಿಗಳ ಆಯ್ಕೆ ಮತ್ತು ಮತದಾರರನ್ನು ಓಲೈಸಿಕೊಳ್ಳಲು ಕಾರ್ಯಕ್ರಮ ರೂಪಿಸುತ್ತಿವೆ.

ಇದರ ಮಧ್ಯೆ ಪಕ್ಷ ಸಂಘಟನೆ ಮತ್ತು ಕಾರ್ಯಕರ್ತರ ವಿಶ್ವಾಸ ಪಡೆದುಕೊಳ್ಳಲು ಮುಖಂಡರು ನಿರಂತರ ಸಭೆಗಳನ್ನು ನಡೆಸುತ್ತಿದ್ದಾರೆ. ಜೆಡಿಎಸ್ ಜೊತೆಗೂಡಿ 28 ಕ್ಷೇತ್ರಗಳನ್ನು ಗೆಲ್ಲುವ ಗುರಿ ಇಟ್ಟುಕೊಂಡಿರುವ ಬಿಜೆಪಿ ಇಂದು ಇಡೀ ದಿನ ರಾಜ್ಯ ಮುಖಂಡರ ಸಭೆ ನಡೆಸಿತು.

ಅಭ್ಯರ್ಥಿಗಳ ಆಯ್ಕೆ, ಜೆಡಿಎಸ್ ಜೊತೆ ಹೊಂದಾಣಿಕೆ ಹಾಗೂ ಚುನಾವಣಾ ಪ್ರಚಾರಕ್ಕಾಗಿ ಸಭೆ ಮತ್ತು ರ‍್ಯಾಲಿಗಳನ್ನು ನಡೆಸುವ ಸಂಬಂಧ ಸಭೆ ಕೆಲವು ಮಹತ್ವದ ತೀರ್ಮಾನಗಳನ್ನು ಕೈಗೊಂಡಿದೆ.

ಸೀಮಿತ ಸ್ಥಾನಗಳಲ್ಲಿ ಕಣಕ್ಕಿಳಿಯಲು ನಿರ್ಧರಿಸಿರುವ ಜೆಡಿಎಸ್, ತಾವು ಸ್ಪರ್ಧಿಸಬಹುದಾದ ಸಂಭವನೀಯ ಕ್ಷೇತ್ರಗಳ ಕಾರ್ಯಕರ್ತರು ಮತ್ತು ಮುಖಂಡರ ಜೊತೆ ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ, ಇಡೀ ದಿನ ಸಭೆ ನಡೆಸಿದರು. ಇನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಅಲ್ಪಸಂಖ್ಯಾತರ ಮತಗಳ ಜೊತೆಗೆ ಹಿಂದುಳಿದ ಹಾಗೂ ಪರಿಶಿಷ್ಟ ಜಾತಿ ಮತ್ತು ವರ್ಗದ ಮತಗಳನ್ನು ಗಟ್ಟಿ ಮಾಡಿಕೊಳ್ಳಲು ದಾವಣಗೆರೆ ಮತ್ತು ಚಿತ್ರದುರ್ಗದಲ್ಲಿ ಆಯಾ ಸಮಾಜಗಳಿಗೆ ಸೇರಿದ ಬೃಹತ್ ಸಮಾವೇಶ ನಡೆಸುವ ತಯಾರಿಯಲ್ಲಿ ಮಗ್ನರಾಗಿದ್ದಾರೆ.

ಎರಡೂ ಸಮಾವೇಶಗಳನ್ನು ಪಕ್ಷದ ವೇದಿಕೆ ಹೊರತಾಗಿ ಮಾಡುತ್ತಿರುವುದು ವಿಶೇಷವಾಗಿದೆ.

ಇಸ್ರೇಲ್ ಕೆಣಕಿದ್ದ ಹಿಜ್ಬುಲ್ಲಾಗೆ ತಕ್ಕಶಾಸ್ತಿ: ಲೆಬನಾನ್‌ನಲ್ಲಿ ಹಿರಿಯ ಹಿಜ್ಬುಲ್ಲಾ ಕಮಾಂಡರ್ ಬರ್ಬರ ಹತ್ಯೆ

ಬಾಗ್ದಾದ್: ದಕ್ಷಿಣ ಲೆಬನಾನ್‌ನಲ್ಲಿ ಇಸ್ರೇಲಿ ನಡೆಸಿದ ವೈಮಾನಿಕ ದಾಳಿಯಲ್ಲಿ ಉಗ್ರಗಾಮಿ ಗುಂಪು ಹಿಜ್ಬುಲ್ಲಾದ ಹಿರಿಯ ಕಮಾಂಡರ್ ಹತ್ಯೆಯಾಗಿದ್ದಾರೆ ಎಂದು ಲೆಬನಾನಿನ ಭದ್ರತಾ ಅಧಿಕಾರಿ ಸೋಮವಾರ ತಿಳಿಸಿದ್ದಾರೆ. ಲೆಬನಾನ್–ಇಸ್ರೇಲ್ ಗಡಿಯಲ್ಲಿ ಇರಾನ್ ಬೆಂಬಲಿತ ಹಿಜ್ಬುಲ್ಲಾ ಉಗ್ರಗಾಮಿಗಳು ಮತ್ತು ಇಸ್ರೇಲಿ ಸೇನೆಯ ನಡುವೆ ಘರ್ಷಣೆಗಳು ತೀವ್ರಗೊಂಡಿರುವ ಸಮಯದಲ್ಲಿ ಈ ಹತ್ಯೆ ನಡೆದಿದೆ.

ಇಸ್ರೇಲಿ ದಾಳಿಯು ಬೈರುತ್‌ನಲ್ಲಿ ಉಗ್ರಗಾಮಿ ಪ್ಯಾಲೇಸ್ಟಿನಿಯನ್ ಗುಂಪಿನ ಹಮಾಸ್‌ನ ಉನ್ನತ ಅಧಿಕಾರಿಯನ್ನು ಕೊಂದ ಸುಮಾರು ಒಂದು ವಾರದ ನಂತರ ಈ ದಾಳಿ ನಡೆದಿದೆ. ಉತ್ತರ ಇಸ್ರೇಲ್‌ನ ಮೌಂಟ್ ಮೆರಾನ್‌ನಲ್ಲಿರುವ ಇಸ್ರೇಲಿ ಸೇನಾ ನೆಲೆಯ ಮೇಲೆ ಹಿಜ್ಬೊಲ್ಲಾಹ್ ಬೃಹತ್ ಕ್ಷಿಪಣಿ ದಾಳಿಯೊಂದಿಗೆ ಪ್ರತೀಕಾರ ತೀರಿಸಿದ ಎರಡು ದಿನಗಳ ನಂತರ ಇತ್ತೀಚಿನ ದಾಳಿ ನಡೆದಿದೆ.

ಇಂದು ವಿದ್ಯುತ್ ವ್ಯತ್ಯಯ

ಮೈಸೂರು,ಜ.8– ಜನವರಿ 9ರಂದು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ 66/11 ಕೆ.ವಿ. ಸೌತ್ (ದಕ್ಷಿಣ) ವಿದ್ಯುತ್ ವಿತರಣಾ ಕೇಂದ್ರದಿಂದ ಹೊರ ಹೊಮ್ಮುವ 11 ಕೆ.ವಿ. ಸಿಲ್ಕ್ ಫ್ಯಾಕ್ಟರಿ ಫೀಡರ್‌ನಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿದ್ದು, ಸಿಲ್ಕ್ ಫ್ಯಾಕ್ಟರಿ ವೃತ್ತ, ಪೋಸ್ಟ್ ಆಫೀಸ್ ರಸ್ತೆ, ಎನ್‌ಐಇ ಕಾಲೇಜು ವೃತ್ತ, ಪೊಲೀಸ್ ಕ್ವಾಟ್ರಸ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ನಿಲುಗಡೆಯಾಗಲಿದ್ದು, ಸಾರ್ವಜನಿಕರು ಹಾಗೂ ಕೈಗಾರಿಕೋದ್ಯಮಿಗಳು ಸಹಕರಿಸಬೇಕೆಂದು ನ.ರಾ.ಮೊಹಲ್ಲಾ, ಕಾರ್ಯ–ಪಾಲನೆ ವಿಭಾಗ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

ಮೈಸೂರು ಪ್ರತಿಷ್ಠಿತ ವಿಜಯನಗರ ಬಡಾವಣೆ ಸಮಸ್ಯೆಗಳ ಆಗರ

- ಬಡಾವಣೆ ಬಹುತೇಕ ಭಾಗ ತ್ಯಾಜ್ಯಗುಂಡಿಯಾಗಿದೆ
- ಉದ್ಯಾನವನಗಳ ನಿರ್ವಹಣೆ ಬಗ್ಗೆ ಗಮನಹರಿಸುತ್ತಿಲ್ಲ
- ರಾಜಕಾಲುವೆ ಮುಚ್ಚಿ ಮನೆ ನಿರ್ಮಾಣ; ಪಾರ್ಕಿಂಗ್ ಜಾಗವಾಗಿ ಬಳಕೆ

ಮೈಸೂರು, ಜ.8(ಎಸ್‌ಪಿಎನ್)– ವಿಜಯನಗರ ಒಂದನೇ ಹಂತ ಬಡಾವಣೆ (20ನೇ ವಾರ್ಡ್) ಅಧಿಕ ವಿದ್ಯಾವಂತರು, ಸ್ಥಿತಿವಂತರು, ಪ್ರಜ್ಞಾವಂತರು ನೆಲೆಸಿರುವ ಹಾಗೂ ನಗರಪಾಲಿಕೆಯ ಬೊಕ್ಕಸ ತುಂಬಿಸುವ ಬಡಾವಣೆ. ಆದರೆ ಈ ಬಡಾವಣೆಯಲ್ಲಿ ಪಾಳುಬಿದ್ದ ಉದ್ಯಾನವನ, ಹೂಳು ತುಂಬಿರುವ ರಾಜಕಾಲುವೆ, ಮೂಲಸೌಕರ್ಯ ವಂಚಿತ ಭಾನುವಾರದ ಸಂತೆ ರೈತ ಮಾರುಕಟ್ಟೆ.., ಹೀಗೆ ಸಾಲು ಸಾಲು ಸಮಸ್ಯೆಗಳ ಸರಮಾಲೆಯೇ ಇಲ್ಲಿದೆ.

ಖಾಲಿ ನಿವೇಶನದಲ್ಲಿ ಹಳೆ ಕಟ್ಟಡ ತ್ಯಾಜ್ಯ ವಿಲೇವಾರಿ: ವಿಜಯನಗರ ಮೊದಲ ಹಂತದ ಸಪ್ತಪದಿ ಕಲ್ಯಾಣ ಮಂಟಪದ ಹಿಂಭಾಗದ ಖಾಲಿ ನಿವೇಶನದಲ್ಲಿ ಕಟ್ಟಡ ತ್ಯಾಜ್ಯ ರಾಶಿರಾಶಿ ಬಿದ್ದಿವೆ. ಸ್ಥಳೀಯ ಅಧಿಕಾರಿಗಳು, ಜನಪ್ರತಿನಿಧಿಗಳ ಕುಮ್ಮಕ್ಕಿರಬಹುದು. ಈ ಸಮಸ್ಯೆಗೆ ಕಡಿವಾಣ ಹಾಕುವಂತೆ ಮನವಿ ಮಾಡಿದರೂ ಇವರು ಇತ್ತ ಗಮನಹರಿಸುತ್ತಿಲ್ಲ ಎಂದು ಇಲ್ಲಿನ ನಿವಾಸಿ ಕಿರಣ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.





ಕಾಂಕ್ರೀಟ್ ಹಾಕಿಕೊಳ್ಳುವವರಿಗೆ ಕಡಿವಾಣ ಹಾಕಿ: ಇಲ್ಲಿನ ಕ್ರೀಡಾಂಗಣದ ಮುಂಭಾಗದಿಂದ ಹುಣಸೂರು ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ರಾಜಕಾಲುವೆಯಲ್ಲಿ ಹೂಳು ತುಂಬಿಕೊಂಡು ಸಂಪೂರ್ಣ ಮುಚ್ಚಿ ಹೋಗಿದೆ. ಇನ್ನು ಅಲ್ಲಲ್ಲಿ ಮನೆ ಮಾಲೀಕರು, ವಾಹನಗಳ ಪಾರ್ಕಿಂಗ್ ಮಾಡಿಕೊಳ್ಳಲು ರಾಜಕಾಲುವೆ ಮೇಲೆ ಕಾಂಕ್ರೀಟ್ ಹಾಕಿಕೊಳ್ಳುತ್ತಿದ್ದಾರೆ. ಇದನ್ನು ತಡೆಗಟ್ಟಲು ಅಧಿಕಾರಿಗಳು ಮುಂದಾಗುತ್ತಿಲ್ಲ. ಮುಂದಿನ ದಿನಗಳಲ್ಲಿ ಹೂಳು ತುಂಬಿಕೊಂಡರೆ ರಾಜಕಾಲುವೆ ಸ್ವಚ್ಛತೆ ಮಾಡುವುದು ಹೇಗೆ?. ಒಬ್ಬರು, ಇಬ್ಬರು ಮಾಡುವ ಅನಾಚಾರಗಳಿಂದ ನೂರಾರು ಕುಟುಂಬಗಳು ತೊಂದರೆಗೊಳಗಾಗುತ್ತವೆ. ಈಗಲೇ ಅಧಿಕಾರಿಗಳು ಎಚ್ಚೆತ್ತು ಈ ರೀತಿಯ ಅಕ್ರಮಗಳಿಗೆ ಕಡಿವಾಣ ಹಾಕುವಂತೆ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಮನವಿ ಮಾಡಿದರು.



30ಕ್ಕೂ ಹೆಚ್ಚು ಉದ್ಯಾನವನ ಪಾಳು ಬಿದ್ದಿವೆ: ಈ ಬಡಾವಣೆಯಲ್ಲಿ 45ಕ್ಕೂ ಹೆಚ್ಚು ಉದ್ಯಾನವನಗಳಿವೆ. ಇದರಲ್ಲಿ 2–3 ಉದ್ಯಾನವನಗಳು ಐದು ಎಕರೆಗಿಂತ ದೊಡ್ಡದಾಗಿವೆ. ಮಿಕ್ಕ ಉದ್ಯಾನವನಗಳು 2 ಎಕರೆಗಿಂತ ಚಿಕ್ಕವು. ಇದರಲ್ಲಿ 10 ಉದ್ಯಾನವನಗಳನ್ನು ಮಾತ್ರ ಪಾಲಿಕೆ ಅಭಿವೃದ್ಧಿಪಡಿಸಿದೆ. ಉಳಿದ ಉದ್ಯಾನವನಗಳ ಜಾಗ ಭೂಗಳ್ಳರ ಪಾಲಾಗುವ ಮುನ್ನ ಹಸಿರೀಕರಣಕ್ಕೆ ಒತ್ತು ಕೊಡಬೇಕು. ಅಲ್ಲದೆ, ಈ ಪಾರ್ಕ್‌ಗಳನ್ನು ಗುರುತಿಸಲು ಕ್ರಮ ಸಂಖ್ಯೆ (1,2,3) ನೀಡುವಂತೆ ಮನವಿ ಮಾಡಿದರು.

ಹಸಿರೀಕರಣಕ್ಕೆ ಒತ್ತು ನೀಡುತ್ತಿಲ್ಲ: ಬಸವ ಸಮಿತಿ ಕಟ್ಟಡ ಹಿಂಭಾಗದ ಮೂರು ಚಿಕ್ಕ ಪಾರ್ಕ್‌ಗಳಿಗೆ ಇಲ್ಲಿನ ನಾಗರಿಕರೇ ಮುತುವರ್ಜಿ ವಹಿಸಿ ಹಸರೀಕರಣಕ್ಕೆ ಒತ್ತು ನೀಡಿದ್ದಾರೆ. ಈ ಪಾರ್ಕ್‌ಗಳಲ್ಲಿ ನೆಟ್ಟಿರುವ ಗಿಡಗಳಿಗೆ ಬೋರ್‌ವೆಲ್ ಮೂಲಕ ನೀರು ಪೂರೈಸುವಂತೆ ಮನವಿ ಮಾಡಿದರೂ ಅಧಿಕಾರಿಗಳು ಕ್ಯಾರೆ ಎನ್ನುತ್ತಿಲ್ಲ. ನಿರ್ವಹಣೆ ಮಾಡಲು ಮುಂದೆ ಬರುವ ಸಾರ್ವಜನಿಕರಿಗೆ ಸರಿಯಾದ ಸಹಕಾರ, ಸ್ಥಳೀಯ ಸಂಸ್ಥೆಗಳಿಂದ ಸಿಗುತ್ತಿಲ್ಲ ಎಂದು ಬೇಸರ ಹೊರಹಾಕಿದರು.

ಉದ್ಯಾನವನ ಜಾಗ ಸಂರಕ್ಷಣೆ ಮಾಡಬೇಕು: ವಿಜಯನಗರ ಒಂದನೇ ಹಂತದ ರಘುಲಾಲ್ ಮೆಡಿಕಲ್ಸ್ ಹಿಂಭಾಗದ ಪಾರ್ಕ್, ಪೋದಾರ್ ವಿದ್ಯಾಸಂಸ್ಥೆ ಪಕ್ಕದ ಉದ್ಯಾನವನ, ಚಿತ್ರಕಲಾ ಪರಿಷತ್ ಎದುರಿನ ಉದ್ಯಾನವನದ ಸುತ್ತಲೂ ಹಾಕಿರುವ ಕಬ್ಬಿಣದ ಬೇಲಿ ಮುರಿದು ಬಿದ್ದಿದ್ದು, ಇದನ್ನು ಸರಿಪಡಿಸಬೇಕು. ಉದ್ಯಾನವನಕ್ಕೆ ಮೀಸಲಿಟ್ಟ ಜಾಗದಲ್ಲಿ ಗಿಡಮರಗಳನ್ನು ನೆಟ್ಟು, ಪೋಷಿಸಲು ಪಾಲಿಕೆ ಸಿಬ್ಬಂದಿ ಮುಂದಾಗಬೇಕು. ಸರ್ಕಾರಿ ಜಾಗದಲ್ಲಿ ಸರ್ಕಾರಿ ಆಂಗ್ಲಮಾಧ್ಯಮ ಶಾಲೆ, ಆಟದ ಮೈದಾನ ನಿರ್ಮಿಸಬೇಕು ಎಂದು ಮನವಿ ಮಾಡಿದರು.

ಭಾನುವಾರ ರೈತ ಸಂತೆ ಮಾರುಕಟ್ಟೆಗೆ ವಿದ್ಯುತ್ ಕಲ್ಪಿಸಿ: ವಿಜಯನಗರ ಒಂದನೇ ಹಂತದಲ್ಲಿ ಪ್ರತಿ ಭಾನುವಾರ ರೈತ ಸಂತೆ ನಡೆಯುತ್ತಿದ್ದು, ಈ ಜಾಗದ ಸ್ವಚ್ಛತೆ ಮಾಡಬೇಕು. ಬೆಳಗ್ಗೆ–ಸಂಜೆ ಅನುಕೂಲಕಾರಿಯಾಗಿ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಮನವಿ ಮಾಡಿದರು. ಈ ವಿದ್ಯುತ್ ಬಿಲ್ ಅನ್ನು ಇಲ್ಲಿನ ವ್ಯಾಪಾರಸ್ಥರೇ ಭರಿಸಲು ಮುಂದೆ ಬಂದಿದ್ದಾರೆ. ಆದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ಕೆ.ಡಿ.ಸರ್ಕಲ್ ಹತ್ತಿರ ರೈತ ಮಾರುಕಟ್ಟೆ, 2ನೇ ಹಂತದ ಸ್ನೇಕ್ ಶ್ಯಾಂ ರಸ್ತೆ, ಸೆಸ್ಕಾಂ ಎದುರುಗಡೆ ಇರುವ ಭಾನುವಾರ ಸಂತೆ ರೈತ ಮಾರುಕಟ್ಟೆಗಳ ಸ್ವಚ್ಛತೆಗೆ ಆದ್ಯತೆ ನೀಡುವಂತೆ ಮನವಿ ಮಾಡಿದರು.



ವಿಜಯನಗರ ಒಂದನೇ ಹಂತದ 7ನೇ ಮುಖ್ಯರಸ್ತೆ, 9ನೇ ಅಡ್ಡ ರಸ್ತೆ ಕೂಡುವ ಸ್ಥಳದಲ್ಲಿರುವ ನಿವೇಶನ ಸಂಖ್ಯೆ 665ರ ಮುಂಭಾಗ ಮಳೆ ನೀರಿನ ಚರಂಡಿ ಇತ್ತು. ಈ ನಿವೇಶನದ ಮಾಲೀಕರು ಆ ಚರಂಡಿಯನ್ನು ಮುಚ್ಚಿಸಿ, ಅದರ ಮೇಲೆ ಬೃಹತ್ ಕಟ್ಟಡ ನಿರ್ಮಿಸಿದ್ದಾರೆ. ಇದರಿಂದ ಮಳೆಗಾಲದಲ್ಲಿ ಮಳೆ ನೀರು ಹರಿಯಲು ಅಡ್ಡಿಯಾಗುತ್ತಿದೆ. ಈ ಕಟ್ಟಡ ತೆರವುಗೊಳಿಸಿ, ಮಳೆ ನೀರು ಸರಾಗವಾಗಿ ಹರಿಯಲು ಚರಂಡಿ ಜಾಗ ಬಿಡಿಸುವಂತೆ ಹತ್ತಾರು ಬಾರಿ ಪಾಲಿಕೆ ಅಧಿಕಾರಿಗಳಲ್ಲಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಅಲ್ಲದೆ, ಕಳೆದ 10 ವರ್ಷಗಳ ಹಿಂದೆ ವ್ಯವಸ್ಥಿತವಾಗಿದ್ದ ಚರಂಡಿ ಹಳೆ ಚಿತ್ರವನ್ನು ಇಲ್ಲಿನ ನಿವಾಸಿ, ಯುವರಾಜ ಕಾಲೇಜು ನಿವೃತ್ತ ಪ್ರಾಧ್ಯಾಪಕಿ ಡಾ.ಸ್ವರ್ಣಮಾಲಾ ಶಿರಸಿ 'ಮೈಸೂರು ಮಿತ್ರ'ನ ಬಳಿ ಪ್ರದರ್ಶಿಸಿ, ಒತ್ತುವರಿ ಜಾಗದ ಸಂಪೂರ್ಣ ಮಾಹಿತಿ ನೀಡಿದರು.



ಚರಂಡಿ ಸ್ವಚ್ಛತೆಗೆ ಆಗ್ರಹ: ಈ ಬಡಾವಣೆಯ ಚರಂಡಿಗಳಲ್ಲಿ ಹೂಳು ತುಂಬಿಕೊಂಡಿರುವುದರಿಂದ ಮಳೆ ನೀರು ಚರಂಡಿ ಸರಾಗವಾಗಿ ಸಾಗದೇ, ರಸ್ತೆಗಳಲ್ಲಿ ಹರಿಯುತ್ತದೆ. ಈ ವೇಳೆ ಪಾದಚಾರಿಗಳು, ವಾಹನ ಸವಾರರ ಓಡಾಟಕ್ಕೆ ತೀವ್ರ ತೊಂದರೆಯಾಗುತ್ತಿದೆ. ಈ ಸಮಸ್ಯೆ ಬಗೆಹರಿಸಬೇಕು. ಈ ಬಡಾವಣೆಯ ವಾಟರ್ ಟ್ಯಾಂಕ್ ಸಮೀಪದ ಸಬ್ ರಿಜಿಸ್ಟ್ರಾರ್ ಕಚೇರಿ ಬಳಿ ಹೊಸದಾಗಿ ನಿರ್ಮಿಸಿರುವ ಸಾರ್ವಜನಿಕ ಶೌಚಾಲಯವನ್ನು ಸಾರ್ವಜನಿಕ ಉಪಯೋಗಕ್ಕೆ ಮುಕ್ತಗೊಳಿಸುವಂತೆ ಮನವಿ ಮಾಡಿದರು.

ನಕ್ಕರೆ ಅದೇ ಸ್ವರ್ಗ

ಮೊಮ್ಮಗ : ಅಜ್ಜ, ನಿಮ್ಮ ಪೆನ್ಷನ್‌ನಿಂದ ನಂಗೆ 500 ರೂ. ಸಾಲ ಕೊಡಿ...
ಅಜ್ಜ : ಯಾವಾಗ ವಾಪಸ್ ಕೊಡ್ತೀಯಾ?
ಮೊಮ್ಮಗ : ನಂಗೆ ಪೆನ್ಷನ್ ಬರುವಾಗ ಕೊಡ್ತೀನಿ...!

ಮೈಸೂರು ಮಿತ್ರ
ಮಂಗಳವಾರ, 9 ಜನವರಿ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಅಪವಾದಗಳಿಗೆ ಅತ್ಯುತ್ತಮ ಉತ್ತರ ಮೌನ –ಬೆನ್ ಜಾನ್ಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತಾಯಿ ಇದ್ದರೆ ತವರೆಚ್ಚು, ತಂದೆ ಇದ್ದರೆ ಬಳಗ ಹೆಚ್ಚು

ನಿಮ್ಮ ಪತ್ರಗಳು

ಸರೋಜಾದೇವಿ ದಕ್ಷಿಣ ಭಾರತದ ಓರ್ವ ಯಶಸ್ವಿ ನಾಯಕ ನಟಿ

ಮಾನ್ಯರೆ,



ಸೌಂದರ್ಯಕ್ಕೆ ಮತ್ತೊಂದು ಹೆಸರು ಅನ್ನಬಹುದಾದ ಕೆಲವೇ ನಟಿಯರ ಪೈಕಿ ಇತ್ತೀಚೆಗೆ ತಮ್ಮ 85ನೇ ಹುಟ್ಟುಹಬ್ಬ ಆಚರಿಸಿಕೊಂಡ ಹಿರಿಯ ನಟಿ ಬಿ.ಸರೋಜಾದೇವಿ ಅಗ್ರಗಣ್ಯರಾಗಿದ್ದಾರೆ. ತಮ್ಮ ಅಪೂರ್ವ ಚೆಲುವಿನೊಂದಿಗೆ ಪ್ರೌಢ ಅಭಿನಯವನ್ನು ಕರಗತ ಮಾಡಿಕೊಂಡಿರುವ ಶ್ರೀಮತಿ ಬಿ.ಸರೋಜಾದೇವಿ ದಕ್ಷಿಣ ಭಾರತದ ಓರ್ವ ಯಶಸ್ವಿ ನಾಯಕ ನಟಿ ಎನ್ನಿಸಿದ್ದರು. 1955 ರಲ್ಲಿ ತಮ್ಮ 17ನೇ ವಯಸ್ಸಿನಲ್ಲೇ ಹೊನ್ನಪ್ಪ ಭಾಗವತರ್ ಕಾಳಿದಾಸನಾಗಿ ಅಭಿನಯಿಸಿದ್ದ 'ಮಹಾಕವಿ ಕಾಳಿದಾಸ' ಚಿತ್ರದ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿದ ಈ ಸುಂದರ ತಾರೆ, ಕನ್ನಡ, ತಮಿಳು, ತೆಲುಗು ಮತ್ತು ಹಿಂದಿ ಭಾಷೆಗಳ ನೂರಾರು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಕನ್ನಡ ಚಿತ್ರರಂಗದ ಮೇರು ಪರ್ವತ ಡಾ.ರಾಜಕುಮಾರ್ ಜೊತೆ ನಾಯಕಿಯಾಗಿ ಅಣ್ಣ ತಂಗಿ, ಮಲ್ಲಮ್ಮನ ಪವಾಡ, ನ್ಯಾಯವೇ ದೇವರು, ಬಬ್ರುವಾಹನ, ಭಾಗ್ಯವಂತರು, ಶ್ರೀ ಕೃಷ್ಣ ರುಕ್ಮಿಣಿ ಸತ್ಯಭಾಮ, ಶ್ರೀನಿವಾಸ ಕಲ್ಯಾಣ ಮುಂತಾದ ಯಶಸ್ವಿ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. " ಯಾರಿವನು" (1985) ಚಿತ್ರದಲ್ಲಿ ದಿವಂಗತ ಪುನೀತ್ ರಾಜಕುಮಾರ್ ಅವರ ತಾಯಿಯಾಗಿ ಅಭಿನಯಿಸಿದ್ದಾರೆ. ಒಂದು ಹಂತದಲ್ಲಿ ಕನ್ನಡ ಚಿತ್ರರಂಗದ ಅತ್ಯಂತ ಬೇಡಿಕೆಯ ನಾಯಕ ನಟಿಯಾಗಿ ಹೊರಹೊಮ್ಮಿದ್ದ ಬಿ.ಸರೋಜಾದೇವಿ ತಮಿಳು, ತೆಲುಗು, ಹಿಂದಿ ಭಾಷೆಗಳ ಹಲವಾರು ಯಶಸ್ವಿ ಚಿತ್ರಗಳ ನಾಯಕಿ ನಟಿಯೂ ಕೂಡ ಹೌದು. ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ದಿವಂಗತ ಎಂ.ಜಿ.ರಾಮಚಂದ್ರನ್ ಜೊತೆ ಸಹ "ನಾಡೋಡಿ ಮನ್ನನ್" ಸೇರಿದಂತೆ ಹಲವಾರು ಚಿತ್ರಗಳಲ್ಲಿ ಅಭಿನಯಿಸಿರುವ ಸರೋಜಾದೇವಿ" ಚಿತ್ರಬ್ರಹ್ಮ ಬಿ.ಆರ್. ಪಂತುಲು ನಿರ್ದೇಶಿಸಿದ "ಕಿತ್ತೂರು ಚೆನ್ನಮ್ಮ"ಚಿತ್ರದಲ್ಲಿ ಚೆನ್ನಮ್ಮನಾಗಿ ಅತ್ಯಂತ ಮನೋಜ್ಞವಾಗಿ ಅಭಿನಯಿಸಿದ್ದಾರೆ. ಕನ್ನಡಿಗರು ಅವರನ್ನು ಪ್ರೀತಿಯಿಂದ ಇಂದಿಗೂ ಸಹ "ಚೆನ್ನಮ್ಮ" ಎಂದೇ ಕರೆಯುತ್ತಾರೆ. ಓರ್ವ ನಟಿಗೆ ಇದಕ್ಕಿಂತ ದೊಡ್ಡ ಗೌರವ ಬೇರೇನಿದೆ? ಒಂದು ಪಾತ್ರದ ಮೂಲಕ ಇಡೀ ರಾಜ್ಯದ ಅಷ್ಟೇ ಏಕೆ ಇಡೀ ದೇಶದ ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾದ ಕೆಲವೇ ನಟಿಯರ ಪೈಕಿ ಸರೋಜಾದೇವಿ ಕೂಡ ಒಬ್ಬರು. ಕೇಂದ್ರ ಸರ್ಕಾರದಿಂದ ಪದ್ಮಶ್ರೀ (1969) ಮತ್ತು ಪದ್ಮಭೂಷಣ (1992) ಪ್ರಶಸ್ತಿಗಳನ್ನು ಪಡೆದಿರುವ ಸರೋಜಾದೇವಿಯವರು ಕರ್ನಾಟಕ ಕರಕುಶಲ ಮಂಡಳಿಯ ಅಧ್ಯಕ್ಷರಾಗಿಯೂ ಹಾಗೂ ಸೆನ್ಸಾರ್ ಬೋರ್ಡಿನ ಸದಸ್ಯೆಯಾಗಿಯೂ ಕಾರ್ಯ ನಿರ್ವಹಿಸಿದ್ದಾರೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ನಕಲಿ ದಾಖಲೆ ಸೃಷ್ಟಿಸಿ ಖಾತೆ

ಮಾನ್ಯರೆ,

ಮೈಸೂರು ತಾಲೂಕು ವಾಜಮಂಗಲ ಗ್ರಾಮ ಸರ್ವೆ ನಂಬರ್ 367/4ಎ1ಎರಲ್ಲಿನ ನಮಗೆ ಸೇರಿದ 3 ಗುಂಟೆ ಜಾಗವನ್ನು ನ್ಯಾಯಾಲಯದಲ್ಲಿ ಕೇಸ್ ನಡೆಯುತ್ತಿದ್ದರೂ ಕೂಡ ಗ್ರಾಪಂ ಪಿಡಿಓರವರು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಕವಡೆಕಟ್ಟೆ ಸಿದ್ದಶೆಟ್ಟಿ ಎಂಬುವರ ಮಕ್ಕಳಾದ ಸಿದ್ದರಾಜು ಮತ್ತು ಮರಿಸ್ವಾಮಿಯವರಿಗೆ ಖಾತೆ ಮಾಡಿಕೊಟ್ಟಿದ್ದು, ಅವರ ಪತ್ನಿಯರ ಹೆಸರಿಗೆ ದಾನಪತ್ರ ರಿಜಿಸ್ಟ್ರೇಷನ್ ಮಾಡಿಸಿಕೊಟ್ಟಿದ್ದಾರೆ. ಈ ಸಂಬಂಧ ನಾವು ಹಿರಿಯ ಪೊಲೀಸ್ ಅಧಿಕಾರಿಗಳು ಮತ್ತು ತಹಸೀಲ್ದಾರರಿಗೆ ಮನವಿ ಕೊಟ್ಟಿದ್ದು, ಹಿರಿಯ ಅಧಿಕಾರಿಗಳು ನಮಗೆ ರಕ್ಷಣೆ ನೀಡುವಂತೆ ಸೂಚಿಸಿದರೂ ಕೂಡ ವರುಣ ಠಾಣೆ ಪೊಲೀಸರು ನಮಗೆ ರಕ್ಷಣೆ ಕೊಡುತ್ತಿಲ್ಲ. ಇದರಿಂದಾಗಿ ನಮ್ಮ ಕಟ್ಟಡ ಕಾಮಗಾರಿ ಪೂರ್ಣಗೊಳಿಸಲು ಆಗುತ್ತಿಲ್ಲ. ನಮಗೆ ನ್ಯಾಯ ಒದಗಿಸಬೇಕೆಂದು ಮನವಿ.

– ಸಿದ್ದರಾಜು, S/o ಕೆಂಪಶೆಟ್ಟಿ, ವಾಜಮಂಗಲ

ಸ್ವಚ್ಛತೆ ಪಾಠದಷ್ಟೇ ಮುಖ್ಯ, ಅವಮಾನಕರವಲ್ಲ

ಮಾನ್ಯರೆ,

ಶಾಲೆಗಳಲ್ಲಿ ಮಕ್ಕಳು ಸ್ವಚ್ಛತೆ ಕೆಲಸ ಮಾಡುವುದು ತಪ್ಪಲ್ಲ ಎಂಬ ವಿಧಾನಸಭಾ ಸಭಾಪತಿ ಯು.ಟಿ.ಖಾದರ್ ಅವರ ಅಭಿಪ್ರಾಯವನ್ನು ನಿರ್ಲಿಪ್ತ ಮನಸ್ಸಿನಿಂದ ಯೋಚಿಸಿ ಒಪ್ಪಿಕೊಳ್ಳಬೇಕಾಗಿದೆ. ಶಾಲೆಯಲ್ಲಿನ ಸ್ವಚ್ಛತಾ ಕೆಲಸವನ್ನು ಮಾಡುವ ಮೂಲಕ ಮಕ್ಕಳು ಸ್ವಚ್ಛ ಭಾರತದಲ್ಲಿ ಭಾಗವಹಿಸುವುದನ್ನು ಕಲಿತಂತಾಗುತ್ತದೆ ಮಾತ್ರವಲ್ಲ ಸ್ವಚ್ಛತಾ ಕಾರ್ಯ ದಾಸ್ಯವಲ್ಲ. ಅದೊಂದು ಸ್ವಾವಲಂಬನೆಯ ಪ್ರತೀಕ ಎಂಬುದನ್ನು ಮಕ್ಕಳು ಶಾಲೆಯಿಂದಲೇ ಕಲಿಯಬೇಕಿದೆ. ಇದರಿಂದ ಮಕ್ಕಳಿಗೆ ತಳ ಮಟ್ಟದಿಂದಲೇ ನಮ್ಮ ನಮ್ಮ ಸ್ವಚ್ಛತೆಯನ್ನು ನಾವೇ ಮಾಡಿಕೊಳ್ಳಬೇಕಾದುದು ನಮ್ಮ ಕರ್ತವ್ಯ ಎಂಬುದನ್ನು ಅರಿತಂತಾಗುತ್ತದೆ ಮಾತ್ರವಲ್ಲ ಅದರಲ್ಲಿ ಎಲ್ಲಾ ಮಕ್ಕಳು ಪಾಲ್ಗೊಳ್ಳುವುದು ಕಡ್ಡಾಯವಾಗುವುದರಿಂದ ದೊಡ್ಡವರ ಮಕ್ಕಳು, ಬಡವರ ಮಕ್ಕಳು ಮೇಲ್ಜಾತಿಯವರು, ಕೆಳ ಜಾತಿಯವರು ಎಂಬ ತಾರತಮ್ಯವೇ ಇಲ್ಲದೆ ಸೌಜನ್ಯ ಕಲಿತು ಎಲ್ಲರೂ ಎಲ್ಲರಿಗಾಗಿ ಎಂಬ ಸಮಾನತೆಯ ಸಾಮಾಜಿಕ ಅರಿವು ಪ್ರಾಥಮಿಕ ಹಂತದಿಂದಲೇ ಬರಲು ಸಹಾಯಕವಾಗುತ್ತದೆ.

ನಾವು ಚಿಕ್ಕವರಿದ್ದಾಗ ನಮಗೆ ಶಾಲಾ ಆವರಣವನ್ನು, ತರಗತಿಗಳನ್ನು ಸ್ವಚ್ಛ ಮಾಡಿಕೊಳ್ಳುವುದು ನಮ್ಮ ಕರ್ತವ್ಯವಾಗಿತ್ತು. ಅದನ್ನು ಯಾವ ಹಿಂಜರಿಕೆಯೂ ಇಲ್ಲದೇ ಉತ್ಸಾಹದಿಂದಲೇ ನಾವು ಮಾಡುತ್ತಿದ್ದೆವು. ದೇಶದ ಪ್ರಧಾನ ಮಂತ್ರಿಗಳು ಪೊರಕೆ ಹಿಡಿದು ಬೀದಿ ಗುಡಿಸುವ ಮೂಲಕ ಸ್ವಚ್ಛತೆಯ ವಿಷಯದಲ್ಲಿ ಎಲ್ಲರೂ ಸಮಾನರು ಎಂದು ಸಾರಿ ಸಾರಿ ಹೇಳುತ್ತಿರುವಾಗ, ನಾವು ಪ್ರತಿಷ್ಠೆಗೊಳಗಾಗಿ ಒಂದು ಸಾಮಾಜಿಕ ಪರಿವರ್ತನೆಯ ವಿಷಯವನ್ನೇ ಮುಚ್ಚಿ ಹಾಕುವುದು ಸೂಕ್ತವಲ್ಲ. ಸ್ವಾತಂತ್ರ್ಯ ಚಳುವಳಿಯ ಸಮಯದಲ್ಲಿ ಮಹಾತ್ಮ ಗಾಂಧೀಜಿ ಮತ್ತು ಕಸ್ತೂರಬಾರವರು ಶೌಚಾಲಯಗಳನ್ನು ಸ್ವಚ್ಛ ಮಾಡುತ್ತಿದ್ದುದನ್ನು ಪಾಠದಲ್ಲಿ ಓದಿ ಬೆಳೆದ ನಾವು ಇಂದು ಮಕ್ಕಳಿಗೆ ಸಾಮಾಜಿಕ ಹೊಂದಾಣಿಕೆ, ಹೊಣೆಗಾರಿಕೆ ಮತ್ತು ಸ್ವಚ್ಛತೆ ಅರಿವಿರದಂತೆ ಮಾಡುವುದು ಸರಿಯಾಗುವುದಿಲ್ಲ. ಹೀಗೆ ಚಿಕ್ಕಂದಿನಲ್ಲಿಯೇ ಸ್ವಚ್ಛತೆಯನ್ನು ಕಲಿಸದಿರುವುದರಿಂದಲೇ ಇಂದಿನ ಯುವ ಜನಾಂಗ ತಮ್ಮ ಮನೆಯಲ್ಲಿರುವ ಹಿರಿಯರ, ತಂದೆ ತಾಯಿಗಳ ಸೇವೆಯ ವಿಷಯದಲ್ಲಿ ಮುಜುಗರ ಅಸಹ್ಯ ಪಟ್ಟುಕೊಳ್ಳುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳುತ್ತಿದ್ದು, ಇಂದಿನ ಹಿರಿಯ ನಾಗರಿಕರು ದಿಕ್ಕಿಲ್ಲದಂತಾಗುತ್ತಿದ್ದಾರೆ.

ಇಷ್ಟಕ್ಕೂ ನಮ್ಮ ಸರಕಾರಿ ಶಾಲೆಗಳಲ್ಲಿ ಸ್ವಚ್ಛತೆಗಾಗಿ ಪ್ರತ್ಯೇಕ ನೌಕರರಿದ್ದಾರೆ. ಹೆಚ್ಚಿನ ಶಾಲೆಗಳಲ್ಲಿ ಗ್ರೂಪ್ ಡಿ ಹುದ್ದೆಗಳೇ ಇಲ್ಲ. ಇದ್ದರೂ ಭರ್ತಿಯಾಗಿಲ್ಲ. ಸ್ವಚ್ಛತೆಗೆ ನೌಕರರೇ ಇಲ್ಲದಿರುವಾಗ ಶಾಲೆಗಳ ಸ್ವಚ್ಛತೆಯನ್ನು ಯಾರು ಮಾಡಬೇಕೆಂದು ಸರಕಾರ ಮತ್ತು ಸಮಾಜ ನಿರೀಕ್ಷಿಸುತ್ತಿದೆ ಎಂಬುದು ಅರ್ಥವಾಗುತ್ತಿಲ್ಲ. ಸ್ವಚ್ಛತೆ ಎಂಬುದು ಹೀನಕೆಲಸ ಎಂದು ಸರಕಾರವೇ ಬಗೆದರೆ ನೌಕರರು ಮಾಡಬೇಕು ಎಂದು ಹೇಳುವುದು ಕೂಡ ಕಷ್ಟವಾಗುತ್ತದೆ ಅಲ್ಲವೇ? ಸ್ವಚ್ಛತೆ ಎಂಬುದು ನಮ್ಮ ಪಾಠದಷ್ಟೇ ಮುಖ್ಯವಾದ; ಅವಮಾನವಲ್ಲದ ಕೆಲಸ ಎಂದು ಮಕ್ಕಳಲ್ಲಿ ಸಾಮಾಜಿಕ ಅರಿವು ಮೂಡಿಸಲು ವಿರೋಧ ಎದುರಿಸಿಯಾದರೂ ಸರಕಾರ ನಿಯಮ ರೂಪಿಸಿ ಅನುಷ್ಠಾನಕ್ಕೆ ತರಲೇಬೇಕಿದೆ. ನಿರ್ಭಿಡೆಯಿಂದ ಹೇಳುವ ಸಾಹಸ ಮಾಡಿದ ಸಭಾಪತಿ ಯು.ಟಿ. ಖಾದರ್ ಅವರಿಗೆ ಅಭಿನಂದನೆಗಳು ಮತ್ತು ಧನ್ಯವಾದಗಳು.

–ದೊಡ್ಡಕಮರವಳ್ಳಿ ಸಿದ್ದಲಿಂಗಪ್ಪ, ಮೈಸೂರು.



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಮನಸ್ಸಿಗೊಂದು ಮೆಲುದನಿಯ ಮಾತು...



ಮನುಷ್ಯನ ದೇಹ ಕೂಡ ಮೆಷಿನ್ ಟೂಲ್ಸ್‌ನಂತೆ ನವೀಕೃತಗೊಂಡು, ಅಲಂಕೃತಗೊಂಡು ಆಸೀನವಾಗಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಈ ಕೊರೊನಾ ಕಾಲದಲ್ಲಿ ಖಾಸಗಿ ವಲಯದ ಉದ್ಯೋಗದಲ್ಲಿ ಶೇಕಡಾವಾರು ಖೋತಾ ಆಗಿದೆ. ಕೇಂದ್ರ ಸರ್ಕಾರದ ಅಸಹಾಯಕ ನೌಕರರನ್ನು ತೆಗೆಯುವ ನಿರ್ಧಾರ ಹಿಂದೊಮ್ಮೆ ಸದ್ದು ಮಾಡಿತ್ತು. ಒಟ್ಟಾರೆ ಮನುಷ್ಯ ನಿರಂತರವಾಗಿ ಕಲಿಯುವ ವಿದ್ಯಾರ್ಥಿ ಎಂಬುದೇನೋ ಸರಿ!

ಬದುಕು ಕಟ್ಟಿಕೊಳ್ಳಲಿಕ್ಕಾಗಿ ನೌಕರಿ, ಬೇಸಾಯ, ವ್ಯಾಪಾರ ಕೂಲಿನಾಲಿ ಇತ್ಯಾದಿ ಸಂಪಾದನೆಗಳನ್ನು ಮಾಡಿಕೊಂಡು ಜೀವನರಥ ಎಳೆಯುವ ನಾವು ನಮ್ಮ ನಮ್ಮ ಕೆಲಸಗಳಲ್ಲಿ ಪ್ರತೀ ದಿನ ಇದ್ದಂತೆಯೇ ಇದ್ದು ಬಿಡುವ ಕಾಲ ಮುಗೀತು! ಯಾಕೆಂದರೆ ಈಗ ಕಾಲ ಬದಲಾಗಿದೆ. ಬದಲಾವಣೆ ಜಗದ ನಿಯಮ. ಕಾಲ ಬದಲಾಯಿತು ಎನ್ನುವ ಮಾತು ನಮಗೆ ಇಂದು ನಿನ್ನೆಯದಲ್ಲ. ಪ್ರತೀ ಶತಮಾನಗಳ ಹರಿಯುವಿಕೆ ಮತ್ತು ಯುಗಾಂತ್ಯದ ಕೊನೆವರೆಗೆ ಈ ಮಾತು ಚಾಲ್ತಿಯಲ್ಲಿರುತ್ತದೆ. ತ್ರೇತಾಯುಗದಲ್ಲಿ, ಕೃತಯುಗದಲ್ಲಿ, ದ್ವಾಪರದಲ್ಲಿ, ಕಲಿಯುಗದಲ್ಲಿ, ಯಾವುದೆಲ್ಲಾ ಹೇಗಿತ್ತು ಈಗ ಹೇಗಾಯ್ತು ಎಂಬ ವಿಚಾರಗಳನ್ನು ನೈತಿಕತೆ ಮತ್ತು ಧಾರ್ಮಿಕತೆಯ ವಿಷಯಗಳ ಆಧಾರದ ಮೇಲೆ ಉಲ್ಲೇಖಿಸಿದ ಹತ್ತಾರು ವಿವರಗಳು ನಮಗೆ ಗೊತ್ತು. ಆದರೆ ಕೃಷಿ, ಕೈಗಾರಿಕೆ, ವಾಣಿಜ್ಯ, ವಹಿವಾಟು, ನೌಕರಿ, ಉತ್ಪಾದನೆ ಹೀಗೆ ಹತ್ತಾರು ವೃತ್ತಿಗಳಲ್ಲಿ ತೊಡಗಿ ಜೀವನ ನಿರ್ವಹಣೆ ಮಾಡುತ್ತಾ ಬಂದ ಮನುಷ್ಯ ಲೋಕ ಪ್ರತೀ ಕಾಲಕ್ಕೂ ನಾಗರಿಕತೆಯ ನಾಗಾಲೋಟಕ್ಕೆ ಸ್ಪಂದಿಸಿ ಹೆಜ್ಜೆ ಹಾಕಿದೆ. ಬದಲಾದ ಕಾಲಮಾನಕ್ಕೆ ತಕ್ಕಂತೆ ಮನೋಭಾವನೆ ಬದಲಾಯಿತು. ಆದರೆ 'ಕೌಶಲ್ಯಾಧಾರಿತ ವೃತ್ತಿ ಪರಿಣತಿ' ಎಂಬ ಹೊಸ ಜಾಗೀರ್‌ದಾರರು ಬಂದು ಹೊಸ ಯುವ ಪಡೆಯನ್ನು ಹೇಗೆ ಕಂಗೆಡಿಸಿದೆ ಎಂದರೆ ಅದೇ ಒಂದು ವಿಸ್ಮಯ!

ಐಟಿ–ಬಿಟಿ ಕ್ಷೇತ್ರಗಳು ಬೆಳೆದು ಅತೀ ಹೆಚ್ಚು ಸಂಬಳದ ರುಚಿ ತೋರಿಸಿ ಯುವ ಸಮುದಾಯವನ್ನು ಆಕರ್ಷಿಸಿದ ಕಾಲಮಾನವಿದು. ದೊಡ್ಡ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳು, ಮುಗಿಲೆತ್ತರಕ್ಕೆ ತಲೆಎತ್ತಿ ಜಗತ್ತನ್ನೇ ಒಂದು ಮುಷ್ಟಿಯೊಳಗೆ ತಂತ್ರಜ್ಞಾನದ ಮಾಂತ್ರಿಕತೆಯೊಂದಿಗೆ ಪಳಗಿಸಿದ ಬದಲಾವಣೆಯನ್ನು ಕಣ್ಣಾರೆ ಕಂಡವರು ನಾವು. 'ಅಮೆರಿಕನ್ ಟೈಮ್ಸ್' ಪತ್ರಿಕೆಯನ್ನು ಅದು ಪ್ರಿಂಟಾದ ಕೂಡಲೇ ವಿಶ್ವದ ಯಾವ ಮೂಲೆಯಲ್ಲಿದ್ದರೂ ಅಂಗೈಯಲ್ಲಿ ಸ್ಕ್ರಾಲ್ ಮಾಡುತ್ತಾ ಓದಿದವರು ನಾವು. ಭಾರತದಲ್ಲಿ ಬೆಳೆದ ಗುಲಾಬಿ ಫ್ಲೋರಿಡಾದ ಹೂಕುಂಡಗಳಲ್ಲಿ ಬೆಳಗಾಗುವುದರಲ್ಲಿ ಅರಳಿ ನಗುವುದನ್ನು ಕಂಡವರು ನಾವು. ಡೆನ್ಮಾರ್ಕಿನ ಹಾಲು ಆಸ್ಟ್ರೇಲಿಯಾದ ಟೀ ಕೆಟಲುಗಳಲ್ಲಿ ಕುದಿಯುವ ಪರಿ ನೋಡಿದವರು ನಾವು. ವಿಶ್ವದ ಭೂಪಟವೇ ಹೀಗೆ ಚಿಕ್ಕದಾಗಲು ಕಾರಣ ವಿಜ್ಞಾನದ ತಾಂತ್ರಿಕ ಲೋಕ ಅನಾವರಣಗೊಂಡ ಪರಿಣಾಮ.

ಇಂಥ ಕಾಲಘಟ್ಟದಲ್ಲಿ ತಾಂತ್ರಿಕ ಶಿಕ್ಷಣ, ವಿಜ್ಞಾನದ ಪದವೀಧರರು, ಎಂಜಿನಿಯರಿಂಗ್ ಗ್ರಾಜುಯೇಟುಗಳು, ಐಟಿ–ಬಿಟಿ ಕ್ಷೇತ್ರಗಳಲ್ಲಿ ಉದ್ಯೋಗ ಅರಸಿ ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ಉದ್ಯೋಗ ಗಿಟ್ಟಿಸಿಕೊಂಡು ಅಲ್ಲೇ ನೆಲೆಯೂರಿ ಬದುಕು ಕಟ್ಟಿಕೊಂಡರು. ಅಧಿಕ ಸಂಬಳ ಬರುವ ಕಾರಣ ತರುಣ ತಲೆಮಾರಿನ ಆರ್ಥಿಕ ಸ್ಥಿತಿ ಜೀವನ ಶೈಲಿ ಎಲ್ಲವೂ ಸುಧಾರಿಸಿತು. ಒಂದು ಐಷಾರಾಮಿ ವೈಭವದ ಜೀವನಕ್ಕೆ ಅಮ್ಮ, ಅದರ ಕುಟುಂಬ ಒಗ್ಗಿ ಹೋಯಿತು. ಕಾರ್ಪೊರೇಟ್ ಸೆಕ್ಟರ್‌ನಲ್ಲಿ ನಮ್ಮ ಮನೆಯ ಹುಡುಗನೊಬ್ಬ ಡಾಲರ್ ಲೆಕ್ಕದಲ್ಲಿ ದುಡಿಯುತ್ತಾನೆ ಎಂಬ ಉದ್ಯೋಗ ಖಾತ್ರಿಯೇ ಆ ಕುಟುಂಬಕ್ಕೊಂದು ಸಾಮಾಜಿಕ ಸ್ಥಾನಮಾನ ಕಲ್ಪಿಸಿದಂತೆ! ಇತ್ತು ಈಗಲೂ ಇದೆ. ಯಾವಾಗ ಈ ಐಟಿಬಿಟಿ ಕ್ಷೇತ್ರ ಗರಿಗೆದರಿ ಮೂಟೆಗಟ್ಟಲೆ ಸಂಬಳದ ಲೆಕ್ಕದಲ್ಲಿ ದುಡ್ಡು ಕೊಟ್ಟಿತೋ ಸಾಮಾನ್ಯ ಪದವೀಧರರ, ಸರಕಾರಿ ನೌಕರರ ಉದ್ಯೋಗ ಸಂಬಳಗಳು ಐಟಿ ಬಿಟಿ ಸೆಕ್ಟರಿನ ಸಂಬಳ ಮತ್ತು ಚರಿಷ್ಮಾದ ಮುಂದೆ ಡಲ್ಲು ಹೊಡೆಯತೊಡಗಿದವು. ಆದರೆ ಈ ಎರಡೂ ವೃತ್ತಿಗಳ ನಡುವೆ ಕೂದಲೆಳೆಯ ಅಂತರದಲ್ಲಿ ವ್ಯತ್ಯಾಸವೊಂದಿತ್ತು. ಖಾಸಗಿ ಕಂಪನಿಗಳ ಈ ಅಧಿಕ ಸಂಬಳ ಮತ್ತು ಚರಿಷ್ಮಾಗಳು ಬೇಗ ಬೇಗ ದುಪ್ಪಟ್ಟಾಗುತ್ತಿತ್ತು. ಸಾಮಾನ್ಯ ಪದವೀಧರರ ಸಂಬಳ ಸಾರಿಗೆಗಳು ಆಮೆ ವೇಗದಲ್ಲಿ ಏರುತ್ತಿದ್ದವು. ಆರ್ಥಿಕತೆಯ ಹಿಗ್ಗುವಿಕೆ ಸಮಾನಾಂತರವಾಗಿಲ್ಲದಿರುವುದಕ್ಕೆ ಅವರು ಕೊಡುತ್ತಿದ್ದ ಕಾರಣಗಳೇನು ಗೊತ್ತಾ? 'ಕೌಶಲ್ಯಾಧಾರಿತ ವೃತ್ತಿ ಪರಿಣತಿ' ಎಂಬುದು. ಅಂದರೆ ಕಂಪ್ಯೂಟರಿನ ಮುಂದೆ ಕುಳಿತು ಕೆಲಸ ಮಾಡುವವರ ಸ್ಪೀಡು ಗಂಟೆಗಳ ಲೆಕ್ಕವೇ ಇಲ್ಲದೆ ದುಡಿವ ಅವಿರತ ದುಡಿಮೆ, ಹಗಲು ರಾತ್ರಿಗಳ ಪರಿವೆಯೇ ಇಲ್ಲದೆ ಕೆಲಸದಲ್ಲಿ ತೊಡಗಿಸಿಕೊಂಡವರ ಶ್ರಮ. ಇವಿಷ್ಟನ್ನೂ ಸಾಮಾನ್ಯ ನೌಕರ ವರ್ಗದಲ್ಲಿ ಕಾಣಲಾಗುವುದಿಲ್ಲ, ಆ ಕಾರಣಕ್ಕೇ ಕಾರ್ಪೊರೇಟ್ ವಲಯ ತನ್ನ ನೌಕರರ ಹಿತ ಕಾಯುತ್ತಿದೆ ಎಂಬ ವರ್ತಮಾನ ಜಾರಿಯಲ್ಲಿತ್ತು. ಇಷ್ಟಾಗಿಯೂ ಕಾಲ ಬದಲಾದಂತೆಲ್ಲಾ ಈ ತಾಂತ್ರಿಕತೆಯ ಮಾಂತ್ರಿಕತೆಯೂ ಕೂಡ ಕಾಲಕ್ಕೆ ತಕ್ಕಂತೆ ಅಪ್‌ಡೇಷನ್ ಕೇಳುತ್ತಿದೆ. ಇಲ್ಲಿಯೂ ಕಾಲ ಬದಲಾಗಿದೆ.

ಈ ಹಿಂದಿನ ಹತ್ತು ವರ್ಷಗಳಲ್ಲಿ ಕಾರ್ಪೊರೇಟ್ ಕಂಪನಿಗಳಿಗೆ ಕೆಲಸಕ್ಕೆ ಸೇರಿ ಸೀನಿಯರ್ ಎನಿಸಿಕೊಂಡ ಅನೇಕರಿಗೆ ಕೊರೊನಾ ದಿನಗಳಲ್ಲಿ ಸಾಕಷ್ಟು ಕೆಲಸ ಹೋಗಿದೆ. ಹಿಂದೆ ಬರುತ್ತಿದ್ದ ಅಧಿಕ ಸಂಬಳ ಸವಲತ್ತುಗಳು ಕಡಿಮೆಯಾಗಿವೆ. ಈ ಹೆಚ್ಚು ಕಡಿಮೆಗಳು ತೀರಾ ಸಾಮಾನ್ಯವೆನ್ನಬಹುದಾದ ವಿಷಯಗಳು. ಆದರೆ ಈಗ ಶುರುವಾಗಿರುವ ಹೊಸ ಟ್ರೆಂಡ್ ಏನೆಂದರೆ ಒಬ್ಬ ಸೀನಿಯರ್‌ಗೆ ಕೊಡುವ ಸಂಬಳದ ದರಕ್ಕೆ ಮೂರು ಜನ ಹೊಸ ಪ್ರತಿಭೆಗಳು ಆ ಹಿರಿಯ ನೌಕರನ ಸ್ಥಾನ ತುಂಬುತ್ತವೆ ಎಂಬುದು ಅದರಲ್ಲೂ ಎಂಥ ಸ್ಪರ್ಧೆ ಎಂದರೆ ಈ ಹಿಂದಿನ ಹಿರಿಯ ನೌಕರನಿಗಿಂತ ಹೊಸದಾಗಿ ಸೇರ್ಪಡೆಯಾಗುವ ಉತ್ಸಾಹಿ ಯುವ ಪ್ರತಿಭೆ ತಾಂತ್ರಿಕವಾಗಿ ತುಂಬಾ ಸ್ಟ್ರಾಂಗು. ಕೆಲಸ ಮಾಡುವ ಎನರ್ಜಿ, ಆಸಕ್ತಿ, ಕಲಿತ ವಿದ್ಯೆ ಮಾಡುವ ಉದ್ಯೋಗ ಎಲ್ಲಕ್ಕೂ ನೂತನ ಮಾದರಿ. ಬಹುರಾಷ್ಟ್ರೀಯ ಕಂಪನಿಗಳ ಮೆಷನರಿ ಮನಸ್ಸುಗಳಿಗೆ ಆ ಹಿರಿಯ ನೌಕರನ ಕ್ಷೇಮ, ಆತನ ಕುಟುಂಬ ಮತ್ತು ಆತ ನಡೆಸಿದ ಜೀವನ ಶೈಲಿ ಯಾವುದರ ಬಗ್ಗೆಯೂ ಚಿಂತೆ ಇದ್ದಂತೆ ಕಾಣುತ್ತಿಲ್ಲ. ಮಾರುಕಟ್ಟೆಯಂತೆಯೇ ಮನುಷ್ಯ ಮತ್ತು ಆತನ ಜೀವನಶೈಲಿ ಕೂಡ ದರ ಪಟ್ಟಿಯಂತೆಯೇ ಕಾಲಾನುಕಾಲಕ್ಕೆ ಬದಲಾಗುತ್ತಿರುತ್ತದೆ. ಅವರ ಆದ್ಯತೆಗಳೇನಿದ್ದರೂ ಕಂಪನಿಯ ಹಿತಾಸಕ್ತಿ ಆ ಹಿರಿಯ ನೌಕರ ಕೂಡ ಬಂದ ಹೊಸದರಲ್ಲಿ ಈ ತರುಣ ನೌಕರನಂತೆಯೇ ಇದ್ದ. ಕಾಲಕ್ರಮೇಣ ಈ ತರುಣ ನೌಕರ ಕೂಡ ಆ ಹಿರಿಯ ನೌಕರನ ಸ್ಥಿತಿಗೆ ಸರಿದು ಹೋಗುವ ಕಾಲ ಬಂದೇ ಬರುತ್ತದೆ. ಆದರೆ ವ್ಯಾಪಾರಿ ಮನೋವೃತ್ತಿಯ ಕಂಪನಿ ಮನಸ್ಥಿತಿಗಳ ಮುಂದೆ ಅತೀ ದೊಡ್ಡ ಮಾನವ ಸಂಪನ್ಮೂಲ ಕೌಶಲ್ಯಾಧಾರಿತ ಪರಿಣತಿಯೊಂದಿಗೆ ಪರೇಡ್ ಮಾಡುತ್ತಿದೆ. ಕಣ್ಣಿಗೆ ಕಾಣದ ಆರ್ಥಿಕ ಹೊಡೆತವೊಂದು ಪರಿಣತಿ ಮತ್ತು ಅಪ್‌ಡೇಷನ್ನಿನ ಹೆಸರಿನಲ್ಲಿ ಆಟವಾಡುತ್ತಿದೆ. ಅಷ್ಟಕ್ಕೂ ಸರಕಾರಿ ನೌಕರನ ನಿವೃತ್ತಿಯ ವಯಸ್ಸು ಅರವತ್ತಾದರೆ ಬಹುರಾಷ್ಟ್ರೀಯ ಕಂಪನಿಗಳ ಸ್ವಾಮ್ಯದಲ್ಲಿ ಮೂವತ್ತರ ಆಸುಪಾಸಿಗೇನೆ ಕಣ್ಣು, ಬೆನ್ನು, ಮನಸ್ಸು ವಿಶ್ರಾಂತಿ ಕೇಳುತ್ತದೆ. ಚಲನಶೀಲತೆ ಬೇಕೆಂದರೆ ಅಪ್‌ಡೇಷನ್ ಕೇಳುತ್ತದೆ. ಮನುಷ್ಯನ ದೇಹ ಕೂಡ ಮೆಷಿನ್ ಟೂಲ್ಸ್‌ನಂತೆ ನವೀಕೃತಗೊಂಡು, ಅಲಂಕೃತಗೊಂಡು ಆಸೀನವಾಗಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಈ ಕೊರೊನಾ ಕಾಲದಲ್ಲಿ ಖಾಸಗಿ ವಲಯದ ಉದ್ಯೋಗದಲ್ಲಿ ಶೇಕಡಾವಾರು ಖೋತಾ ಆಗಿದೆ. ಕೇಂದ್ರ ಸರ್ಕಾರದ ಅಸಹಾಯಕ ನೌಕರರನ್ನು ತೆಗೆಯುವ ನಿರ್ಧಾರ ಹಿಂದೊಮ್ಮೆ ಸದ್ದು ಮಾಡಿತ್ತು. ಒಟ್ಟಾರೆ ಮನುಷ್ಯ ನಿರಂತರವಾಗಿ ಕಲಿಯುವ ವಿದ್ಯಾರ್ಥಿ ಎಂಬುದೇನೋ ಸರಿ! ಆದರೆ ವಯಸ್ಸು, ಉತ್ಸಾಹ, ಅನುಭವಗಳಿಗೆ ಸರಕಾರಿ ಸ್ವಾಮ್ಯದಲ್ಲಿ ಇರುವಂತೆಯೇ ಖಾಸಗಿ ಸ್ವಾಮ್ಯದಲ್ಲೂ ಪ್ರಾಧಾನ್ಯತೆ ಕೊಡಬೇಕು. ಆದರೆ ಇಂದು ಏನಾಗಿದೆ ಮೈಸೂರ್ ಪಾಕ್ ಮಾಡಲು ಬರುವ ಬಾಣಸಿಗ ಬೇಕು ಬನ್ನಿ ಎಂದು ಒಂದು ಸಂಬಳ ಫಿಕ್ಸ್ ಮಾಡಿ ಕರೆದರೆ ಮೈಸೂರ್‌ಪಾಕಿನ ಜೊತೆ ಬಾದಾಮಿ ಹಲ್ವಾ ಕೂಡ ನನಗೆ ಮಾಡಲು ಬರುತ್ತದೆ ಅಷ್ಟೇ ಸಂಬಳಕ್ಕೆ ಎನ್ನುವ ಅಪ್‌ಡೇಟರ್ ಮಾಡೆಲಿನ ಬಾಣಸಿಗರ ಮುಂದೆ ಬೂಂದಿ ಬತಾಸು ಮಾಡಲಷ್ಟೇ ಕಲಿತಿರುವವರ ಪಾಡೇನು? ತಾಂತ್ರಿಕ ಶಿಕ್ಷಣದ ರೀತಿರಿವಾಜುಗಳು ವಾಯುವೇಗದಲ್ಲಿ ಚಲಿಸುತ್ತಿವೆ. ಆ ಚಲಿಸುವ ಮೋಡಗಳ ಮೇಲೆ ಸವಾರಿ ಮಾಡಲು ಪ್ರತಿದಿನವೂ ಹೊಸಹುರುಪಿನಲ್ಲಿ ಅಣಿಯಾಗಬೇಕು. ಸರಕಾರಿ ಸ್ವಾಮ್ಯದ ಅಧಿಕಾರವಲಯವೂ ಪ್ರಸಕ್ತ ದಿನಮಾನಗಳಲ್ಲಿ ತಾಂತ್ರಿಕ ಚಲನೆಯೊಂದಿಗೆ ಸಜ್ಜಾಗಿ ಸೇವೆಗೆ ನಿಂತಿದೆ. ಆನ್‌ಲೈನ್ ಶಿಕ್ಷಣ, ಆನ್‌ಲೈನ್ ಸೇವೆ, ಆನ್‌ಲೈನ್ ಪಾಠ, ಆನ್‌ಲೈನ್ ಪರೀಕ್ಷೆ, ಆನ್‌ಲೈನ್ ಮೀಟಿಂಗು ಎಲ್ಲವೂ ಅಸ್ತಿತ್ವಕ್ಕೆ ಬಂದ ಈ ಹೊತ್ತಿನಲ್ಲಿ ಕೌಶಲ್ಯಾಧಾರಿತ ವೃತ್ತಿಪರಿಣತಿಯ ಯುವಕರೊಂದಿಗೆ ಹೆಜ್ಜೆ ಹಾಕಲು ಕಲಿಯಬೇಕು. ನಮ್ಮ ಕಾಲು ನಮ್ಮದೇ ಹಾಸಿಗೆಯಿಂದ ಹೊರಚಾಚಬೇಕಾದ ಕಾಲ ಬಂದಿದೆ. ಕಾಲು ಮಡಚಿಕೊಂಡು ಮಲಗಬೇಕು ಇಲ್ಲ ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು. ಅಪ್‌ಡೇಟ್ ಆಗಲೇಬೇಕಾದ ಈ ಅನಿವಾರ್ಯತೆಯ ಆಲೋಚನೆಗಳ ಬಗೆಗೆ ಬರೆಯಲು ಕುಳ್ಳಿರಿಸಿದ ಪ್ರೇರಣೆಯಾದರೂ ಏನು ಗೊತ್ತಾ?

ನನ್ನ ಪರಿಚಯದವರ ಮಗನೊಬ್ಬ ದುಬೈನಲ್ಲಿ ಒಳ್ಳೆಯ ಕೆಲಸದಲ್ಲಿದ್ದ. ಸಂಸಾರ ಮೈಸೂರಿನಲ್ಲಿತ್ತು. ಕೊರೊನಾ ಕಾರಣಕ್ಕೆ ಹುಡುಗ ದುಬೈ ಬಿಟ್ಟು ಊರಿಗೆ ಬಂದ. ಇಲ್ಲಿ ಆತನಿಗೆ ಕಡಿಮೆ ಸಂಬಳದ ಕೆಲಸ ಹಿಡಿಸಲಿಲ್ಲ. ಊರಲ್ಲಿ ಜಮೀನಿತ್ತು. ಆಧುನಿಕ ಕೃಷಿ ಮಾಡಿ ಬದುಕುವ ಯೋಜನೆ ಹಾಕಿಕೊಂಡ. ಹೆಂಡತಿ ಒಪ್ಪಲಿಲ್ಲ. ಐಷಾರಾಮಿ ಬದುಕಿಗೆ ಒಗ್ಗಿಹೋಗಿದ್ದ ಮನಸ್ಸು ಮತ್ತೆ ಅದೇ ಹಳ್ಳಿ, ಅದೇ ಮಣ್ಣು, ಅದೇ ಕೃಷಿ ಚಟುವಟಿಕೆಗಳನ್ನು ಒಲ್ಲೆ ಎನ್ನುತ್ತಿತ್ತು. ಹುಡುಗ ಕಾರ್ಪೊರೇಟ್ ವಲಯ ಬಿಟ್ಟು ಅಭಿಮಾನದಿಂದ ಮಣ್ಣಿನೆಡೆಗೆ ಹೊರಟಿದ್ದ. ಹೇಗಾದರೂ ಮಾಡಿ ಆತನ ನಿರ್ಧಾರ ಬದಲಿಸಲೇಬೇಕೆಂದು ಹಠ ತೊಟ್ಟ ಆತನ ಪತ್ನಿ ಗಂಡನನ್ನು ಹೆದರಿಸುವ ಸಲುವಾಗಿ ಇಲಿ ಪಾಷಾಣ ತೆಗೆದುಕೊಂಡಂತೆ ಮಾಡಿದ್ದಾಳೆ. ದುರದೃಷ್ಟವೆಂದರೆ ತೆಗೆದುಕೊಳ್ಳುವಾಗ ತೆಗೆದುಕೊಳ್ಳುವ ಡೋಸೇಜು ಆಕೆಗೆ ಗೊತ್ತಾಗಿಲ್ಲ. ತನ್ನನ್ನೂ ಕರೆದುಕೊಂಡು ಊರಿನೆಡೆಗೆ ತೆರಳಲು ಹೊರಟಿರುವ ಗಂಡನನ್ನು, ಹೇಗಾದರೂ ಮಾಡಿ ಮತ್ತೆ ಕಾರ್ಪೊರೇಟ್ ವಲಯದಲ್ಲೇ ನೌಕರಿ ಹುಡುಕಿಕೊಳ್ಳುವ ಮಾರ್ಗಕ್ಕೆ ತರಬೇಕೆಂದು ಹಠ ತೊಟ್ಟಿದ್ದಳು. ಇಲಿ ಪಾಷಾಣದ ಡೋಸೇಜು ಜಾಸ್ತಿಯಾಗಿ ಸಾವು ಬದುಕಿನ ಜೊತೆ ಹೋರಾಡಿದ್ದಳು. ಕಡೆಗೆ ನನ್ನನ್ನು ಬದುಕಿಸಿ ಎಂದು ಅವಲತ್ತುಕೊಂಡಿದ್ದಳು, ನೊಂದಿದ್ದಳು, ಚೀರಿದ್ದಳು. ಕಡೆಗೆ ಚಿಕಿತ್ಸೆ ಫಲಕಾರಿಯಾಗದೆ ತಾನೇ ಮಣ್ಣಿನ ಮಾರ್ಗವಾಗಿ ನಡೆದುಹೋದಳು.


ಮನುಷ್ಯನ ನಿತ್ಯದ ಚಟುವಟಿಕೆಗಳು ವಿಸ್ತರಣೆಯ ಮಾರ್ಗದಲ್ಲಿ ಚಲಿಸುತ್ತವೆ. ಅಭಿವೃದ್ಧಿ ಅದರ ಮಂತ್ರ ಇಂಥ ಹೊತ್ತಿನಲ್ಲಿ ಹಠಕ್ಕೆ ಬಿದ್ದ ಮನಸ್ಸು ಹದವರಿತು ನಡೆದರೆ ಪ್ರತಿ ಉತ್ಸಾಹ ನೂರ್ಮಡಿಸುತ್ತದೆ. ಚಲನಶೀಲತೆ ಜೊತೆಗೂಡುತ್ತದೆ. ಸೋಲೆಂಬುದು ಮುಕ್ಕಾಲು ಹಾದಿ ನಮ್ಮಿಂದ ಪೇರಿ ಕಿತ್ತಿರುತ್ತದೆ. ದೇಹವನ್ನು ಯಂತ್ರದಂತೆ ದುಡಿಸಬಹುದು. ಆದರೆ ಮನಸ್ಸು ಯಂತ್ರದಂತೆ ನಡೆಯಲಾರದು. ಮನಸ್ಸಿಗೆ ಅದರದ್ದೇ ಆಯಾಸವಿದೆ. ದೇಹವನ್ನೇ ಸೂಪರ್ ಸ್ಪೀಡ್ ಮಾಡುವಷ್ಟು ಅದು ಟ್ಯೂನ್ ಆಗಿರುತ್ತದೆ. ಅದಕ್ಕಾಗಿ ಮನಸ್ಸನ್ನು ವೃತ್ತಿಗೆ ಪ್ರವೃತ್ತಿಗೆ ಹೊಂದಿಸುವಂತೆ ಅಣಿ ಮಾಡಿ ಆಗ ನೋಡಿ ಸೋಲು ಮತ್ತು ಸಾವುಗಳು ನಮ್ಮನ್ನಾಗಲಿ ನಮ್ಮ ವೃತ್ತಿ–ಪ್ರವೃತ್ತಿಗಳ ಏಳುಬೀಳಿನ ಬೆಂಕಿಯಲ್ಲಾಗಲಿ ಮೈಕಾಯಿಸಿಕೊಂಡು ಬೆಚ್ಚಗಾಗಲು ಬರುವುದಿಲ್ಲ. ಡಿ.ವಿ.ಜಿ.ಯವರ ಕಗ್ಗವೊಂದಿದೆ.

**ಹೊಸತನವೆ ಬಾಳು ಹಳಸಿಕೆಯೆಲ್ಲ ಸಾವುಬಿಡು
ರಸವು ನವನವತೆಯಿಂದನುದಿನವು ಹೊಮ್ಮಿ
ಹಸನೊಂದು ನಡೆಯಲ್ಲಿ ನುಡಿಯಲ್ಲಿ ನೋಟದಲ್ಲಿ
ಒಸರುತಿರೆ ಬಾಳ್ಚೆಲುವೋ ಮಂಕುತಿಮ್ಮ!**

ಹೊಸತನದ ಪ್ರತಿಯೊಂದಕ್ಕೂ ಅಪ್‌ಡೇಟೆಡ್ ಆಗುವ ಅನಿವಾರ್ಯತೆ ಬಂದೊದಗಿದೆ. ಅದಕ್ಕೆ ವಯಸ್ಸಿನ ಅಂತರವಿಲ್ಲ. ಆಸಕ್ತಿ, ಅನಾಸಕ್ತಿಗಳ ಗೊಂದಲವಿಲ್ಲ. ಪ್ರತಿದಿನದ ಹೊಂದಾಣಿಕೆಗೆ ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳುವ ಉತ್ಸಾಹಕ್ಕೆ ಮನಸ್ಸನ್ನು ಅಣಿ ಮಾಡಿ ಹೊಸಹೆಜ್ಜೆ ಇಡಲು ಮನಸ್ಸಿಗೆ ಕನ್ವಿನ್ಸ್ ಮಾಡಬೇಕು. ಮನಸ್ಸು ಮೆಲುದನಿಯ ಮಾತು ಕೇಳಿದಷ್ಟು ಗದರಿಕೆಯ ಮಾತನ್ನು ಕೇಳುವುದಿಲ್ಲ. ಈ ಹೊಸವರ್ಷದಲ್ಲಿ ಮತ್ತಿನ್ನೇನು ಹೊಸ ಅಪ್‌ಡೇಟ್‌ಗಳು ಬರುತ್ತವೋ ಕೌಶಲ್ಯ, ವೃತ್ತಿಪರತೆ, ಹಣಕಾಸು, ಆಯ–ವ್ಯಯಗಳನ್ನೂ ಕೌಶಲ್ಯಾಧಾರಿತ ಪರಿಣತಿಯಂತೆಯೇ ನಮ್ಮ ಜೀವನಕ್ಕೂ ಡಿಸೈನ್ ಮಾಡಿಕೊಂಡು ಒಪ್ಪಿಸಿಕೊಳ್ಳೋಣ. ಏನಂತೀರಿ?

ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಧನಂಜಯರದ್ದು ಸ್ಮರಣೀಯ ಸೇವೆ

ಮೈಸೂರು,ಜ.8(ಎಸ್‌ಬಿಡಿ)– ಮೈಸೂರಿನ ಎಕ್ಸೆಲ್ ಸಾಫ್ಟ್ ಟೆಕ್ನಾಲಜೀಸ್ ಹಾಗೂ ಎಕ್ಸೆಲ್ ಪಬ್ಲಿಕ್ ಸ್ಕೂಲ್ ಅಧ್ಯಕ್ಷರು ಮತ್ತು ಜೆಎಸ್‌ಎಸ್ ಮಹಾವಿದ್ಯಾಪೀಠದ ಸಲಹೆಗಾರರಾಗಿದ್ದ ಪ್ರೊ.ಎಂ.ಹೆಚ್.ಧನಂಜಯ ಅವರು ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಅವಿಸ್ಮರಣೀಯ ಸೇವೆ ಸಲ್ಲಿಸಿದ್ದಾರೆ.



ಪ್ರೊ.ಎಂ.ಹೆಚ್.ಧನಂಜಯ

ಎಸ್‌ಜೆಸಿಇಯಲ್ಲಿ ಪ್ರಾಧ್ಯಾಪಕ ಹಾಗೂ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸಿ ನಿವೃತ್ತಿಯ ಬಳಿಕವೂ ಜೆಎಸ್‌ಎಸ್ ಮಹಾವಿದ್ಯಾಪೀಠದ ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕರಾಗಿ ಮೂರು ದಶಕಗಳಿಗೂ ಹೆಚ್ಚು ಕಾಲ ಕಾರ್ಯನಿರ್ವಹಿಸಿದ್ದಲ್ಲದೆ, ಸಲಹೆಗಾರರಾಗಿಯೂ ಸೇವೆ ಸಲ್ಲಿಸಿದ್ದರು.

ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ಯೋಜಿಸುವ, ಸ್ಥಾಪಿಸುವುದರ ಜೊತೆಗೆ ನಿರ್ವಹಣೆ ಜವಾಬ್ದಾರಿಯನ್ನೂ ಸಹ ಪ್ರೊ. ಧನಂಜಯ ಅವರು ನಿರ್ವಹಿಸಿದ್ದರು.

ನೋಯ್ಡಾ, ದುಬೈ, ಮಾರಿಷಸ್‌ಗಳಲ್ಲಿ ಸಂಸ್ಥೆ ಸ್ಥಾಪನೆಗೆ ಕಾರಣೀಭೂತರಾಗಿದ್ದ ಅವರು, ಮೈಸೂರು, ಬೆಂಗಳೂರು, ನೋಯ್ಡಾ ಹಾಗೂ ಮಾರಿಷಸ್‌ಗಳಲ್ಲಿರುವ ನಾಲ್ಕು ಎಂಜಿನಿಯರಿಂಗ್ ಕಾಲೇಜು, ವಿಶೇಷವಾಗಿ ಮಹಿಳೆಯರು ಹಾಗೂ ವಿಶೇಷ ಚೇತನರಿಗಾಗಿ ಸ್ಥಾಪಿಸಿರುವ ನಾಲ್ಕು ಪಾಲಿಟೆಕ್ನಿಕ್, ಮೂರು ಕೈಗಾರಿಕಾ ತರಬೇತಿ ಕೇಂದ್ರಗಳು, ಮೂರು ಸೈನ್ಸ್ ಅಂಡ್ ಟೆಕ್ನಾಲಜಿ ಎಂಟರ್‌ಪ್ರೈಸರ್ಸ್ ಪಾರ್ಕ್(ಸ್ಟೆಪ್) ಕೇಂದ್ರಗಳು, ದುಬೈನಲ್ಲಿರುವ ಎರಡು ಅಂತರರಾಷ್ಟ್ರೀಯ ಶಾಲೆಗಳು, ಅಂತಾರಾಷ್ಟ್ರೀಯ ತರಬೇತಿ ಸಂಸ್ಥೆ ಮತ್ತು ಕನ್ಸಲ್ಟೆನ್ಸಿ ಸರ್ವಿಸ್‌ಗಳ ಉಸ್ತುವಾರಿ ಹೊಣೆ ಹೊತ್ತಿದ್ದರು.

ತರಬೇತಿ ವಿಧಾನಗಳು, ಪಠ್ಯಕ್ರಮ, ಕಾರ್ಯಗತಗೊಳಿಸುವಿಕೆ, ವಿಶ್ಲೇಷಣೆ, ಆಡಳಿತದ ವಿನ್ಯಾಸ ಮತ್ತು ಅಭಿವೃದ್ಧಿಯಲ್ಲಿ ಅವರು ಪರಿಣತರಾಗಿದ್ದರು.

ತಾಂತ್ರಿಕ ಶಿಕ್ಷಣದಲ್ಲಿ ಉನ್ನತ ಕಲಿಕೆಯ ಕೇಂದ್ರಗಳನ್ನು ಸ್ಥಾಪಿಸಲು ಸೂಕ್ಷ್ಮ ಮತ್ತು ಸಣ್ಣ ಯೋಜನೆ ರೂಪಿಸುವಲ್ಲಿ ತಜ್ಞರಾಗಿದ್ದರು. ವಿಶ್ವ ಬ್ಯಾಂಕ್, ಕರ್ನಾಟಕ ಸರ್ಕಾರ ಸೇರಿದಂತೆ ಹಲವಾರು ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ತರಬೇತಿ ಕಾರ್ಯಕ್ರಮಗಳ ವಿನ್ಯಾಸ ಯೋಜನೆಗಳಲ್ಲಿ ಅನುಭವಿಯಾಗಿದ್ದರು. ವಿಶ್ವಬ್ಯಾಂಕ್‌ನಂತಹ ಅಂತಾರಾಷ್ಟ್ರೀಯ ಮಟ್ಟದ ಸಂಸ್ಥೆಗಳು, ಖಾಸಗಿ ಸಂಸ್ಥೆಗಳ ಅಡಿಯಲ್ಲಿ ತರಬೇತಿ ವಿನಿಮಯ ಕಾರ್ಯಕ್ರಮ ರೂಪಿಸಿದ್ದರು. ನೀರಾವರಿ, ನೀರು ಸರಬರಾಜು, ಸಾಮಾಜಿಕ, ಆರ್ಥಿಕ ಸಮೀಕ್ಷೆ, ಪರಿಣಾಮಕಾರಿ ವಿಶ್ಲೇಷಣೆ, ಮೇಲ್ವಿಚಾರಣೆಗೆ ಗಣಕೀಕೃತ ನಿರ್ವಹಣಾ ಮಾಹಿತಿ ವ್ಯವಸ್ಥೆ ಯೋಜನೆಗೆ ಒತ್ತಾಸೆಯಾಗಿದ್ದರು. ಸರ್ಕಾರಗಳಿಂದ ರಚಿತವಾಗಿದ್ದ ಹಲವು ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಸಮಿತಿಗಳಲ್ಲಿ ಪರಿಭತರಾಗಿ ಕಾರ್ಯನಿರ್ವಹಿಸಿದ್ದರು. ತಾಂತ್ರಿಕ ವಿಶ್ವವಿದ್ಯಾನಿಲಯ ಸ್ಥಾಪನೆಗೆ ಯೋಜನಾ ವರದಿ ನೀಡಿದ್ದರು.

ಹಲವು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳ ಒಡನಾಟದಲ್ಲಿದ್ದ ಅವರು, ವಿವಿಧ ಸಂಘ ಸಂಸ್ಥೆಗಳಿಗೆ ಮಾರ್ಗದರ್ಶಕರೂ ಆಗಿದ್ದರು. ರಾಜ್ಯ ತಾಂತ್ರಿಕ ವಿಶ್ವವಿದ್ಯಾಲಯದ ವಿಶೇಷಾಧಿಕಾರಿಗಳಾಗಿ ಅದಕ್ಕೆ ಭದ್ರ ಬುನಾದಿ ಹಾಕಿದ್ದರು ಮತ್ತು ನೀತಿನಿಯಮಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಹಲವು ಅಂತರರಾಷ್ಟ್ರೀಯ ಮಟ್ಟದ ಸೆಮಿನಾರ್‌ಗಳಲ್ಲಿ ಪ್ರೌಢ ಪ್ರಬಂಧಗಳನ್ನು ಮಂಡಿಸಿದ್ದರು.

ಅವರ ಸಾಧನೆಗಾಗಿ ಅಣ್ಣಾ ವಿಶ್ವವಿದ್ಯಾಲಯದ ರಾಷ್ಟ್ರೀಯ ಪುರಸ್ಕಾರ, ಉತ್ತರಪ್ರದೇಶ ಸರ್ಕಾರದ ರಾಷ್ಟ್ರೀಯ ಪುರಸ್ಕಾರ ಮತ್ತು ಚೆನ್ನೈನ ನ್ಯಾಷನಲ್ ಸೈನ್ಸ್ ಅಂಡ್ ಜೆಪ್ಪಿಯಾರ್ ಟ್ರಸ್ಟ್‌ನ ಟೆಕ್ನಾಲಜಿ ಪ್ರಶಸ್ತಿಗಳು ಸೇರಿದಂತೆ ಹಲವು ಪ್ರಶಸ್ತಿ–ಪುರಸ್ಕಾರಗಳು ಸಂದಿವೆ.

ಪ್ರೊ.ಎಂ.ಹೆಚ್.ಧನಂಜಯರವರ ನಿಧನಕ್ಕೆ ಸುತ್ತೂರು ಶ್ರೀಗಳ ಸಂತಾಪ



ಮೈಸೂರು: ಜೆಎಸ್‌ಎಸ್ ಮಹಾವಿದ್ಯಾಪೀಠದ ತಾಂತ್ರಿಕ ಶಿಕ್ಷಣ ವಿಭಾಗದ ಸಲಹೆಗಾರರಾಗಿದ್ದ ಹಾಗೂ ದಶಕಗಳ ಕಾಲ ನಿರ್ದೇಶಕರಾಗಿದ್ದ ಪ್ರೊ. ಎಂ.ಹೆಚ್.ಧನಂಜಯರವರು ವಿಧಿವಶರಾದುದು ವಿಷಾದದ ಸಂಗತಿ.

ಪ್ರೊ.ಧನಂಜಯರವರು ಶ್ರೀ ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ ದೀರ್ಘಕಾಲ ಸೇವೆ ಸಲ್ಲಿಸಿದ್ದರು. ನಿವೃತ್ತಿಯ ಬಳಿಕ ಜೆಎಸ್‌ಎಸ್ ಮಹಾವಿದ್ಯಾಪೀಠದ ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕರಾಗಿ ಮೂರು ದಶಕಗಳಿಗೂ ಹೆಚ್ಚು ಕಾಲ ನಿಸ್ಪೃಹ ಹಾಗೂ ಸಮರ್ಥ ಸೇವೆ ಸಲ್ಲಿಸಿದ್ದರು. ಸಂಸ್ಥೆಯ 4 ಇಂಜಿನಿಯರಿಂಗ್ ಕಾಲೇಜುಗಳು, 4 ಪಾಲಿಟೆಕ್ನಿಕ್‌ಗಳು, 3 ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರ್‌ಗಳು, ಮೂರು ಸ್ಟೆಪ್ ಕೇಂದ್ರಗಳು, 2 ಅಂತಾ ರಾಷ್ಟ್ರೀಯ ಶಾಲೆಗಳು ಮತ್ತು ಕನ್ಸಲ್ಟೆನ್ಸಿ ಸರ್ವಿಸ್‌ಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದರು. ನೊಯಿಡಾ, ದುಬೈ, ಮಾರಿಷಸ್‌ಗಳಲ್ಲಿ ಸಂಸ್ಥೆಗಳನ್ನು ಸ್ಥಾಪಿಸಲು ಅವರೇ ಕಾರಣರು. ಪ್ರಾಜೆಕ್ಟ್ ವಿನ್ಯಾಸ, ನಿರ್ವಹಣೆ, ಹಣಕಾಸು ಹೂಡಿಕೆ ಮುಂತಾದ ವಿಷಯಗಳಲ್ಲಿ ಅವರಿಗೆ ಅಸಾಧಾರಣ ಪ್ರವೀಣತೆ ಇತ್ತು. ಎಸ್‌ಜೆಸಿಇ ಉಚ್ಛ್ರಾಯ ಸ್ಥಿತಿಗೇರುವಲ್ಲಿ ಅವರ ಕೊಡುಗೆ ಗಮನಾರ್ಹ.

ಪ್ರೊ ಧನಂಜಯರವರು ಹಲವಾರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳ ಒಡನಾಟದಲ್ಲಿದ್ದರು; ವಿವಿಧ ಸಂಘಸಂಸ್ಥೆಗಳಿಗೆ ಮಾರ್ಗದರ್ಶಕರಾಗಿದ್ದರು. ಕರ್ನಾಟಕ ರಾಜ್ಯ ತಾಂತ್ರಿಕ ವಿಶ್ವವಿದ್ಯಾಲಯದ ವಿಶೇಷಾಧಿಕಾರಿಗಳಾಗಿ ಅದಕ್ಕೆ ಭದ್ರ ಬುನಾದಿಯನ್ನು ಹಾಕಿದ್ದರು. ನೀತಿನಿಯಮಗಳನ್ನು ರೂಪಿಸಿದ್ದರು. ಹಲವಾರು ಅಂತಾರಾಷ್ಟ್ರೀಯ ಮಟ್ಟದ ಸೆಮಿನಾರ್‌ಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದರು. ಅವರ ಕ್ಷೇತ್ರದಲ್ಲಿ ಅವರಿಗೆ ರಾಷ್ಟ್ರೀಯ ಮನ್ನಣೆಯಿತ್ತು.

ಶ್ರೀ ರಾಜೇಂದ್ರ ಮಹಾಸ್ವಾಮಿಗಳ ಕಾಲದಿಂದಲೂ ಶ್ರೀಮಠ ಮತ್ತು ಮಹಾವಿದ್ಯಾಪೀಠದ ಸೇವೆಯಲ್ಲಿ ತ್ರಿಕರಣಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದ ಹಿರಿಯ ಚೇತನ ಪ್ರೊ. ಧನಂಜಯರವರು ಎಲ್ಲರಿಗೂ ಮಾದರಿಯಾಗಿದ್ದ ಕರ್ಮಯೋಗಿಗಳು. ಅವರ ಅಗಲಿಕೆಯಿಂದ ಸಂಸ್ಥೆ ನಿರ್ವಾತವನ್ನು ಅನುಭವಿಸುವಂತಾಗಿದೆ. ದಿವಂಗತರ ಆತ್ಮಕ್ಕೆ ಶಾಂತಿಯನ್ನು ಮತ್ತು ಅವರ ಕುಟುಂಬವರ್ಗದವರು, ಬಂಧು ಬಾಂಧವರು, ಹಿತೈಷಿಗಳು, ಅಭಿಮಾನಿಗಳಿಗೆ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಹಾರೈಸುತ್ತೇವೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಶ್ರೀಗಳು ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಭಾರತ ಹಿಂದೂ ರಾಷ್ಟ್ರವಾಗಲು ಅವಕಾಶ ನೀಡಬಾರದು

ಅಂಬೇಡ್ಕರ್-ಗಾಂಧಿ ಚಿಂತನೆಯಲ್ಲಿ ಭಿನ್ನತೆ ಇದ್ದರೂ ಅಂತರ್ಯದಲ್ಲಿ ಒಂದೇ; ಲೇಖಕ ರಾಮಚಂದ್ರ ಗುಹಾ

ಮೈಸೂರು,ಜ.8(ಪಿಎಂ)– ಭಾರತ ಹಿಂದೂ ರಾಷ್ಟ್ರವಾಗಲು ಅವಕಾಶ ನೀಡಬಾರದು. ಗಣರಾಜ್ಯವಾಗಿ ರಾಷ್ಟ್ರ ಉಳಿಯಲು ಇದು ಅತ್ಯಂತ ಮುಖ್ಯ ಎಂದು ಪ್ರಗತಿಪರ ಚಿಂತಕರೂ ಆದ ಖ್ಯಾತ ಲೇಖಕ ರಾಮಚಂದ್ರ ಗುಹಾ ಪ್ರತಿಪಾದಿಸಿದರು.

ಮೈಸೂರು ಮಾನಸಗಂಗೋತ್ರಿಯ ಗಾಂಧಿ ಅಧ್ಯಯನ ಕೇಂದ್ರದ ವತಿಯಿಂದ ಸೋಮವಾರ ಕೇಂದ್ರದ ಆವರಣದಲ್ಲಿ 'ಗಾಂಧಿ–ಅಂಬೇಡ್ಕರ್ ಪ್ರಸ್ತುತತೆ' ಕುರಿತು ಅವರೊಂದಿಗೆ ಹಮ್ಮಿಕೊಂಡಿದ್ದ ಮಾತುಕತೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತ ಹಿಂದೂ ರಾಷ್ಟ್ರವಾಗುವುದನ್ನು ತಡೆಗಟ್ಟಲು ಅಂಬೇಡ್ಕರ್ ಮತ್ತು ಗಾಂಧಿ ಚಿಂತನೆಗಳನ್ನು ಒಂದೇ ದೃಷ್ಟಿಕೋನದಲ್ಲಿ ಗ್ರಹಿಸುವುದು ಅಗತ್ಯ. ಜಾತಿ ಮತ್ತು ಲಿಂಗ ತಾರತಮ್ಯ ಹೋಗಲಾಡಿಸಿ ಸಾಮರಸ್ಯದಿಂದ ಬದುಕಲು ಭಾರತವನ್ನು ಹಿಂದೂ ರಾಷ್ಟ್ರವಾಗಲು ಅವಕಾಶ ನೀಡಬಾರದು. ಧರ್ಮ ಮತ್ತು ಭಕ್ತಿ ನಮ್ಮ ಮನಸ್ಸಿನ ನೆಮ್ಮದಿಗೆ ಅತ್ಯಗತ್ಯ. ಆದರೆ ಅವು ರಾಜಕೀಯದಲ್ಲಿ ಬೆರೆತು ಹೋದರೆ ಸರ್ವಾಧಿಕಾರಕ್ಕೆ ದಾರಿಯಾಗುತ್ತದೆ ಎಂದು ಡಾ.ಅಂಬೇಡ್ಕರ್ ಅವರು ಸಂವಿಧಾನ ಸಭೆಯಲ್ಲಿ ಎಚ್ಚರಿಸಿದ್ದಾರೆ ಎಂದು ಸಭಿಕರ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಗಾಂಧಿಯವರ ರಾಮರಾಜ್ಯ ಪರಿಕಲ್ಪನೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಇದನ್ನು ತಪ್ಪಾಗಿ ಅರ್ಥೈಸಲಾಗಿದೆ. ರಾಮ್ ಮತ್ತು ರಹೀಮ್ ಒಂದೇ ಎಂದು ಗಾಂಧಿ ಹೇಳಿದ್ದು, ಈಶ್ವರ್ ಅಲ್ಲಾ ತೇರೆ ನಾಮ್ ಎಂಬ ಅವರ ಮಾತುಗಳು ಗಾಂಧಿಯವರ ನೈಜ ಪರಿಕಲ್ಪನೆಯನ್ನು ಸ್ಪಷ್ಟಪಡಿಸುತ್ತವೆ ಎಂದು ವಿವರಿಸಿದರು.

1915ರಲ್ಲಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಗಾಂಧಿಯವರು ಮರಳಿದಾಗ, ತಮಿಳುನಾಡಿನ ದಲಿತ ಸ್ನೇಹಿತರೊಬ್ಬರು, ತಾವು ದಕ್ಷಿಣ ಆಫ್ರಿಕಾದಲ್ಲಿ ಕಂಡದ್ದಕ್ಕಿಂತಲೂ ಹೀನಾಯವಾಗಿ ದಲಿತರನ್ನು ನಡೆಸಿಕೊಳ್ಳಲಾಗುತ್ತಿದೆ. ಇದರ ನಿವಾರಣೆಗೆ ತಾವು ಹೋರಾಡಬೇಕೆಂದು ಮನವಿ ಮಾಡಿದ್ದರು. ಇದರಿಂದ ಪ್ರೇರಿತರಾದ ಗಾಂಧಿಯವರು 1919ರಿಂದ ಅಸ್ಪೃಶ್ಯತೆ ಆಚರಣೆಯನ್ನು ಕಟು ಮಾತುಗಳಲ್ಲಿ ಟೀಕಿಸಲು ಶುರು ಮಾಡಿದರು ಎಂದು ತಿಳಿಸಿದರು.



ಮೈಸೂರು ಮಾನಸಗಂಗೋತ್ರಿಯ ಗಾಂಧಿ ಭವನದ ಆವರಣದಲ್ಲಿ ಸೋಮವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಲೇಖಕ ರಾಮಚಂದ್ರ ಗುಹಾ ಮಾತನಾಡುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಅಸ್ಪೃಶ್ಯತೆ ನಿವಾರಣೆ ಒಂದೇ ಗಾಂಧಿಯವರ ಕಾರ್ಯಸೂಚಿ ಆಗಿರಲಿಲ್ಲ. ಅದರ ಜೊತೆಗೆ ಸ್ವಾತಂತ್ರ್ಯ ಹೋರಾಟ, ಹಿಂದೂ–ಮುಸಲ್ಮಾನರ ನಡುವೆ ಸಾಮರಸ್ಯ ಮೂಡಿಸುವುದೂ ಸೇರಿದಂತೆ ಅನೇಕ ಜನಪರ ಕಾರ್ಯಕ್ರಮಗಳಲ್ಲಿ ಅವರು ತೊಡಗಿಸಿಕೊಂಡಿದ್ದರು. ಅವರೊಂದಿಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿದ್ದ ಮೇಲ್ವರ್ಗದ ಹಿಂದೂಗಳು ಗಾಂಧಿಯವರ ಅಸ್ಪೃಶ್ಯತೆ ವಿರುದ್ಧದ ಹೋರಾಟವನ್ನು ವಿರೋಧಿಸುತ್ತಿದ್ದರು. ಅಂದು ಮೇಲ್ವರ್ಗದ ಯಾವ ನಾಯಕರು ಅಸ್ಪೃಶ್ಯತೆ ವಿರುದ್ಧ ಗಾಂಧಿಯವರಷ್ಟು ತೀವ್ರತರ ಚಿಂತನೆ ನಡೆಸಲಿಲ್ಲ ಎಂದು ಹೇಳಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಗಾಂಧಿಯವರಿಗಿಂತ 23 ವರ್ಷ ಚಿಕ್ಕ ವಯಸ್ಸಿನವರು. ಒಂದು ತಲೆಮಾರಿನ ಅಂತರ ಈ ಇಬ್ಬರು ನಾಯಕರ ನಡುವೆ ಇತ್ತು. ಇನ್ನು ಮುಖ್ಯವಾಗಿ ಗಾಂಧಿಯವರಿಗೆ ಅಸ್ಪೃಶ್ಯತೆ ನಿವಾರಣೆ ಎನ್ನುವುದು ಹೊರಗಿನಿಂದ ಬಂದ ಆಲೋಚನೆಯಾದರೆ, ಅಂಬೇಡ್ಕರ್ ಅವರಿಗೆ ಅದು ಅನುಭವದ ಭಾಗವಾಗಿತ್ತು. ಜೀವನದಲ್ಲಿ ಅವರು ಅಸ್ಪೃಶ್ಯತೆಯ ನೋವು ಮತ್ತು ಯಾತನೆಯನ್ನು ಸ್ವತಃ ಅನುಭವಿಸಿದ್ದರು ಎಂದರು.

ಒಟ್ಟಾರೆ ಹೇಳುವುದಾದರೆ, ಅಂಬೇಡ್ಕರ್ ಮತ್ತು ಗಾಂಧಿ ಇಬ್ಬರೂ ಇಂದಿಗೆ ಅತ್ಯಂತ ಪ್ರಸ್ತುತ. ಇಬ್ಬರ ಚಿಂತನೆಗಳು ಭಿನ್ನವಾಗಿ ಕಂಡರೂ ಅಂತರ್ಯದಲ್ಲಿ ಅವು ಒಂದೇ ದಿಕ್ಕಿನಲ್ಲಿ ಚಲಿಸುತ್ತವೆ. ಈ ಇಬ್ಬರು ನಾಯಕರ ಚಿಂತನೆಗಳು ನಮಗೆ ಅಗತ್ಯ. ಅಂದು ಕಾಂಗ್ರೆಸ್ ಅನ್ನು ಮೇಲ್ವರ್ಗದವರ ಪಾರ್ಟಿ ಎಂದು ಭಾವಿಸಿದ್ದ ಅಂಬೇಡ್ಕರ್, ಸ್ವಾತಂತ್ರ್ಯ ನಂತರ ಇವರ ಕೈಗೆ ಅಧಿಕಾರ ಸಿಕ್ಕರೆ ದಲಿತರಿಗೆ ನ್ಯಾಯ ದೊರೆಯುವುದಿಲ್ಲ ಎಂದು ಚಿಂತಿಸಿದ್ದರು. ಹಾಗಾಗಿ ಅವರು ಅಂದು ಕಾಂಗ್ರೆಸ್ ಸೇರ್ಪಡೆಗೆ ನಿರಾಕರಿಸಿದ್ದರು ಎಂದು ತಿಳಿಸಿದರು.

> ಆರಂಭದಲ್ಲಿ ಗಾಂಧಿಯವರು ನಾನು ಸನಾತನ ಹಿಂದೂ ಎಂದು ಹೇಳುತ್ತಿದ್ದರು. ಕೊನೆಗೆ ಅವರು 'ಸನಾತನ' ಮತ್ತು 'ಹಿಂದೂ' ಹೊರತುಪಡಿಸಿ 'ಸಹನೆ' ಮತ್ತು 'ಪ್ರೀತಿ' ನನ್ನ ಧರ್ಮ ಎಂದು ಹೇಳಿದರು. ಅಂಬೇಡ್ಕರ್ ತಮ್ಮ ಅಂತಿಮ ದಿನಗಳಲ್ಲಿ 'ಕಾರುಣ್ಯ' ನನ್ನ ಧರ್ಮ ಎಂದು ಹೇಳುತ್ತಾರೆ. ಹಾಗಾಗಿ ಇಬ್ಬರು ಹೇಳಿರುವುದು ಒಂದೇ ಎಂಬುದನ್ನು ನಾವು ನೆನಪಿಟ್ಟುಕೊಳ್ಳಬೇಕು. ಯುವ ಜನರು ಓದಿ ಮನನ ಮಾಡಿಕೊಳ್ಳಬೇಕು. ಅವುಗಳನ್ನು ಮಗುವಿನ ಮನಸ್ಸಿನಿಂದ ನೋಡಬೇಕು. ಆ ಕಾಲಘಟ್ಟದಲ್ಲಿ ನಡೆದ ಘಟನೆಗಳಿಗೆ ಚೌಕಟ್ಟು ಹಾಕಿ ಸಂಘರ್ಷಕ್ಕಿಳಿಯುವುದು ಬಿಟ್ಟು, ವರ್ತಮಾನದ ಬದುಕು ನೋಡುತ್ತಾ ಮುಂದೆ ಸಾಗಬೇಕು.
> **–ದೇವನೂರ ಮಹಾದೇವ, ಹಿರಿಯ ಸಾಹಿತಿ.**

ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ದೇವನೂರು ಮಹಾದೇವ ಉಪಸ್ಥಿತರಿದ್ದರು. ರಾಮಚಂದ್ರ ಗುಹಾ ಅವರ ಇಂಗ್ಲಿಷ್ ಭಾಷಣದ ಮುಖ್ಯಾಂಶಗಳನ್ನು ಕನ್ನಡಕ್ಕೆ ಸಾಹಿತಿ ವಿವೇಕ ಶಾನಭಾಗ ಅನುವಾದಿಸಿದರು. ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಎಸ್.ನರೇಂದ್ರಕುಮಾರ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ತಮಿಳುನಾಡಲ್ಲಿ ಭಾರೀ ಮಳೆ: ಜನಜೀವನ ಅಸ್ತವ್ಯಸ್ತ



ಚೆನ್ನೈ: ಭಾರೀ ಮಳೆಯಿಂದ ತಮಿಳುನಾಡಿನಲ್ಲಿ ಮತ್ತೊಮ್ಮೆ ಪ್ರವಾಹ ಪರಿಸ್ಥಿತಿ ಏರ್ಪಟ್ಟಿದೆ. ಮಳೆ ಎಡೆ ಬಿಡದೆ ಸುರಿಯುತ್ತಿರುವುದರಿಂದ ಹಲವು ಜಿಲ್ಲೆಗಳಲ್ಲಿ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರ ರಜೆ ಘೋಷಿಸಿದೆ. ಚೆನ್ನೈನಲ್ಲಿ ರಸ್ತೆಗಳು ಜಲಾವೃತವಾಗಿರುವುದರಿಂದ ಸಂಚಾರ ಅಸ್ತವ್ಯಸ್ತಗೊಂಡಿದ್ದು, ಟ್ರಾಫಿಕ್ ಜಾಮ್ ಉಂಟಾಗಿದೆ.

ಭಾನುವಾರ ರಾತ್ರಿಯಿಂದ ಸೋಮವಾರ ಬೆಳಗ್ಗೆ 8 ಗಂಟೆಯವರೆಗೆ ಸುರಿದ ಭಾರೀ ಮಳೆಗೆ ಚೆನ್ನೈ ಸೇರಿದಂತೆ ಇತರ ನಗರ ಪ್ರದೇಶಗಳಲ್ಲಿ ಪ್ರಮುಖ ರಸ್ತೆಗಳು ಹಾಗೂ ತಗ್ಗು ಪ್ರದೇಶಗಳು ಜಲಾವೃತಗೊಂಡಿವೆ. ಮತ್ತೊಂದೆಡೆ, ಮಳೆ ಇನ್ನೂ ಒಂದು ವಾರ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮಳೆಯಿಂದಾಗಿ ರಾಜಧಾನಿ ಚೆನ್ನೈನಲ್ಲಿ ವಾಹನ ಸಂಚಾರ ತೀವ್ರ ಅಸ್ತವ್ಯಸ್ತಗೊಂಡಿದೆ. ಚೆನ್ನೈ, ತಿರುವಳ್ಳೂರು, ಕಾಂಚೀಪುರಂ, ಚೆಂಗಲ್ಪಟ್ಟು, ನಾಗಪಟ್ಟಣಂ, ವಿಲ್ಲುಪುರಂ, ಕಡಲೂರು, ಕಲ್ಲಕುರ್ಚಿ, ರಾಣಿಪೇಟ್ಟೈ, ವೆಲ್ಲೂರು ಮತ್ತು ತಿರುವಣ್ಣಾಮಲೈ ಜಿಲ್ಲೆಗಳಲ್ಲಿ ಭಾರೀ ಮಳೆಯಾಗುತ್ತಿದೆ.

ಮಳೆಯಿಂದಾಗಿ ನಾಗಪಟ್ಟಣಂ, ವಿಲ್ಲುಪುರಂ, ತಿರುವಳ್ಳೂರು ಮತ್ತು ಕಡಲೂರು ಜಿಲ್ಲೆಗಳ ಎರಡು ತಾಲೂಕುಗಳಲ್ಲಿ ವಿದ್ಯಾರ್ಥಿಗಳ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ರಜೆ ಘೋಷಿಸಲಾಗಿದೆ.

ಮತ್ತೊಂದೆಡೆ ಈ ವಾರ ಪೂರ್ತಿ ರಾಜ್ಯಾದ್ಯಂತ ವ್ಯಾಪಕ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ. ರಾಜ್ಯದ ಹತ್ತು ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ನಿರೀಕ್ಷೆ ಇದೆ. ಚೆನ್ನೈ, ಚೆಂಗಲ್ಪಟ್ಟು, ಕಾಂಚೀಪುರಂ, ಮೈಲಾಡುದುರೈ, ನಾಗಪಟ್ಟಿಣಂ, ತಿರುವಾಯೂರು ಜಿಲ್ಲೆಗಳು, ಪುದುಚೇರಿ, ಕಾರೈಕ್ಕಲ್ ಪ್ರದೇಶಗಳಲ್ಲಿ ಮಳೆಯಾಗುವ ನಿರೀಕ್ಷೆಯಿದೆ.

ಕೋಲಾರದಲ್ಲಿ ಮಳೆ: ತಮಿಳುನಾಡಿನಲ್ಲಿ ಮಳೆಯಾಗುತ್ತಿರುವುದರಿಂದ ಬೆಂಗಳೂರು, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗುತ್ತಿದೆ ಕೋಲಾರ ಜಿಲ್ಲೆಯ ಮಾಲೂರು, ಬಂಗಾರಪೇಟೆ, ಕೋಲಾರ, ಮುಳಬಾಗಿಲು ಮತ್ತು ಕೆಜಿಎಫ್ ತಾಲೂಕುಗಳಲ್ಲಿ ಸೋಮವಾರ ಮುಂಜಾನೆ ಮಳೆ ಸುರಿದಿದೆ.

ಬಿ.ಕೆ.ಹರಿಪ್ರಸಾದ್ ಹೇಳಿಕೆ ಗಂಭೀರವಾಗಿ ಪರಿಗಣಿಸಲು ಮುರಳೀಧರ್ ಒತ್ತಾಯ

ಮೈಸೂರು, ಜ.8 (ಎಂಟಿವೈ)– ಅಯೋಧ್ಯಾ ರಾಮಮಂದಿರ ಉದ್ಘಾಟನಾ ಸಮಾರಂಭದ ವೇಳೆ ಅಹಿತಕರ ಘಟನೆ ನಡೆಯಬಹುದು ಎಂದು ಶಂಕೆ ವ್ಯಕ್ತಪಡಿಸಿರುವ ಕಾಂಗ್ರೆಸ್ ಮುಖಂಡ ಬಿ.ಕೆ.ಹರಿಪ್ರಸಾದ್ ಅವರ ಹೇಳಿಕೆಯನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಎಂದು ಬ್ರಹ್ಮಶ್ರೀ ನಾರಾಯಣ ಗುರು ಪ್ರಚಾರ ಸಂಘಗಳ ಒಕ್ಕೂಟದ ಮುಖ್ಯಸ್ಥ ಮುರಳೀಧರ್ ಒತ್ತಾಯಿಸಿದ್ದಾರೆ.




ಸುದ್ದಿಗೋಷ್ಠಿಯಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಪ್ರಚಾರ ಸಂಘಗಳ ಒಕ್ಕೂಟದ ಮುಖ್ಯಸ್ಥ ಮುರಳೀಧರ್ ಮಾತನಾಡಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಯೋಧ್ಯೆಯಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀರಾಮಮಂದಿರದ ಉದ್ಘಾಟನಾ ಸಂದರ್ಭದಲ್ಲಿ ಅಹಿತಕರ ಘಟನೆ ನಡೆಯುವ ಸಾಧ್ಯತೆಯನ್ನು ತಳ್ಳಿ ಹಾಕುವ ಸಾಧ್ಯತೆಯಿಲ್ಲ. ರಾಮರಾಜ್ಯ ಬದಲು ರಾವಣ ರಾಜ್ಯವನ್ನಾಗಿಸಬಹುದಾದ ಎಲ್ಲ ಸಾಧ್ಯತೆ ಇದೆ. ಹೀಗಾಗಿ ಬಿ.ಕೆ.ಹರಿಪ್ರಸಾದ್ ಅವರ ಎಚ್ಚರಿಕೆಯನ್ನು ಲಘುವಾಗಿ ಪರಿಗಣಿಸುವಂತಿಲ್ಲ. ಆದ್ದರಿಂದ ಸೂಕ್ತ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕೆಂದು ಸಲಹೆ ನೀಡಿದರು.

ಹಣ ಅಕ್ರಮ ವರ್ಗಾವಣೆ ಪ್ರಕರಣ

ಕಾಂಗ್ರೆಸ್ ಶಾಸಕ ಕೆ.ವೈ.ನಂಜೇಗೌಡ ನಿವಾಸದ ಮೇಲೆ ಇಡಿ ದಾಳಿ



ಬೆಂಗಳೂರು: ಹಣ ಅಕ್ರಮ ವರ್ಗಾವಣೆ ತನಿಖೆಯ ಭಾಗವಾಗಿ ಕಾಂಗ್ರೆಸ್ ಶಾಸಕ ಕೆ.ವೈ.ನಂಜೇಗೌಡ ಅವರ ನಿವಾಸ ಮತ್ತು ಅವರಿಗೆ ಸಂಬಂಧಿಸಿದ ಕೆಲವು ಸಂಸ್ಥೆಗಳ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಸೋಮವಾರ ಬೆಳಗ್ಗೆ ದಾಳಿ ನಡೆಸಿದ್ದಾರೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

61 ವರ್ಷದ ಶಾಸಕರು ಕರ್ನಾಟಕ ವಿಧಾನಸಭೆಯಲ್ಲಿ ಮಾಲೂರು ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆ ಹಾಲು ಒಕ್ಕೂಟ (ಕೋಚಿಮುಲ್) ಅಧ್ಯಕ್ಷರೂ ಆಗಿದ್ದಾರೆ.

ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್ಎ) ಅಡಿಯಲ್ಲಿ ತನಿಖೆಯ ಭಾಗವಾಗಿ ಮಾಲೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಅವರ ನಿವಾಸ ಮತ್ತು ಅವರಿಗೆ ಸಂಬಂಧಿಸಿದ ಕೆಲವು ಸ್ಥಳಗಳ ಮೇಲೆ ಶೋಧ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಕೆಲವು ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಎಫ್ಐಆರ್‌ಗಳ ಆಧಾರದ ಮೇಲೆ ಇ.ಡಿ ಪ್ರಕರಣವನ್ನು ದಾಖಲಿಸಿದೆ ಎಂದು ತಿಳಿದುಬಂದಿದೆ.

ಇತ್ತೀಚೆಗೆ ಕೋಚಿಮುಲ್ ನೇಮಕಾತಿ ವಿಚಾರದಲ್ಲಿ ಅಕ್ರಮ ನಡೆದಿರುವ ಆರೋಪ ಕೇಳಿ ಬಂದಿತ್ತು. ನೇಮಕಾತಿ ವಿಚಾರದಲ್ಲಿ ಕೋಟ್ಯಂತರ ರೂಪಾಯಿ ಅವ್ಯವಹಾರ ನಡೆದಿದೆ ಎಂದು ಬಿಜೆಪಿ ಸಂಸದ ಎಸ್ ಮುನಿಸ್ವಾಮಿ ಆರೋಪಿಸಿದ್ದರು.

ಇಂದು ಸಿದ್ಧರಾಮೇಶ್ವರ ಜಯಂತಿ ಸಂಬಂಧ ಪೂರ್ವಭಾವಿ ಸಭೆ

ಮೈಸೂರು.ಜ.8– ಜನವರಿ 15ರಂದು ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ ಆಚರಿಸುವ ಹಿನ್ನೆಲೆಯಲ್ಲಿ ಜ.9ರಂದು ಬೆಳಗ್ಗೆ 11 ಗಂಟೆಗೆ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂರು ಡಿಸಿಎಂ ಹುದ್ದೆ; ಕರ್ನಾಟಕ ಉಸ್ತುವಾರಿ ರಣದೀಪ್ ಸುರ್ಜೇವಾಲರೊಂದಿಗೆ ಮೂವರು ಹಿರಿಯ ಸಚಿವರ ಚರ್ಚೆ





ಬೆಂಗಳೂರು, ಜ. 8– ಕಾಂಗ್ರೆಸ್‌ನಲ್ಲಿ ಹೆಚ್ಚುವರಿಯಾಗಿ ಮೂವರು ಉಪ ಮುಖ್ಯಮಂತ್ರಿಗಳ ಬೇಡಿಕೆ ಮತ್ತೆ ಮುನ್ನಲೆಗೆ ಬಂದಿದ್ದು, ಈ ವಿಚಾರವು ಹೈಕಮಾಂಡ್ ಅಂಗಳ ತಲುಪಿದೆ.

ಲೋಕಸಭಾ ಚುನಾವಣೆಗೂ ಮುನ್ನ ಹೆಚ್ಚುವರಿಯಾಗಿ ಮೂವರು ಡಿಸಿಎಂಗಳನ್ನು ನೇಮಕ ಮಾಡಬೇಕು ಎಂದು ಪದೇ ಪದೆ ಹೇಳಿಕೆ ನೀಡುತ್ತಿದ್ದ ಸಚಿವ ರಾಜಣ್ಣ ಹಾಗೂ ಇದೇ ವಿಚಾರವಾಗಿ ಹಲವು ಸಭೆಗಳನ್ನು ನಡೆಸಿದ್ದ ಸತೀಶ್ ಜಾರಕಿಹೊಳಿ, ಡಾ.ಹೆಚ್.ಸಿ.ಮಹದೇವಪ್ಪ, ಡಾ.ಜಿ.ಪರಮೇಶ್ವರ್, ಇಂದು ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿಯೂ ಆದ, ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿ ಮಾಡಿ ಸುದೀರ್ಘ ಚರ್ಚೆ ನಡೆಸಿದರು. ಈ ವೇಳೆ ಸಚಿವ ದಿನೇಶ್ ಗುಂಡೂರಾವ್ ಕೂಡ ಹಾಜರಿದ್ದದ್ದು ವಿಶೇಷ. ಎಲ್ಲಾ ಜಾತಿಗಳಿಗೂ ಸಮಾನ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಕೆಪಿಸಿಸಿಗೆ ಪ್ರದೇಶವಾರು ಕಾರ್ಯಾಧ್ಯಕ್ಷರನ್ನು ನೇಮಕ ಮಾಡಿದಂತೆ ಸರ್ಕಾರದಲ್ಲಿ ಇನ್ನೂ ಮೂವರಿಗೆ ಡಿಸಿಎಂ ಸ್ಥಾನ ನೀಡಬೇಕು. ಅದು ಲೋಕಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಫಲ ನೀಡುತ್ತದೆ ಎಂದು ಈ ಸಚಿವರು ಸುರ್ಜೇವಾಲಾರಿಗೆ ಮನವರಿಕೆ ಮಾಡಲು ಪ್ರಯತ್ನಿಸಿದರು ಎಂದು ಹೇಳಲಾಗಿದೆ.

ಮತ್ತೊಂದೆಡೆ ಪ್ರಭಾವಿ ಸಚಿವರನ್ನು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧೆಗಿಳಿಸಲು ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ತಂತ್ರ ರೂಪಿಸಿದ್ದಾರೆ ಎಂಬ ಮಾತುಗಳು ಕೇಳಿ ಬಂದಿರುವ ಹಿನ್ನೆಲೆಯಲ್ಲಿ ಈ ವಿಚಾರವಾಗಿಯೂ ಕೂಡ ಸುರ್ಜೇವಾಲಾ ಅವರೊಂದಿಗೆ ಸಚಿವರು ಚರ್ಚಿಸಿದ್ದಾರೆ ಎಂದು ಹೇಳಲಾಗಿದೆ. ತಾವು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಸಚಿವರು ಈ ವೇಳೆ ಸ್ಪಷ್ಟಪಡಿಸಿದ್ದಾರೆ ಎಂದು ತಿಳಿದು ಬಂದಿದೆ. ಮೂರು ಡಿಸಿಎಂ ಬಗ್ಗೆ ಪ್ರಸ್ತಾಪಿಸುತ್ತಿರುವ ಬಗ್ಗೆ ಸಚಿವ ರಾಜಣ್ಣ ಅವರನ್ನು ತುಮಕೂರಿನಲ್ಲಿ, ಇದೇ ವಿಚಾರವಾಗಿ ರಹಸ್ಯ ಸಭೆಗಳನ್ನು ಮಾಡುತ್ತಿರುವ ಸತೀಶ್ ಜಾರಕಿಹೊಳಿ ಅವರನ್ನು ಬೆಳಗಾವಿಯಲ್ಲಿ, ಸಿದ್ದರಾಮಯ್ಯನವರ ಆಪ್ತ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಚಾಮರಾಜನಗರದಲ್ಲಿ ಲೋಕಸಭಾ ಚುನಾವಣೆಗೆ ಕಣಕ್ಕಿಳಿಸಲು ಡಿ.ಕೆ.ಶಿವಕುಮಾರ್ ಹೂಡಿರುವ ತಂತ್ರಕ್ಕೆ ಈ ಸಚಿವರು ಮಣಿಯಬಾರದು ಎಂಬ ನಿರ್ಧಾರ ಕೈಗೊಂಡಿದ್ದು, ಈ ವಿಚಾರವಾಗಿಯೂ ಸುರ್ಜೇವಾಲ ಬಗ್ಗೆ ಚರ್ಚಿಸಿದ್ದಾರೆ ಎನ್ನಲಾಗಿದೆ. ಇತ್ತೀಚೆಗೆ ಸತೀಶ್ ಜಾರಕಿಹೊಳಿ ನಿವಾಸದಲ್ಲಿ ನಡೆದಿದ್ದ ಡಿನ್ನರ್ ಮೀಟಿಂಗ್‌ನಲ್ಲಿ ಚರ್ಚಿಸಲಾದ ವಿಷಯಗಳ ಬಗ್ಗೆಯೂ ಸುರ್ಜೇವಾಲಾ ಅವರೊಂದಿಗೆ ಚರ್ಚಿಸಲಾಯಿತು ಎಂದು ಮೂಲಗಳು ತಿಳಿಸಿವೆ.



ಮೈಸೂರಿನ ಗಾಯತ್ರಿಪುರಂನ ಶ್ರೀ ಗಣಪತಿ ದೇವಸ್ಥಾನದಲ್ಲಿ ಸೋಮವಾರ ಅಯೋಧ್ಯೆ ಶ್ರೀರಾಮ ಮಂದಿರದ ಪವಿತ್ರ ಮಂತ್ರಾಕ್ಷತೆಗೆ ವಿಶೇಷ ಪೂಜೆ ಸಲ್ಲಿಸಿ ವಾರ್ಡ್ ನಂ.39ರಲ್ಲಿ ಪ್ರತಿ ಮನೆಗೂ ಪವಿತ್ರ ಮಂತ್ರಾಕ್ಷತೆ ವಿತರಿಸುವ ಕಾರ್ಯಕ್ಕೆ ಮಾಜಿ ಮೇಯರ್‌ಗಳೂ ಆದ ಎನ್‌ಆರ್ ಕ್ಷೇತ್ರದ ಬಿಜೆಪಿ ಮುಖಂಡ ಸಂದೇಶಸ್ವಾಮಿ ಚಾಲನೆ ನೀಡಿದರು. ಗಾಯತ್ರಿಪುರಂ ಮುಖಂಡರಾದ ಸತ್ಯನಾರಾಯಣ ಸಿಂಗ್, ಮಣಿರತ್ನಂ, ಮಂಜುನಾಥ್ ಸಿಂಗ್, ಮೋಹನ್ ಆರ್‌ಎಕ್ಸ್, ಬ್ರಹ್ಮಚಾರ್, ಶರತ್, ಲೋಹಿತ್, ರಘು, ಭವಾನಿ ಬಾಂಯ್, ಚರಣ್ ಸಿಂಗ್, ನಾಗೇಂದ್ರ, ಸುಬ್ರಮಣಿ, ಕಿರಣ್‌ಗೌಡ, ಸಂತೋಷ್, ಶೇಖರ್, ರಾಜು ಬ್ಯಾಗ್, ದೇವು, ಶ್ರೀನಿವಾಸ್, ಮೋಹನ್ ಸಿಂಗ್, ರಮೇಶ್ ಮತ್ತಿತರರು ಭಾಗವಹಿಸಿದ್ದರು.

ರಾಜಸ್ಥಾನದಲ್ಲಿ ಬಿಜೆಪಿಗೆ ಭಾರೀ ಹಿನ್ನಡೆ; ಸಚಿವ ಸುರೇಂದ್ರ ಪಾಲ್ ಸಿಂಗ್‌ಗೆ ಸೋಲು

ಜೈಪುರ: ರಾಜಸ್ಥಾನದ ಕರಣಪುರ ಕ್ಷೇತ್ರಕ್ಕೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ರೂಪಿಂದರ್ ಸಿಂಗ್ ಕೂನರ್ ಅವರು ಸಚಿವ ಸುರೇಂದ್ರ ಪಾಲ್ ಸಿಂಗ್ ವಿರುದ್ಧ 11,283 ಮತಗಳಿಂದ ಭರ್ಜರಿ ಗೆಲುವು ಸಾಧಿಸಿದ್ದು, ಆಡಳಿತ ರೂಢ ಬಿಜೆಪಿ ತೀವ್ರ ಮುಖಭಂಗವಾಗಿದೆ.

ಮುಖ್ಯ ಚುನಾವಣಾ ಕಚೇರಿಯ ಪ್ರಕಾರ, ಕೂನರ್ 94,950 ಮತಗಳನ್ನು ಗಳಿಸಿದರೆ, ಸಿಂಗ್ 83,667 ಮತಗಳನ್ನು ಪಡೆದಿದ್ದಾರೆ. ನನಗೆ ಮತ ನೀಡಿದ ಕರಣ್‌ಪುರದ ಜನರಿಗೆ ನಾನು ಕೃತಜ್ಞನಾಗಿದ್ದೇನೆ ... ಕೇಂದ್ರ ಮಂತ್ರಿಗಳು ಸಹ ಪ್ರಚಾರಕ್ಕೆ ಬಂದಿದ್ದರು. ಆದರೆ ಜನ ಅವರನ್ನು ತಿರಸ್ಕರಿಸುವ ಮೂಲಕ ಪ್ರಜಾಪ್ರಭುತ್ವವನ್ನು ಗೆಲ್ಲುವಂತೆ ಮಾಡಿದರು ಎಂದು ಗೆಲುವಿನ ನಂತರ ಕೂನರ್ ಸುದ್ದಿಗಾರರಿಗೆ ತಿಳಿಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಗುರ್ಮೀತ್ ಸಿಂಗ್ ಕೂನರ್ ಅವರ ನಿಧನದಿಂದಾಗಿ ಕರಣಪುರ ವಿಧಾನಸಭಾ ಕ್ಷೇತ್ರದ ಚುನಾವಣೆ ಮುಂದೂಡಿಕೆಯಾಗಿತ್ತು. ಈ ಕ್ಷೇತ್ರಕ್ಕೆ ಜನವರಿ 5ರಂದು ಉಪ ಚುನಾವಣೆ ನಡೆದಿದ್ದು, ಇಂದು ಫಲಿತಾಂಶ ಪ್ರಕಟವಾಗಿದೆ.

ಜೆಟ್‌ಲ್ಯಾಗ್ ಪಬ್‌ನಲ್ಲಿ ಪಾರ್ಟಿ ಪ್ರಕರಣ

ನಟ ದರ್ಶನ್, ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಸೇರಿ 8 ಮಂದಿಗೆ ನೋಟಿಸ್!

ಬೆಂಗಳೂರು: ಮಧ್ಯರಾತ್ರಿ ಅವಧಿ ಮೀರಿ ಬೆಳಗಿನ ಜಾವದವರೆಗೆ ಪಬ್‌ನಲ್ಲಿ ಪಾರ್ಟಿ ಮಾಡಿದ ಪ್ರಕರಣದಲ್ಲಿ ನಟ ದರ್ಶನ್ ಸೇರಿ 8 ಮಂದಿಗೆ ಸೋಮವಾರ ಪೊಲೀಸರು ವಿವರಣೆ ಕೇಳಿ ನೋಟಿಸ್ ಜಾರಿ ಮಾಡಿದ್ದಾರೆ.

ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿನಯದ 'ಕಾಟೇರ' ಚಿತ್ರ ಬಿಡುಗಡೆಯಾಗಿ ಭಾರೀ ಯಶಸ್ಸು ಕಂಡು ಗಳಿಕೆಯಲ್ಲಿ 100 ಕೋಟಿ ಕ್ಲಬ್ ಸೇರಿದೆ. ವಿದೇಶದಲ್ಲಿ ಕೂಡ ಹವಾ ಎಬ್ಬಿಸಿದೆ. ಈ ಖುಷಿಯಲ್ಲಿ ಚಿತ್ರತಂಡ ಜನವರಿ 3ರಂದು ಬೆಂಗಳೂರಿನ ರಾಜಾಜಿನಗರದಲ್ಲಿರುವ ಜೆಟ್ ಲ್ಯಾಗ್ ಪಬ್‌ನಲ್ಲಿ ಸಕ್ಸಸ್ ಪಾರ್ಟಿ ಇಟ್ಟುಕೊಂಡಿತ್ತು. ಅದರಲ್ಲಿ ಚಿತ್ರದ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ನಿರ್ದೇಶಕ ತರುಣ್ ಸುಧೀರ್, ನಾಯಕ ನಟ ದರ್ಶನ್ ಸೇರಿದಂತೆ ಸ್ಯಾಂಡಲ್‌ವುಡ್‌ನ ಹಲವು ನಟ, ನಟಿಯರು ಭಾಗಿಯಾಗಿದ್ದರು.

ಬಾರ್ ಅಂಡ್ ರೆಸ್ಟೋರೆಂಟ್‌ಗೆ ವಿಧಿಸಿರುವ ನಿಯಮದ ಪ್ರಕಾರ ಮಧ್ಯರಾತ್ರಿ 1 ಗಂಟೆಗೆ ಪಬ್ ಬಾಗಿಲು ಹಾಕಬೇಕು. ಆದರೆ ಚಿತ್ರತಂಡ ಮಧ್ಯರಾತ್ರಿ ಮೀರಿ ಬೆಳಗಿನ ಜಾವದವರೆಗೂ ಪಾರ್ಟಿ ಮಾಡಿದ್ದು ಪಾರ್ಟಿ ಮುಗಿಸಿಕೊಂಡು ಹೊರಬರುತ್ತಿದ್ದ ದೃಶ್ಯ ಸಿಸಿಟಿವಿಯಲ್ಲಿ ದಾಖಲಾಗಿದೆ. ಸದ್ಯ ಚಿತ್ರತಂಡ ವಿದೇಶ ಪ್ರವಾಸದಲ್ಲಿದೆ.

> ಪಾರ್ಟಿಯಲ್ಲಿ ಭಾಗಿ ಆದ ನಟ ದರ್ಶನ್, ಅಭಿಷೇಕ್ ಅಂಬರೀಷ್, ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್‌ಗೆ ಆರಂಭದಲ್ಲಿ ಪೊಲೀಸರು ನೋಟಿಸ್ ಜಾರಿ ಮಾಡಿದ್ದರು. ಸುಬ್ರಹ್ಮಣ್ಯನಗರ ಇನ್ಸ್‌ಪೆಕ್ಟರ್ ಸುರೇಶ್ ಅವರಿಂದ ನೋಟಿಸ್ ಜಾರಿ ಆಗಿದೆ.
>
> ಇದೀಗ ಸಿಕ್ಕಿರುವ ಮಾಹಿತಿ ಪ್ರಕಾರ ಪಾರ್ಟಿಯಲ್ಲಿ ಭಾಗಿ ಆಗಿದ್ದ ನಟ ಡಾಲಿ ಧನಂಜಯ್, ನಟ ಚಿಕ್ಕಣ್ಣ, ನಿನಾಸಂ ಸತೀಶ್, ನಿರ್ದೇಶಕ ತರುಣ್ ಸುಧೀರ್, ಸಂಗೀತ ನಿರ್ದೇಶಕ ಹರಿಕೃಷ್ಣ ಅವ ರಿಗೆ ಸಹ ನೋಟಿಸ್ ನೀಡಲಾಗಿದೆ.

ಬಿಲ್ಕಿಸ್ ಬಾನು ಪ್ರಕರಣ; 11 ಅಪರಾಧಿಗಳ ಬಿಡುಗಡೆಗೆ ಗುಜರಾತ್ ಸರ್ಕಾರ ನೀಡಿದ್ದ ಅನುಮತಿ ರದ್ದುಗೊಳಿಸಿದ 'ಸುಪ್ರೀಂ'



ನವದೆಹಲಿ: 2002ರಲ್ಲಿ ನಡೆದ ಗುಜರಾತ್ ಗಲಭೆಗಳ ಸಂದರ್ಭದಲ್ಲಿ ಬಿಲ್ಕಿಸ್ ಬಾನು ಅವರ ಮೇಲಿನ ಸಾಮೂಹಿಕ ಅತ್ಯಾಚಾರ ಮತ್ತು ಆಕೆಯ ಕುಟುಂಬದ ಏಳು ಸದಸ್ಯರನ್ನು ಹತ್ಯೆಗೈದ ಪ್ರಕರಣದಲ್ಲಿ 11 ಅಪರಾಧಿಗಳಿಗೆ ಅವಧಿಪೂರ್ವ ಬಿಡುಗಡೆಗೆ ಅನುಮತಿ ನೀಡುವ ಗುಜರಾತ್ ಸರ್ಕಾರದ ನಿರ್ಧಾರವನ್ನು ಸುಪ್ರೀಂ ಕೋರ್ಟ್ ಸೋಮವಾರ ರದ್ದುಗೊಳಿಸಿದೆ.

ಅಲ್ಲದೆ, ಪ್ರಕರಣದ ನಿರ್ದಿಷ್ಟ ವಿವರಗಳು ಮತ್ತು ಸಂದರ್ಭಗಳನ್ನು ಎಚ್ಚರಿಕೆಯಿಂದ ಪರಿಗಣಿಸದೆ, ಈ ತೀರ್ಪನ್ನು ಏಕರೂಪವಾಗಿ ನೀಡಲಾಗಿದೆ. ಈ ನಿರ್ಧಾರವನ್ನು ಪ್ರಕಟಿಸುವಾಗ ನ್ಯಾಯಾಲಯವು ಹೆಚ್ಚು ಸೂಕ್ಷ್ಮ ಮತ್ತು ಚಿಂತನಶೀಲ ವಿಧಾನವನ್ನು ಅಳವಡಿಸಿಕೊಂಡಿಲ್ಲ ಎಂದಿದೆ.

ನ್ಯಾಯಮೂರ್ತಿಗಳಾದ ಬಿವಿ ನಾಗರತ್ನ ಮತ್ತು ಉಜ್ಜಲ್ ಭುಯಾನ್ ಅವರಿದ್ದ ಪೀಠವು, ಪ್ರಕರಣದ ಅಪರಾಧಿಗಳು ಎರಡು ವಾರಗಳಲ್ಲಿ ಜೈಲು ಅಧಿಕಾರಿಗಳ ಮುಂದೆ ಶರಣಾಗುವಂತೆ ಸೂಚಿಸಿದೆ. ಪ್ರಕರಣದ 11 ಅಪರಾಧಿಗಳಿಗಳ ಶಿಕ್ಷೆಯ ಅವಧಿ ಪೂರ್ಣಗೊಳ್ಳುವ ಮುನ್ನವೇ ಅವರನ್ನು ಬಿಡುಗಡೆ ಮಾಡಿದ ಗುಜರಾತ್ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆ ನಡೆಸಿದ ಪೀಠ, ಗುಜರಾತ್ ಸರ್ಕಾರವು ಶಿಕ್ಷೆ ರದ್ದುಗೊಳಿಸಿ ಹೊರಡಿಸಿರುವ ಆದೇಶವು ಸೂಕ್ತವಲ್ಲ.

ನಾವು ಇತರ ಪ್ರಕರಣಗಳ ಅಂಶಗಳನ್ನು ಪರಿಶೀಲಿಸುವ ಅಗತ್ಯವಿಲ್ಲ. ಆದರೆ, ಅವರು ಪ್ರಕರಣವನ್ನು ಪೂರ್ಣಗೊಳಿಸುವುದಕ್ಕಾಗಿ ಹಾಗೆ ಮಾಡಿದ್ದಾರೆ. ಗುಜರಾತ್ ಸರ್ಕಾರವು ಅಧಿಕಾರ ದುರುಪಯೋಗಪಡಿಸಿಕೊಂಡಿದೆ. ಹೀಗಾಗಿ, ಗುಜರಾತ್ ಸರ್ಕಾರವು ಹೊರಡಿಸಿದ ಕ್ಷಮಾಪಣೆಯ ಆದೇಶಗಳನ್ನು ರದ್ದುಗೊಳಿಸಲಾಗುವುದು ಎಂದು ಪೀಠವು ತನ್ನ 100 ಪುಟಗಳ ತೀರ್ಪಿನಲ್ಲಿ ತಿಳಿಸಿದೆ. ಸುಪ್ರೀಂ ಕೋರ್ಟ್ ತನ್ನ ಮೇ 13, 2022ರಂದು ಮತ್ತೊಂದು ಪೀಠ ನೀಡಿರುವ ಆದೇಶವನ್ನು 'ಅಸಿಂಧು' ಎಂದು ಪರಿಗಣಿಸಿತು. ಗುಜರಾತ್ ಸರ್ಕಾರವು ಅಪರಾಧಿಗಳ ಕ್ಷಮಾಪಣೆ ಅರ್ಜಿಯಲ್ಲಿ ಉದ್ದೇಶಪೂರ್ವಕವಾಗಿ ಪ್ರಮುಖ ಸಂಗತಿಗಳನ್ನು ಮರೆಮಾಚಿದೆ. ತಪ್ಪು ಮಾಹಿತಿಯನ್ನು ಪ್ರಸ್ತುತಪಡಿಸುವ ಮೂಲಕ ನ್ಯಾಯಾಲಯದಲ್ಲಿ ಈ ಆದೇಶವನ್ನು ಪಡೆದಿದೆ ಎಂದು ಹೇಳಿದೆ.

ವಿಶ್ವಪ್ರಜ್ಞಾ ಶಾಲೆಯಲ್ಲಿ ಅಂತರಶಾಲಾ ಚದುರಂಗ ಸ್ಪರ್ಧೆ




ಮೈಸೂರು,ಜ.8–ಮೈಸೂರಿನ ವಿಶ್ವಪ್ರಜ್ಞಾ ಶಾಲೆಯಲ್ಲಿ ಮೈಸೂರು ಚೆಸ್ ಸೆಂಟರ್ ಸಹಯೋಗದೊಂದಿಗೆ ಅಂತರಶಾಲಾ ಚದುರಂಗ ಸ್ಪರ್ಧೆಯನ್ನು ಎಮ್.ಎನ್. ನಿರ್ವಾಣಿಗೌಡ ಅವರ ಸ್ಮರಣಾರ್ಥ ಆಯೋಜಿಸಲಾಗಿತ್ತು. ಕರ್ನಾಟಕದ ಪ್ರಥಮ ಗ್ರ್ಯಾಂಡ್ ಮಾಸ್ಟರ್ ಆದ ಮೈಸೂರಿನ ಎಂ.ಎಸ್.ತೇಜ್‌ಕುಮಾರ್ ಜ್ಯೋತಿ ಬೆಳಗುವುದರ ಮೂಲಕ ಸ್ಪರ್ಧೆ ಉದ್ಘಾಟಿಸಿದರು. ಪರಮೇಶ್‌ಗೌಡ ಅಧ್ಯಕ್ಷತೆ ವಹಿಸಿದ್ದರು. ಶಾಲೆಯ ಆಡಳಿತ ಮಂಡಳಿ ಸದಸ್ಯ ಆರ್.ಕೆ. ರಾಜು, ಸುಹಾಸ್ ಪ್ರಭು, ಕಾರ್ಯಾಧ್ಯಕ್ಷ ಎಮ್.ಎನ್.ಕೃಷ್ಣಸ್ವಾಮಿ, ಮುಖ್ಯೋಪಾಧ್ಯಾಯಿನಿ ಜಿ.ಎನ್. ಸುಧಾ, ಕರ್ನಾಟಕ ಚೆಸ್ ಅಸೋಸಿಯೇಷನ್ನಿನ ಉಪಾಧ್ಯಕ್ಷ ನಾಗೇಂದ್ರ ಮುರಳೀಧರ್, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು. ಸ್ಪರ್ಧೆಯಲ್ಲಿ ವಿಜೇತರಿಗೆ ಪಾರಿತೋಷಕ ಬಹುಮಾನಗಳನ್ನು ವಿತರಿಸಲಾಯಿತು. ವಿಶ್ವಪ್ರಜ್ಞ ಶಾಲೆಯು ವಿನ್ನರ್ ಟ್ರೋಫಿಯನ್ನು ಪಡೆಯಿತು.

ಸ್ವಾತಂತ್ರ್ಯ ಪೂರ್ವದಲ್ಲಿ ಬೆಳಗಾವಿ ಮಹಾರಾಷ್ಟ್ರದಲ್ಲಿತ್ತು: ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿಕೆ ಚರ್ಚೆಗೆ ಗ್ರಾಸ!

ಬೆಂಗಳೂರು: ಸ್ವಾತಂತ್ರ್ಯ ಪೂರ್ವದಲ್ಲಿ ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಿತ್ತು ಎಂಬ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿಕೆ ರಾಜಕೀಯ ವಲಯದಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿದೆ.

ಬೆಳಗಾವಿ ಜಿಲ್ಲೆ ನಿಪ್ಪಾಣಿ ತಾಲೂಕಿನ ಕಾರದಗಾ ಗ್ರಾಮದಲ್ಲಿ ಜ.7ರಂದು ನಡೆದ 6ನೇ ಕನ್ನಡ ಸಮಾವೇಶದಲ್ಲಿ ಭಾಗಿಯಾಗಿದ್ದ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಮಾತಿನ ಭರದಲ್ಲಿ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಿತ್ತು ಎಂಬ ಹೇಳಿಕೆ ನೀಡಿದ್ದು, ಸದ್ಯ ಚರ್ಚೆಗೆ ಗ್ರಾಸವಾಗಿದೆ.

ಕನ್ನಡ ಭಾಷೆ ಹಲವು ವರ್ಷಗಳ ಇತಿಹಾಸ ಹೊಂದಿದೆ. ನಮ್ಮ ಸಾಹಿತಿಗಳು ಇದನ್ನು ಸಾಬೀತು ಮಾಡಿದ್ದಾರೆ. ನಮ್ಮ ಕನ್ನಡ ಭಾಷೆಗೆ ಎಂಟು ಜ್ಞಾನಪೀಠ ಪ್ರಶಸ್ತಿಗಳು ಲಭಿಸಿರೋದು ನಮ್ಮ ಹೆಮ್ಮೆ. ನಮ್ಮ ಕನ್ನಡ ಭಾಷೆ ಕಲೆ ಮತ್ತು ಸಂಸ್ಕೃತಿಯಲ್ಲಿ ಶ್ರೀಮಂತವಾಗಿದೆ. ಇಂತಹ ನಾಡಿನಲ್ಲಿ ಜನಿಸಲು ನಾವು ಪುಣ್ಯ ಮಾಡಿರಬೇಕು. ಆದ್ರೆ ಸ್ವಾತಂತ್ರ್ಯ ಪೂರ್ವದಲ್ಲಿ ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಿತ್ತು ಎಂದು ಭಾಷಣದ ವೇಳೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿಕೆ ನೀಡಿದ್ದಾರೆ. ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಮಾತುಗಳ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.




ಬೆಳಗಾವಿ ವಿಶಾಲ ಕರ್ನಾಟಕಕ್ಕೆ ಸೇರಿ ಅನೇಕ ವರ್ಷಗಳಾಗಿದೆ. ವೋಟಿನ ರಾಜಕಾರಣಕ್ಕೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿಕೆ ನೀಡಿರುವುದು ವಿಷಾದಕರ. ಕಾಶ್ಮೀರ ಕೂಡ ಪಾಕಿಸ್ತಾನಕ್ಕೆ ಸೇರಿದ್ದು ಅಂತ ಕಾಂಗ್ರೆಸ್‌ನವರು ಹೇಳುತ್ತಾರೆ. ಸಿಎಂ ಸಿದ್ದರಾಮಯ್ಯ, ಲಕ್ಷ್ಮಿ ಹೆಬ್ಬಾಳ್ಕರ್ ಅವರನ್ನು ಸಚಿವ ಸಂಪುಟದಿಂದ ಹೊರಗೆ ಇಡಬೇಕು. ಹೆಬ್ಬಾಳ್ಕರ್ ಆರೂವರೆ ಕೋಟಿ ಕನ್ನಡಿಗರಿಗೆ ಅವಮಾನ ಮಾಡಿದ್ದಾರೆ. ಬೆಳಗಾವಿ ಕರ್ನಾಟಕಕ್ಕೆ ಸೇರಿದ್ದು. ಹಾಗಾಗಿಯೇ ಬೆಳಗಾವಿ ಅಧಿವೇಶನ ಮಾಡಲಾಗುತ್ತಿದೆ. ಅವರ ಹೇಳಿಕೆ ಬೇರೆಯವರನ್ನು ಕೆರಳಿಸಲಿದೆ ಎಂದು ಬೆಂಗಳೂರಿನಲ್ಲಿ ಶಾಸಕ ಎಸ್.ಆರ್.ವಿಶ್ವನಾಥ್ ಆಕ್ರೋಶ ಹೊರಹಾಕಿದರು. ಶಾಸಕ ಡಾ.ಅಶ್ವಥ್ ನಾರಾಯಣ್ ಮಾತನಾಡಿ, ಕರ್ನಾಟಕ ವಿವಿಧ ರಾಜ್ಯದಲ್ಲಿ ಹಂಚಿ ಹೋಗಿತ್ತು. ಅದಕ್ಕೆ ಕರ್ನಾಟಕ ಏಕೀಕರಣ ಆಗಿದ್ದು. ಇಂತಹ ಸಂದರ್ಭದಲ್ಲಿ ಹಿಂದಕ್ಕೆ ಹೋಗುವ ಅವಶ್ಯಕತೆ ಇರಲಿಲ್ಲ. ಇದು ರಾಜಕೀಯ ಪ್ರೇರಿತ ಹೇಳಿಕೆ. ಈ ಸಂದರ್ಭದಲ್ಲಿ ಅವಶ್ಯಕತೆ ಇರಲಿಲ್ಲ. ಬೆಳಗಾವಿ ಈಗ ಕರ್ನಾಟಕಕ್ಕೆ ಸೇರಿದೆ. ರಾಜಕೀಯ ಪ್ರೇರಿತ ಹುನ್ನಾರ ಆಗಬಾರದು. ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೆಲಸ ಆಗಬೇಕು. ಕನ್ನಡಿಗರು ವಿವಿಧ ಸಂಸ್ಕೃತಿಯಲ್ಲಿ ಏಕತೆ ಕಾಣಬೇಕು. ಇವರ ಹೇಳಿಕೆಯನ್ನು ಮರಾಠಿಗರಾಗಲಿ, ಕನ್ನಡಿಗರಾಗಲಿ ಬೆಂಬಲಿಸಲ್ಲ ಎಂದರು.

ಮೈಸೂರು ಮಿತ್ರ ಮಂಗಳವಾರ 9 ಜನವರಿ 2024

ಹೊನ್ನಾಯ್ಕನಹಳ್ಳಿ ಗ್ರಾಮದಲ್ಲಿ ಕೃಷಿ ವಸ್ತುಪ್ರದರ್ಶನ

ಕೃಷಿ ಚಟುವಟಿಕೆಗಳಿಗೆ ಕಾರ್ಮಿಕರ ಕೊರತೆ

ಶಾಸಕ ಕೆ.ಎಂ.ಉದಯ್ ವಿಷಾದ



ಹೊನ್ನಾಯಕನಹಳ್ಳಿಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಮಂಡ್ಯ ವಿ.ಸಿ.ಫಾರಂನ ಕೃಷಿ ಮಹಾವಿದ್ಯಾಲಯ ಇವುಗಳ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಕೃಷಿ ವಸ್ತುಪ್ರದರ್ಶನ–2023 ಕಾರ್ಯಕ್ರಮವನ್ನು ಶಾಸಕ ಕೆ.ಎಂ.ಉದಯ್ ಉದ್ಘಾಟಿಸಿದರು.

ಭಾರತೀನಗರ, ಜ.8– ಪ್ರಸ್ತುತ ದಿನದಲ್ಲಿ ಕೃಷಿ ಚಟುವಟಿಕೆಗಳಿಗೆ ಕೃಷಿ ಕಾರ್ಮಿಕರ ಕೊರತೆ ಒಂದು ಕಡೆ ಎದುರಾದರೆ ಮತ್ತೊಂದು ಕಡೆ ಕೃಷಿ ಉಪಕರಣಗಳ ಬೆಲೆ ದುಪ್ಪಟ್ಟಾಗುತ್ತಿದೆ ಎಂದು ಶಾಸಕ ಕೆ.ಎಂ.ಉದಯ್ ವಿಷಾದಿಸಿದರು.

ಇಲ್ಲಿಗೆ ಸಮೀಪದ ಹೊನ್ನಾಯಕನಹಳ್ಳಿ ಗ್ರಾಮದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಮಂಡ್ಯ ವಿ.ಸಿ.ಫಾರಂನ ಕೃಷಿ ಮಹಾವಿದ್ಯಾಲಯ ಇವುಗಳ ಸಹಯೋಗದಲ್ಲಿ ಅಂತಿಮ ವರ್ಷದ ಬಿಎಸ್ಸಿ (ಆನರ್ಸ್), ಡಿಪ್ಲೊಮಾ(ಕೃಷಿ) ವಿದ್ಯಾರ್ಥಿಗಳ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಕೃಷಿ ವಸ್ತುಪ್ರದರ್ಶನವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವ್ಯವಸಾಯವನ್ನೇ ನಂಬಿರುವ ರೈತರು ತಮ್ಮ ಜಮೀನುಗಳಲ್ಲಿ ಬೆಳೆ ಒಕ್ಕಲು ಕೃಷಿ ಕಾರ್ಮಿಕರಿಲ್ಲದೆ ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸಕಾಲಕ್ಕೆ ಮಳೆಯ ಕೊರತೆಯು ಒಂದು ಕಡೆಯಾದರೆ ಮತ್ತೊಂದು ಕಡೆ ರಸಗೊಬ್ಬರಗಳ ಹೆಚ್ಚಳ ದುಪ್ಪಟ್ಟುವಾಗುತ್ತಿರುವುದರಿಂದ ರೈತರು ಅತಂತ್ರರಾಗುತ್ತಿದ್ದಾರೆ ಎಂದರು.

ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯದ ಉಪಕುಲಪತಿ ಡಾ.ಎಸ್.ವಿ.ಸುರೇಶ್ ಅವರು ಮಾತನಾಡಿ, ರೈತರು ಬೆಳೆಗಳನ್ನು ಬೆಳೆದರಷ್ಟೇ ಸಾಲದು, ಬೆಳೆಗಳನ್ನು ಮೌಲ್ಯವರ್ಧನೆ ಮಾಡಿ ಮಾರಾಟ ಮಾಡುವ ಉದ್ಯಮಿಗಳಾಗಬೇಕು. ಈಗಾಗಲೇ ಆಹಾರ ಉತ್ಪಾದನೆಗಳಲ್ಲಿ ಕುಸಿಯುತ್ತಿದ್ದೇವೆ. ಮುಂದೊಂದು ದಿನ ಭಾರತ ದೇಶ ಆಹಾರ ಸಮಸ್ಯೆಯಲ್ಲಿ ಸಿಲುಕಬಾರದು. 2050 ರಲ್ಲಿ ಆಹಾರ ಸಮಸ್ಯೆ ಎದುರಾಗುವ ಸಂಭವವಿದೆ. ಭೂಮಿಯ ಗುಣಮಟ್ಟಗಳನ್ನು ನೋಡಿಕೊಂಡು ಆಹಾರಗಳನ್ನು ಬೆಳೆಯಲು ಮುಂದಾಗಬೇಕೆಂದು ಸಲಹೆ ನೀಡಿದರು.

ರೈತರು ಕೃಷಿಯಲ್ಲಿ ಹೆಚ್ಚು ಲಾಭ ಪಡೆಯಬೇಕೆಂದು ಕೃಷಿಪದ್ಧತಿಯಲ್ಲಿ ಹೆಚ್ಚು ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ಬಳಕೆ ಮಾಡುತ್ತಿದ್ದಾರೆ. ಇದರಿಂದ ಕೃಷಿಭೂಮಿಗಳ ಮೇಲೆ ಹಾನಿಯುಂಟಾಗಿ ಬೆಳೆಯಲ್ಲಿ ಫಲವತ್ತತೆ, ಭೂಮಿಯಲ್ಲಿ ಪೋಷಕಾಂಶ ಕಡಿಮೆಗೊಳ್ಳುತ್ತಿದೆ ಎಂದು ವಿಷಾದಿಸಿದರು. ಕೃಷಿ ಚಟುವಟಿಕೆಗಳಿಂದ ಕೃಷಿಕರು, ಯುವ ಪೀಳಿಗೆ ದೂರ ಸರಿಯುತ್ತಿದ್ದು, ಹೀಗೆ ಕೃಷಿಯಿಂದ ವಿಮುಖರಾದಲ್ಲಿ 2050ರ ವೇಳೆಗೆ ಜನಸಂಖ್ಯಾ ಸ್ಫೋಟವಾಗಿ ಮತ್ತೆ ಆಹಾರ ಸಮಸ್ಯೆ ಎದುರಿಸಬೇಕಾಗುತ್ತದೆ. ಈಗ ಬೆಳೆಯುತ್ತಿರುವ 352 ಮಿಲಿಯನ್ ಟನ್ ಆಹಾರ ಧಾನ್ಯಕ್ಕಿಂತಲೂ ಒಂದೂವರೆ ಪಟ್ಟು ಹೆಚ್ಚು ಬೆಳೆಯಬೇಕಾಗುತ್ತದೆ. ಹಾಗಾಗಿ ರೈತರು ಬೆಳೆಗಳ ಪರಿವರ್ತನೆ ಮಾಡಬೇಕು. ನೀರಿನ ಬಳಕೆ ಕುರಿತು ಜಾಗೃತ ವಹಿಸಬೇಕು ಎಂದು ಹೇಳಿದರು.

ಮಠದ ಹೊನ್ನಾಯಕನಹಳ್ಳಿ ಶ್ರೀಕ್ಷೇತ್ರ ಕಪ್ಪಡಿ ಮಠಾಧಿಪತಿ ಎಂ.ಎಲ್.ವರ್ಚಸ್ವಿ ಶ್ರೀಕಂಠ ಸಿದ್ದಲಿಂಗರಾಜೇ ಅರಸು ದಿವ್ಯ ಸಾನ್ನಿಧ್ಯ ವಹಿಸಿದ್ದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಎಚ್.ಜೆ. ಮೋಹನ್ ಅಧ್ಯಕ್ಷತೆ ವಹಿಸಿದ್ದು, ವಿ.ಸಿ. ಫಾರಂ ಕೃಷಿ ಮಹಾವಿದ್ಯಾಲಯದ ಡೀನ್(ಕೃಷಿ) ಡಾ.ಎಸ್.ಎನ್.ಪ್ರಕಾಶ್, ಸಹ ಶಂಶೋಧನಾ ನಿರ್ದೇಶಕ ಡಾ.ಎನ್. ಶಿವಕುಮಾರ್, ಸಹ ವಿಸ್ತರಣಾಧಿಕಾರಿ ಡಾ.ಡಿ.ರಘುಪತಿ, ಡಿಪ್ಲೊಮಾ(ಕೃಷಿ) ಪ್ರಾಂಶುಪಾಲೆ ಡಾ.ಪಿ.ಎಸ್.ಫಾತಿಮಾ, ಕಾರ್ಯಕ್ರಮ ಸಂಯೋಜಕ ಡಾ.ಜಿ. ನಾಗೇಶ್, ಡಾ.ಎನ್.ಟಿ.ನರೇಶ್, ಮುಖಂಡರಾದ ಎಸ್. ಸಿದ್ದೇಗೌಡ, ಮಹೇಂದ್ರ ಎಚ್.ಎಸ್. ಪ್ರಕಾಶ್, ಎಚ್.ಡಿ.ಶ್ರೀನಿವಾಸ್, ನಿಂಗರಾಜು, ದಾಸಪ್ಪ ಎಚ್.ಸಿ.ಪುಟ್ಟಸ್ವಾಮಿಗೌಡ, ಎಚ್.ಸಿ.ಯೋಗಾನಂದ ಸೇರಿ ಹಲವರಿದ್ದರು.

ಮೇಲುಕೋಟೆಯಲ್ಲಿ ಕಿಳಿಮಾಲೆ ಉತ್ಸವ

ಮೇಲುಕೋಟೆ, ಜ.8– ಚೆಲುವನಾರಾಯಣಸ್ವಾಮಿಗೆ ಜ.5ರಿಂದ ಕೊಠಾರೋತ್ಸವ ವೈಭವದಿಂದ ನೆರವೇರುತ್ತಿದ್ದು, ಜ.14ರವರೆಗೆ ನಡೆಯಲಿದೆ.



ರಾಮಾನುಜಾಚಾರ್ಯರ ಆಣತಿಯಂತೆ ಸೇವೆಗಾಗಿ ನೇಮಿಸಲ್ಪಟ್ಟ ಕೈಂಕರ್ಯಪರರ ವಂಶಸ್ಥರಿಂದ ಅನೂಚಾನ ಸಂಪ್ರದಾಯ ಹಾಗೂ ಪರಂಪರೆಯಂತೆ ಕೊಠಾರೋತ್ಸವ'ದಲ್ಲಿ ಪ್ರತಿದಿನ ಕೈಂಕರ್ಯ ಪರರಿಂದ ತಿರುವೀದಿಯಲ್ಲಿ ಪುಷ್ಪಕೈಂಕರ್ಯ ಸೇವೆ ನಡೆಯುತ್ತಿದೆ.

ಕೊಠಾರೋತ್ಸವದ 4ನೇ ದಿನವಾದ ಸೋಮವಾರ ಸಂಜೆ ಆಯಿತಿರು ಮಾಳಿಗೆಯ ವತಿಯಿಂದ ವಿದ್ವಾನ್ ಅಯಿನರಂಗನ್ ನೇತೃತ್ವದಲ್ಲಿ ಪುಷ್ಪಕೈಂಕರ್ಯ ಸೇವೆ ಹಾಗೂ ಇತರ ಕೈಂಕರ್ಯಗಳನ್ನು ನೆರವೇರಿತು. ತಮಿಳುನಾಡಿನ ಶ್ರೀರಂಗದಿಂದ ವಿಶಿಷ್ಟ ಪುಷ್ಪಗಳಿಂದ ವಿಶೇಷವಾಗಿ ತಯಾರಿಸಿದ ಕಿಳಿಮಾಲೆ (ಗಿಣಿಮಾಲೆ) ತಂದು ಚೆಲುವನಾರಾಯಣಸ್ವಾಮಿಗೆ ಧರಿಸಿ ಭಗವದ್ರಾಮಾನುಜಾಚಾರ್ಯರ ಸಮೇತ ಮಂಗಳವಾದ್ಯಗಳೊಂದಿಗೆ ಉತ್ಸವ ನೆರವೇರಿಸಲಾಯಿತು. ಕೊಠಾರೋತ್ಸವದ ಅಂಗವಾಗಿ ಕೊಠಾರಮಂಟಪದಲ್ಲಿ ಶ್ರೀವೈಷ್ಣವ ಸಿದ್ಧಾಂತದ 12 ಮಂದಿ ಆಳ್ವಾರರುಗಳಿಗೆ ವಿಶೇಷ ಮಾಲೆಮರ್ಯಾದೆ ಸೇವೆ ನೆರವೇರಿಸಲಾಗುತ್ತಿದೆ.

ಕೊಠಾರೋತ್ಸವದ ಅಂಗವಾಗಿ 14ರವರೆಗೆ ರಾಜಬೀದಿಯಲ್ಲಿ ಪುಷ್ಪ ಕೈಂಕರ್ಯಸೇವೆಗಳು ಮತ್ತು ಆಳ್ವಾರ್ ಆಚಾರ್ಯರಿಗೆ ವಿಶೇಷಗೌರವಗಳು ನೆರವೇರುತ್ತಿದ್ದು ಚೆಲುವನಾರಾಯಣಸ್ವಾಮಿ ಪ್ರತಿದಿನ ಉತ್ಸವದಲ್ಲಿ ವಿಶೇಷ ಪುಷ್ಪಾಹಾರಗಳಿಂದ ಕಂಗೊಳಿಸುತ್ತಿದ್ದಾನೆ. ಹತ್ತು ದಿನಗಳಲ್ಲಿ ಅತ್ಯಂತ ಮಹತ್ವದ ದಿನವಾದ ಜನವರಿ 14 ರಂದು ರಾತ್ರಿ ನಮ್ಮಾಳ್ವಾರ್ ಪರಮಪದ ಉತ್ಸವ ನಡೆಯಲಿದ್ದು, ಪರಿಚಾರಕ ಎಂ.ಎನ್ ಪಾರ್ಥಸಾರಥಿ ಸೇವೆ ನಡೆಸಲಿದ್ದಾರೆ.

ಇಂದು ರಾಷ್ಟ್ರೀಯ ಲೋಕ್–ಅದಾಲತ್

ಮಂಡ್ಯ, ಜ.8– ಮಂಡ್ಯ ಜಿಲ್ಲೆಯಲ್ಲಿ ಲೋಕ್ ಅದಾಲತ್ ಮುಖಾಂತರ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ನಿಟ್ಟಿನಲ್ಲಿ ಪೂರ್ವಭಾವಿ ಬೈಠಕ್‌ಗಳನ್ನು ನಡೆಸಿದ್ದು, ಆಸ್ತಿ ವಿವಾದಗಳನ್ನು ಒಳಗೊಂಡಂತೆ ಸಿವಿಲ್ ವ್ಯಾಜ್ಯಗಳು, ಮೋಟಾರು ವಾಹನಗಳ ಪ್ರಕರಣಗಳು, MMRD ಪ್ರಕರಣಗಳು, ರಾಜಿ ಆಗಬಹುದಾದಂತಹ ಕ್ರಿಮಿನಲ್ ಪ್ರಕರಣಗಳನ್ನು ಮತ್ತು ಚೆಕ್ ಬೌನ್ಸ್ ಪ್ರಕರಣಗಳನ್ನು ರಾಜಿಗೆ ತೆಗೆದುಕೊಂಡು ಆಯಾ ನ್ಯಾಯಾಲಯಗಳಲ್ಲಿ ಜನತಾ ನ್ಯಾಯಾಲಯಗಳನ್ನು ಮಾಡಿ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ಪ್ರಯತ್ನ ಮಾಡಲಾಗಿದೆ.

ಈ ಬಾರಿಯ ಲೋಕ್–ಅದಾಲತ್ ಜ.9ರಂದು ನಡೆಯಲಿದ್ದು, ಜನ ಸಾಮಾನ್ಯರು ಇದರ ಸದುಪಯೋಗವನ್ನು ಪಡೆದುಕೊಂಡು ಲೋಕ್ ಅದಾಲತ್‌ಲ್ಲಿ ಭಾಗವಹಿಸಿ ತಮ್ಮ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಬೇಕೆಂದು ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ವಾಣಿ ಎ ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕೃಷ್ಣೇಗೌಡ ನಿಧನ

ಮದ್ದೂರು, ಜ.8– ತಾಲೂಕಿನ ಚಾಂಚೇಗೌಡನದೊಡ್ಡಿ ಗ್ರಾಮದ ಕೃಷ್ಣೇಗೌಡ (72) ಅವರು ಸೋಮವಾರ ನಿಧನರಾದರು. ಮೃತರು ಪತ್ನಿ, ಪುತ್ರಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉದ್ಯೋಗ ಖಾತ್ರಿಗಾಗಿ ಕೃಷಿ ಕೂಲಿಕಾರರ ಪ್ರತಿಭಟನಾ ಮೆರವಣಿಗೆ



ಮಂಡ್ಯದಲ್ಲಿ ಕೃಷಿ ಕಾರ್ಮಿಕರ ಪ್ರತಿಭಟನಾ ಮೆರವಣಿಗೆ ನಡೆಯಿತು.

ಮಂಡ್ಯ,ಜ.8– ಬರ ಪರಿಹಾರ ಬಿಡುಗಡೆ ಮಾಡಿ, ಉದ್ಯೋಗ ಖಾತ್ರಿ ಕೆಲಸ ನೀಡುವಂತೆ ಒತ್ತಾಯಿಸಿ ಕೃಷಿ ಕೂಲಿಕಾರರು ನಗರದಲ್ಲಿ ಸೋಮವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಆಶ್ರಯದಲ್ಲಿ ನಗರದ ಜಯ ಚಾಮರಾಜೇಂದ್ರ ಒಡೆಯರ್ ವೃತ್ತದಿಂದ ಮೆರವಣಿಗೆ ಹೊರಟ ಕೃಷಿ ಕೂಲಿಕಾರರು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು. ಬರ ಪರಿಸ್ಥಿತಿಯ ಸಂಕಷ್ಟದ ಸಮಯ ಎದುರಾಗಿದ್ದು ಕೇಂದ್ರದ ಕಡೆ ಬೊಟ್ಟು ಮಾಡದೆ ತುರ್ತಾಗಿ ಬರ ಪರಿಹಾರ ಬಿಡುಗಡೆ ಮಾಡಬೇಕು, ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕಾಮಗಾರಿ ಸೃಷ್ಟಿಸಿ, ಕೃಷಿ ಕೂಲಿಕಾರರಿಗೆ ಕೆಲಸ ನೀಡಬೇಕು, ಕೆಲಸದ ದಿನಗಳನ್ನು ನೂರು ದಿನಕ್ಕೆ ಬದಲಾಗಿ 200 ದಿನಕ್ಕೆ ಹೆಚ್ಚಿಸಬೇಕು, ಸರ್ಕಾರ ನಿಗದಿಪಡಿಸಿರುವ ಕನಿಷ್ಠ ಕೂಲಿ 484 ರೂ ಸಂದಾಯ ಮಾಡಬೇಕು, ನೂರು ದಿನ ಕೆಲಸ ಮಾಡಿರುವ ಕೂಲಿಕಾರರಿಗೆ ಹೆಚ್ಚುವರಿ 50 ದಿನ ಕೆಲಸ ನೀಡಬೇಕು, ಪ್ರತಿ 15 ದಿನಕ್ಕೊಮ್ಮೆ ಕೂಲಿ ಪಾವತಿಸಬೇಕು, ಉದ್ಯೋಗ ಖಾತ್ರಿಯಲ್ಲಿ ಗುತ್ತಿಗೆದಾರರು, ಯಂತ್ರದ ಹಾವಳಿ ತಪ್ಪಿಸಬೇಕು, ನಗರ ಪ್ರದೇಶಕ್ಕೂ ಉದ್ಯೋಗ ಖಾತ್ರಿ ವಿಸ್ತರಿಸಬೇಕು ಎಂದು ಒತ್ತಾಯಿಸಿದರು.

ಬರಗಾಲ ಪರಿಸ್ಥಿತಿ ಇರುವುದರಿಂದ ಬ್ಯಾಂಕ್, ಮೈಕ್ರೋ ಫೈನಾನ್ಸ್ ಗಳಲ್ಲಿ ಕೂಲಿಕಾರರು ಪಡೆದಿರುವ ಸಾಲ ವಸೂಲಾತಿಯನ್ನು ನಿಲ್ಲಿಸಬೇಕು, ಮೈಕ್ರೋ ಫೈನಾನ್ಸ್ ಸಾಲ ನಿಷೇಧಿಸಿ ಉಪಕಸಬು ಕೈಗೊಳ್ಳಲು ಬ್ಯಾಂಕ್‌ನಿಂದ 2 ಲಕ್ಷದವರೆಗೆ ಸಾಲ ನೀಡಬೇಕು, ವಲಸೆ ಕಾರ್ಮಿಕರ ಕಾಯ್ದೆ ಕಟ್ಟುನಿಟ್ಟಾಗಿ ಜಾರಿ ಮಾಡಿ ಜಿಲ್ಲೆಯಲ್ಲಿ ಕಬ್ಬು ಕಡಿಯಲು ಬಂದಿರುವ ವಲಸೆ ಕಾರ್ಮಿಕರಿಗೆ ಮೂಲಸೌಕರ್ಯ ಕಲ್ಪಿಸಬೇಕು, ಅವರ ಮಕ್ಕಳಿಗೆ ಸಮರ್ಪಕ ಶಿಕ್ಷಣ ನೀಡಬೇಕು, ಜಿಲ್ಲೆಯಲ್ಲಿ ಕೆಟ್ಟು ನಿಂತಿರುವ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ದುರಸ್ತಿ ಮಾಡಬೇಕು ಎಂದು ಆಗ್ರಹಿಸಿದರು.

ರೈತರಿಗೆ ಪ್ರತಿ ಎಕರೆಗೆ 25 ಸಾವಿರ ಬರ ಪರಿಹಾರ ನೀಡಬೇಕು, ಸರ್ಕಾರಿ ಭೂಮಿಯಲ್ಲಿ ವಾಸಿಸುತ್ತಿರುವ ಬಡ ಜನತೆಗೆ ಹಕ್ಕುಪತ್ರ ನೀಡಬೇಕು, ನಿವೇಶನ ರಹಿತರಿಗೆ ನಿವೇಶನ ಸೌಲಭ್ಯ ಕಲ್ಪಿಸಿ ವಸತಿ ನಿರ್ಮಿಸಿ ಕೊಡಬೇಕು, ನರಿಪುರದಲ್ಲಿ ಪಡಿತರ ವಿತರಣೆಗೆ ಉಪ ಕೇಂದ್ರ ತೆರೆಯಬೇಕು, ಅಂಗವಿಕಲರು, ವೃದ್ಧರು, ಒಂಟಿ ಮಹಿಳೆಯರ ಕುಟುಂಬಗಳ ಮನೆ ಬಾಗಿಲಿಗೆ ಪಡಿತರ ವಿತರಿಸಬೇಕು ಎಂದು ಒತ್ತಾಯಿಸಿದರು.

ಸಂಘದ ರಾಜ್ಯಾಧ್ಯಕ್ಷ ಎನ್.ಪುಟ್ಟಮಾದು, ಮುಖಂಡರಾದ ಜಿ.ಎನ್.ನಾಗರಾಜು, ಬಿ.ಹನುಮೇಶ್, ಬಿ.ಎಂ.ಶಿವಮಲ್ಲಯ್ಯ, ಅನಿತಾ, ಮಧುಕುಮಾರ್, ಅಮಾಸಯ್ಯ, ಆರ್.ರಾಜು, ಜಿ.ಎಚ್ ಗಿರೀಶ್, ರಾಮಣ್ಣ, ಟಿ.ಹೆಚ್.ಆನಂದ್, ಮಹಾದೇವ, ಲಕ್ಷ್ಮಿ, ಮಂಜುಳಾ ಭಾಗವಹಿಸಿದ್ದರು.

ಮದ್ದೂರು ಪಶು ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿ ಅಮಾನತು

ಮಂಡ್ಯ, ಜ.8– ಮಂಡ್ಯ ನಗರದ ಪಶು ಆಸ್ಪತ್ರೆಯಲ್ಲಿ ಸಹಾಯಕ ನಿರ್ದೇಶಕರಾಗಿದ್ದ ವೇಳೆ ಅಧಿಕಾರ ದುರುಪಯೋಗಪಡಿಸಿಕೊಂಡು ಹಣ ದುರ್ಬಳಕೆ ಮಾಡಿ ಸರ್ಕಾರಕ್ಕೆ ಸುಳ್ಳು ಮಾಹಿತಿ ನೀಡಿದ್ದ ಆರೋಪದ ಮೇಲೆ ಮದ್ದೂರು ಪಶು ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿ ಡಾ.ಬಿ.ಬಿ.ಪ್ರವೀಣ್‌ಕುಮಾರ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.



ಮಂಡ್ಯ ಪಶು ಆಸ್ಪತ್ರೆಯಲ್ಲಿ ಸಹಾಯಕ ನಿರ್ದೇಶಕರಾಗಿದ್ದ ಡಾ.ಬಿ.ಬಿ.ಪ್ರವೀಣ್ ಕುಮಾರ್ 2018–19ನೇ ಸಾಲಿನಲ್ಲಿ ಎಸ್‌ಸಿಪಿ ಹಾಗೂ ಟಿಎಸ್‌ಪಿ ಯೋಜನೆಯಡಿಯಲ್ಲಿ 500 ಸಂಖ್ಯೆಯ ಮಾಂಸದ ಕೋಳಿ ಘಟಕ ಸ್ಥಾಪಿಸಲು ಇರುವ ಯೋಜನೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡದೇ ಮತ್ತು ಸದರಿ ಫಲಾನುಭವಿಗಳಿಗೆ ಸಹಾಯಧನವನ್ನು ಮಂಜೂರು ಮಾಡದೇ ಕೇವಲ ನಕಲಿ ದಾಖಲೆಗಳನ್ನು ನಮೂದಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ.

ಪರಿಶಿಷ್ಟ ಜಾತಿಗೆ ಮೀಸಲಿರಿಸಿದ ಯೋಜನಾ ಹಣವನ್ನು ದುರುಪಯೋಗ ಮಾಡಿರುವುದು ತನಿಖೆಯಲ್ಲಿ ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಇವರ ವಿರುದ್ಧದ ಆರೋಪಗಳ ಕುರಿತಂತೆ ಶಿಸ್ತು ಪ್ರಕರಣವನ್ನು ಬಾಕಿ ಇರಿಸಿ ತಕ್ಷಣದಿಂದ ಸೇವೆಯಿಂದ ಅಮಾನತು ಮಾಡಿ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಶರಣಬಸಪ್ಪ ಆದೇಶಿಸಿದ್ದಾರೆ.

ಸಿದ್ದರಾಮಯ್ಯ ಸರ್ಕಾರ ನುಡಿದಂತೆ ನಡೆದಿದೆ: ಹೆಚ್‌ಪಿಎಂ



ಹುಣಸೂರಿನ ಪತ್ರಕರ್ತರ ಭವನದಲ್ಲಿ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿದರು

ಹುಣಸೂರು, ಜ.8– ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ನುಡಿದಂತೆ ನಡೆದಿದೆ. ಭ್ರಷ್ಟಾಚಾರ ರಹಿತ ಆಡಳಿತ ನೀಡುತ್ತಿದೆ ಎಂದು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಸಿದ್ದರಾಮಯ್ಯನವರು 159 ಭರವಸೆಗಳನ್ನು ಈಡೇರಿಸಿದ್ದಾರೆ. ಇದೀಗ ಜನರಿಗೆ ನೀಡಿದ ಭರವಸೆಯಂತೆ ಎಲ್ಲಾ 5 ಗ್ಯಾರಂಟಿಗಳನ್ನು ಜಾರಿಗೊಳಿಸಿದ್ದಾರೆ. ಸರ್ಕಾರದಲ್ಲಿ ಯಾವುದೇ ಗೊಂದಲ ಇಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಾನು ವಾರಕ್ಕೆ 2 ಬಾರಿ ಹುಣಸೂರಿಗೆ ಆಗಮಿಸಿ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದೇನೆ. ಈ ಬಗ್ಗೆ ಎಂಎಲ್‌ಸಿ ವಿಶ್ವನಾಥ್ ಅವರಿಗೆ ತಿಳಿದಿಲ್ಲ ಎಂದು ಅಭಿವೃದ್ಧಿ ಕುರಿತು ಚರ್ಚಿಸಲು ಹಾಲಿ, ಮಾಜಿ ಶಾಸಕರು ಸಿಗುತ್ತಿಲ್ಲ ಎಂಬ ವಿಶ್ವನಾಥ್ ಅವರ ಆರೋಪಕ್ಕೆ ತಿರುಗೇಟು ನೀಡಿದ ಅವರು, ಎಂದಿನಂತೆ ನಿರಂತರವಾಗಿ ಜನರಿಗೆ ನೆರವಾಗುತ್ತಿದ್ದೇನೆ ಎಂದರು.

ಸರ್ಕಾರದ ಗ್ಯಾರಂಟಿ ಯೋಜನೆಗಳಿಂದಾಗಿ ಅನುದಾನ ಕಡಿಮೆ ಬರುತ್ತಿದೆ. ತಮ್ಮ ಅವಧಿಯ ಕಾಮಗಾರಿಗಳಿಗೆ ಚಾಲನೆ ಸಿಕ್ಕಿದೆ. ನಗರಸಭೆಯ ನಗರೋತ್ಥಾನ ಕಾಮಗಾರಿಗಳಿಗೆ ಅಂದು ತಡೆಯೊಡ್ಡಿದ್ದರು. ಇದೀಗ ಕಾಮಗಾರಿಗೆ ವೇಗ ಸಿಕ್ಕಿದೆ. ಮಂಜುನಾಥ ಬಡಾವಣೆ ಮನೆಗಳಿಗೆ ನೀರು ನುಗ್ಗುವುದನ್ನು ತಪ್ಪಿಸಲು ಮಂಜೂರಾಗಿರುವ 3.5ಕೋಟಿ ಕಾಮಗಾರಿ ಶೀಘ್ರ ಆರಂಭಗೊಳ್ಳಲಿದೆ ಎಂದರು.

ನೆನೆಗುದಿಗೆ ಬಿದ್ದಿರುವ ಅರಸು ಭವನ ಕಾಮಗಾರಿಗೆ 2.5 ಕೋಟಿ ರೂ. ಬಿಡುಗಡೆಯಾಗಿದೆ. ಹೈಟೆಕ್ ಆಸ್ಪತ್ರೆಯ ಬಾಕಿ ಹಣ ಗುತ್ತಿಗೆದಾರನಿಗೆ ಪಾವತಿಯಾಗಿದ್ದು, ವೇಸ್ಟ್ ಮ್ಯಾನೇಜ್‌ಮೆಂಟ್ ಯುನಿಟ್‌ಗಾಗಿ 1.5 ಕೋಟಿ ಸೇರಿದಂತೆ ಉಳಿಕೆ ಕಾಮಗಾರಿಗಳಿಗೆ ಅನುದಾನ ಮಂಜೂರಾಗಬೇಕಿದೆ ಎಂದರು.

ಕಳೆದ 8 ತಿಂಗಳಿನಿಂದೀಚೆಗೆ ಗ್ರಾಪಂ ಆಡಳಿತದ ಬಗ್ಗೆ ಸಾಕಷ್ಟು ದೂರಿದೆ ಸರ್ಕಾರಿ ಭೂಮಿ ಪೋರ್ಜರಿ ಹಕ್ಕುಪತ್ರ, ಅಕ್ರಮ ಖಾತೆಗಳ ಬಗ್ಗೆ ಆಪಾದನೆಗಳಿವೆ. ತಾಪಂ ಇಓ ಈ ಬಗ್ಗೆ ಕ್ರಮವಹಿಸಬೇಕಿದೆ ಎಂದರು.

ತಾಲೂಕು ಪತ್ರಕರ್ತರ ಸಂಘಕ್ಕೆ ಸಿಎ ನಿವೇಶನ ಪಡೆದುಕೊಳ್ಳಿ. ತಾವು ಕಟ್ಟಡ ನಿರ್ಮಾಣಕ್ಕೆ ಸರ್ಕಾರದಿಂದ ಅನುದಾನ ಕೊಡಿಸುವುದಾಗಿ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಆರ್.ಕೃಷ್ಣ ಕುಮಾರ್ ಮನವಿಗೆ ಭರವಸೆ ನೀಡಿದರು. ಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ರಮೇಶ್, ಕಾರ್ಯಾಧ್ಯಕ್ಷ ಪುಟ್ಟರಾಜು, ಮುಖಂಡರಾದ ಬಸವರಾಜು, ಚಿಕ್ಕಸ್ವಾಮಿ ಇದ್ದರು.

ಪ್ರತಿಯೊಬ್ಬರೂ ಮಕ್ಕಳಿಗೆ ಶಿಕ್ಷಣ ಕೊಡಿಸಿ: ವಿಶ್ವನಾಥ್



ಕೆ.ಆರ್.ನಗರ, ಜ.8– ಸಮಾಜ ಅಭಿವೃದ್ಧಿ ಹೊಂದಲು ಶಿಕ್ಷಣ ಬಹಳ ಮುಖ್ಯ ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಕರೆ ನೀಡಿದರು.

ಸಂಗೊಳ್ಳಿ ರಾಯಣ್ಣ ಪ್ರಾಥಮಿಕ ಶಾಲಾ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘದಿಂದ ಪಟ್ಟಣದ ಸಮುದಾಯ ಭವನದಲ್ಲಿ ನಡೆದ ಪ್ರತಿಭಾ ಪುರಸ್ಕಾರ, ನಿವೃತ್ತ ಶಿಕ್ಷಕರಿಗೆ ಸನ್ಮಾನ ಮತ್ತು ಸಂಘದ 9ನೇ ವಾರ್ಷಿಕೋತ್ಸವ ಹಾಗೂ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಸಮಾಜದ ಮಕ್ಕಳ ವಿದ್ಯಾಭ್ಯಾಸಕ್ಕೆ ಸಂಘ ಸಂಸ್ಥೆಗಳು ಮತ್ತು ಚುನಾಯಿತ ಸದಸ್ಯರು ಸಹಕಾರ ನೀಡಬೇಕೆಂದು ಸಲಹೆ ನೀಡಿದ ಅವರು ದೇವರಾಜ ಅರಸು ಸರ್ಕಾರದಲ್ಲಿ ಮಂತ್ರಿಯಾಗಿದ್ದ ಟಿ.ಮರಿಯಪ್ಪರವರ ಸಹಕಾರದಿಂದ ಕುರುಬ ಸಮಾಜದ ಮಕ್ಕಳು ಶಿಕ್ಷಿತರಾಗಲು ಸಾಕಷ್ಟು ಅನುಕೂಲವಾಗಿತ್ತು. ಮಧುವನಹಳ್ಳಿ ಬಡಾವಣೆಯಲ್ಲಿ ವಿದ್ಯಾರ್ಥಿ ನಿಲಯ ಮತ್ತು ಶಾಲೆ ಆರಂಭಿಸಲು ಅವರ ಕೊಡುಗೆ ಅಪಾರ ಎಂದರು.

ಶೆಫರ್ಡ್ಸ್ ಇಂಡಿಯಾ ಇಂಟರ್‌ನ್ಯಾಷನಲ್ ಸಂಸ್ಥೆ ಸಾಕಷ್ಟು ಬಲಗೊಂಡಿದ್ದು, ದೇಶದಲ್ಲಿರುವ 12 ಕೋಟಿ ಕುರುಬ ಸಮಾಜವನ್ನು ಸಂಘಟಿಸುವ ಕೆಲಸ ಮಾಡುತ್ತಿದ್ದೇವೆ. ಹೆಚ್ಚಿನ ಅಧ್ಯಾಯನಕ್ಕೆ ಹೊರ ದೇಶಕ್ಕೆ ಹೋಗುವ ಸಮುದಾಯದ ವಿದ್ಯಾರ್ಥಿಗಳಿಗೆ ಸಂಸ್ಥೆ ವತಿಯಿಂದ ಎಲ್ಲಾ ರೀತಿಯ ವ್ಯವಸ್ಥೆ ಕಲ್ಪಿಸುತ್ತಿದ್ದು, ಇದರ ಸದ್ಬಳಕೆ ಮಾಡಿಕೊಂಡು ಉತ್ತಮ ಶಿಕ್ಷಣ ಪಡೆಯಬೇಕು ಎಂದು ಸಲಹೆ ನೀಡಿದರು.

ಶಾಸಕ ಡಿ.ರವಿಶಂಕರ್ ಮಾತನಾಡಿ, ಸಮಾಜದ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸುವ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಂಡು ಉನ್ನತ ಅಧಿಕಾರಿಗಳಾಗುವಂತೆ ಕಿವಿಮಾತು ಹೇಳಿದ್ದಲ್ಲದೆ ಬಡ ಮಕ್ಕಳ ಶಿಕ್ಷಣಕ್ಕೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಈ ವೇಳೆ 14 ಮಂದಿ ವೈದ್ಯ ವಿದ್ಯಾರ್ಥಿಗಳು ಸೇರಿದಂತೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಆರ್‌ಟಿಓ ಅಧಿಕಾರಿ ಮಲ್ಲಿಕಾರ್ಜುನ್, ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಜಿ.ಎ.ನಾಗರಾಜು, ಪ್ರಧಾನ ಕಾರ್ಯದರ್ಶಿ ಬಿ.ಭಾಸ್ಕರ್ ಮಾತನಾಡಿದರು.

ತಾಲೂಕು ಕುರುಬರ ಸಂಘದ ಅಧ್ಯಕ್ಷ ಶಿವಣ್ಣ, ಉಪಾಧ್ಯಕ್ಷ ಕೆ.ಎಂ.ಶ್ರೀನಿವಾಸ್, ಪುರಸಭೆ ಸದಸ್ಯ ನಟರಾಜು, ಟಿಎಪಿಸಿಎಂಎಸ್ ನಿರ್ದೇಶಕ ರವಿ, ಮುಖಂಡರಾದ ಕುಳ್ಳಬೋರೆಗೌಡ, ಆನಂದ್, ಡಾ.ಶ್ರೀಕಾಂತ್, ಉಮೇಶ್, ಸಂಘದ ಪದಾಧಿಕಾರಿಗಳಾದ ಕಾಳೇಗೌಡ, ಕಲಾವಿದ ಮಹದೇವ್, ಸಿ.ಎನ್.ಸ್ವಾಮಿ, ಹೆಚ್.ಡಿ. ಚಿಕ್ಕೇಗೌಡ, ಮಂಜುನಾಥ್, ಪ್ರಮಿಳಾ, ಮಂಜುರಾಜ್, ಜ್ಯೋತಿಶ್ವರಿ, ವಸಂತ್ ಕುಮಾರ್, ನಾಗರಾಜು ಮತ್ತಿತರರಿದ್ದರು.

ಒಂದನೇ ಪುಟದಿಂದ

ಗಣಿಗಾರಿಕೆ ನಿಷಿದ್ಧ

ಒಂದನೇ ಪುಟದಿಂದ

ಗಣಿಗಾರಿಕೆ ನಡೆಸುತ್ತಿದ್ದರೂ ಅವುಗಳನ್ನು ತಕ್ಷಣ ಸ್ಥಗಿತಗೊಳಿಸುವಂತೆ ಪೀಠ ಹೇಳಿದೆ.

2018ರಲ್ಲಿ ಮಂಡ್ಯ ಜಿಲ್ಲಾಧಿಕಾರಿಗಳು, ಸ್ಫೋಟಕ ಸಾಮಗ್ರಿ ಬಳಸದೆ ಗಣಿಗಾರಿಕೆ ನಡೆಸಬಹುದೆಂದು ನೀಡಿದ್ದ ಆದೇಶಕ್ಕೂ ತಡೆ ನೀಡಲಾಗಿದೆ. 2021ರಲ್ಲಿ ಜಲಾಶಯ ಸುರಕ್ಷಾ ಕಾಯಿದೆ ಜಾರಿಗೆ ತಂದಿದ್ದರೂ ಇದನ್ನು ನ್ಯಾಯಾಲಯಗಳ ಗಮನಕ್ಕೆ ತರದೆ ಕೆಲವರು ಗಣಿಗಾರಿಕೆಗೆ ಅನುಮತಿ ಪಡೆದುಕೊಂಡಿದ್ದಾರೆ. ನ್ಯಾಯಾಲಯದ ದಾರಿ ತಪ್ಪಿಸುವ ಕೆಲಸವೂ ನಡೆದಿದೆ, ತಜ್ಞರು ಈ ವ್ಯಾಪ್ತಿಯಲ್ಲಿ ಪ್ರಾಯೋಗಿಕವಾಗಿ ಸ್ಫೋಟ ಮಾಡಿದ್ದು, ಅಣೆಕಟ್ಟೆಯಲ್ಲಿ ಕಂಪನ ಮೂಡಿತ್ತು ಎಂಬ ವರದಿ ಇದೆ.

ಸರ್ಕಾರ ನೇಮಿಸಿರುವ ತಜ್ಞರು ಕೂಲಂಕಷವಾಗಿ ಪರಿಶೀಲನೆ ಮಾಡಿ ವರದಿ ನೀಡಲಿ, ಆ ವರದಿ ಬರುವವರೆಗೂ ಪೂರ್ಣ ಗಣಿಗಾರಿಕೆಗೆ ನಿಷೇಧ ಇರುತ್ತದೆ, ಮುಂದೆ ನೋಡೋಣ ಎಂದಿದ್ದಾರೆ. ಕೃಷ್ಣರಾಜ ಸಾಗರ ಅಣೆಕಟ್ಟೆಗೆ ಪಾರಂಪರಿಕ ಇತಿಹಾಸವಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಸರ್ ಎಂ. ವಿಶ್ವೇಶ್ವರಯ್ಯನವರ ದೂರದೃಷ್ಟಿ, ಅಲ್ಲಿನ ಜನರ ಬೆವರು ಮತ್ತು ರಕ್ತದಿಂದ ಇದು ನಿರ್ಮಾಣವಾಗಿದೆ. ಕರ್ನಾಟಕ ರಾಜ್ಯದ ಜನತೆಗೆ ಕುಡಿಯುವ ನೀರು ಹಾಗೂ ಕೃಷಿಗೆ ಇದು ಆಗರವಾಗಿದೆ. ಅಣೆಕಟ್ಟು ಕರ್ನಾಟಕಕ್ಕೆ ಮಾತ್ರ ಸೀಮಿತವಲ್ಲ, ಮೂರು ರಾಜ್ಯಗಳಿಗೆ ನೀರಿನ ಪ್ರಮುಖ ಜಲಾಶಯವಾಗಿದ್ದು, ಇದರ ರಕ್ಷಣೆ ನಮ್ಮ–ನಿಮ್ಮೆಲ್ಲರ ಕರ್ತವ್ಯ ಎಂದಿದ್ದಾರೆ.

> “ಈ ತೀರ್ಪು ಇಡೀ ರಾಜ್ಯದ ರೈತರ ಗೆಲುವಾಗಿದೆ. ಗಣಿಗಾರಿಕೆ ನಿಷೇಧ ಮಾಡುವಂತೆ ಹಲವು ವರ್ಷಗಳಿಂದ ಹೋರಾಟ ಮಾಡಿದ್ದೆವು. ಕೆ.ಎಸ್. ಪುಟ್ಟಣ್ಣಯ್ಯ ಅವರು ಆಗಲೇ ಗಣಿಗಾರಿಕೆಯಿಂದ ಜಲಾಶಯಕ್ಕೆ ಅಪಾಯವಿದೆ ಎಂದು ಹೇಳಿದ್ದರು. ನಾಲ್ವಡಿಯವರು ತುಂಬಾ ಶ್ರಮಪಟ್ಟು ಜಲಾಶಯ ಕಟ್ಟಿದ್ದರು. ಸ್ವಲ್ಪ ವಿಳಂಬವಾದರೂ ಉತ್ತಮ ತೀರ್ಪು ಬಂದಿದೆ. ಇದಕ್ಕೆ ಸಹಕರಿಸಿದ ಎಲ್ಲಾ ಹೋರಾಟಗಾರರಿಗೆ ಧನ್ಯವಾದಗಳು. –ಎ.ಎಲ್.ಕೆಂಪೂಗೌಡ, ಜಿಲ್ಲಾಧ್ಯಕ್ಷರು, ರಾಜ್ಯ ರೈತಸಂಘ, ಮಂಡ್ಯ

> “ಹೈಕೋರ್ಟ್ ಮುಖ್ಯ ನ್ಯಾಯಾಧೀಶರ ತೀರ್ಪು ಸ್ವಾಗತಾರ್ಹವಾಗಿದೆ. ಕೆಆರ್‌ಎಸ್ ಜಲಾಶಯ ನಮ್ಮ ಅಸ್ಮಿತೆಯಾಗಿದ್ದು, ಇದಕ್ಕೆ ಧಕ್ಕೆ ಬರುತ್ತದೆ ಎಂದಾಗ ಎಲ್ಲ ಸಂಘಟನೆಗಳು, ರೈತ ಚಳುವಳಿ, ಪ್ರಗತಿಪರ ಸಂಘಟನೆಗಳು ಹೋರಾಟ ಮಾಡಿದ್ದೆವು. ಆ ಹೋರಾಟಕ್ಕೆ ಜಯ ಸಿಕ್ಕಂತಾಗಿದೆ. ಇದರಿಂದ ಪರಿಸರ, ಪ್ರಾಣಿ, ಪಕ್ಷಿಗಳು, ಜಿಲ್ಲೆಯ ರೈತರು ಉಳಿದಂತಾಗಿದೆ. –ಸುನಂದಾ ಜಯರಾಂ, ಸಂಘಟನಾ ಕಾರ್ಯದರ್ಶಿ, ರೈತ ಹಿತರಕ್ಷಣಾ ಸಮಿತಿ, ಮಂಡ್ಯ

> “ಹೈಕೋರ್ಟ್ ಆದೇಶವನ್ನು ನಾನು ಹೃದಯಪೂರ್ವಕವಾಗಿ ಸ್ವಾಗತಿಸುತ್ತೇನೆ. ಐತಿಹಾಸಿಕ ಜಲಾಶಯವು ನಮ್ಮ ನಾಡಿನ ಪ್ರತೀಕವಾಗಿದೆ. ಇದನ್ನು ಉಳಿಸುವುದು ಎಲ್ಲರ ಕರ್ತವ್ಯ. ಗಣಿಗಾರಿಕೆಯಿಂದ ಜಲಾಶಯಕ್ಕೆ ಆತಂಕ ಇತ್ತು. ಅದನ್ನು ನಿವಾರಿಸುವ ನಿಟ್ಟಿನಲ್ಲಿ ಹೈಕೋರ್ಟ್ ಆದೇಶ ನೀಡಿರುವುದು ಉತ್ತಮ ಬೆಳವಣಿಗೆಯಾಗಿದೆ. –ಅರ್ಜುನಹಳ್ಳಿ ಪ್ರಸನ್ನಕುಮಾರ್, ನೀರಾವರಿ ತಜ್ಞ

ವನಸಿರಿನಾಡು ಮೇವು ರೈತ ಉತ್ಪಾದಕರ ಸಹಕಾರ ಸಂಘಕ್ಕೆ ಆಯ್ಕೆ



ಹೆಚ್.ಡಿ.ಕೋಟೆ ತಾಲೂಕಿನ ಇಂದಿರಾ ನಗರದ ವನಸಿರಿನಾಡು ಮೇವು ರೈತ ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ ಈರೇಗೌಡರ ಬಣದ ಕೆ.ಈರೇಗೌಡ, ಆರ್.ಜಯಶಂಕರ್, ಎಂ.ಪ್ರಕಾಶ್, ಬಸವರಾಜಪ್ಪ, ಬೀರೇಗೌಡ, ಸಿ.ಮರಳೂರ ನಾಯಕ, ಆರ್.ಲತಾ, ವಿರೂಪಾಕ್ಷ, ಎಂ.ಶಿವಕುಮಾರ್, ಶಿವರಾಜು, ಶೋಭಾವತಿ. ಎಸ್.ಪಿ.ಸಕಲೇಶ್, ಎಚ್.ಎನ್.ಸುಧೀರ್ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಅರ್ಜಿ ಆಹ್ವಾನ

ಮಂಡ್ಯ, ಜ.8– ಪರಿಶಿಷ್ಟ ಜಾತಿ/ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಎಸ್‌ಎಸ್‌ಪಿ (ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶ) ಯೋಜನೆಯಡಿ 2023–24ನೇ ಸಾಲಿನ ವಿದ್ಯಾರ್ಥಿಗಳಿಗೆ ssp.postmatric.karnataka.gov.in ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಹೆಚ್ಚಿನ ಮಾಹಿತಿಗೆ ದೂ: 08232–223471 ಸಂಪರ್ಕಿಸಿ.

ಅಭಿಮಾನಿಗಳು ವಿದ್ಯುತ್ ಸ್ಪರ್ಶದಿಂದ ಸಾವು

ಹಿನ್ನೆಲೆಯಲ್ಲಿ, ಬೃಹತ್ ಕಟೌಟ್ ಸಿದ್ಧಪಡಿಸಿದ್ದ ಗ್ರಾಮದ ಯುವಕರು, ಆದರೆ ಅದಕ್ಕೆ ಕಬ್ಬಿಣದ ಫ್ರೇಮ್ ಅಳವಡಿಸಿದ್ದರು. ಅದನ್ನು ಎತ್ತಿ ನಿಲ್ಲಿಸುವಾಗ ಮೇಲಿದ್ದ ವಿದ್ಯುತ್ ಲೈನ್ ತಂತಿಗೆ ತಾಗುತ್ತಿದ್ದಂತೆ ಮೂವರು ಸ್ಥಳದಲ್ಲೇ ಅಸು ನೀಗಿದರೆ, ಮತ್ತೆ ಮೂವರು ತೀವ್ರವಾಗಿ ಗಾಯಗೊಂಡಿದ್ದಾರೆ. ಮರಣೋತ್ತರ ಪರೀಕ್ಷೆ ನಂತರ ಇಂದು ಬೆಳಗ್ಗೆ ದೇಹಗಳನ್ನು ವಾರಸುದಾರರಿಗೆ ಒಪ್ಪಿಸಲಾಗಿತ್ತು.

ಸಾಮೂಹಿಕ ಅಂತ್ಯಸಂಸ್ಕಾರ: ಯುವಕರ ಅಂತಿಮ ಸಂಸ್ಕಾರದಲ್ಲಿ ಇಡೀ ಸೂರಣಗಿ ಗ್ರಾಮವಲ್ಲದೆ ಸುತ್ತಮುತ್ತಲಿನ ಊರುಗಳ ಜನ ಸಹ ಭಾಗಿಯಾಗಿದ್ದರು. ವಿದ್ಯುತ್ ಪ್ರವಹಿಸಿ ಸಾವಿಗೀಡಾದ ಹಣಮಂತ ಹರಿಜನ, ಮುರಳಿ ನಡುವಿನಮನಿ ಮತ್ತು ನವೀನ್ ಅವರ ಅಂತ್ಯಸಂಸ್ಕಾರವನ್ನು ಸಾಮೂಹಿಕವಾಗಿ ನೆರವೇರಿಸಲಾಯಿತು.

ಪರಿಹಾರ: ಮೃತ ಯುವಕರ ಕುಟುಂಬದವರು ಬಡವರಾಗಿದ್ದು ಕೂಲಿ ಮಾಡಿಕೊಂಡು ಜೀವನ ನಡೆಸುವವರಾಗಿದ್ದಾರೆ. ಅವರ ಕುಟುಂಬಕ್ಕೆ ತಲಾ 2 ಲಕ್ಷ ರೂಪಾಯಿ ಪರಿಹಾರ ಮತ್ತು ಗಾಯಾಳುಗಳಿಗೆ ತಲಾ 50 ಸಾವಿರ ರೂಪಾಯಿ ಪರಿಹಾರವನ್ನು ಸರ್ಕಾರ ಘೋಷಿಸಿದೆ ಎಂದು ಗದಗ ಉಸ್ತುವಾರಿ ಸಚಿವ ಹೆಚ್.ಕೆ ಪಾಟೀಲ್ ತಿಳಿಸಿದ್ದಾರೆ.

ನಟ ಯಶ್ ಭೇಟಿ: ತಮ್ಮ ಹುಟ್ಟುಹಬ್ಬದಂದು ಅಭಿಮಾನಿಗಳು ದಾರುಣವಾಗಿ ಮೃತಪಟ್ಟ ಗ್ರಾಮಕ್ಕೆ ಇಂದು ಸಂಜೆ ನಟ ಯಶ್ ಭೇಟಿ ನೀಡಿ, ಸಂತ್ರಸ್ತ ಕುಟುಂಬಗಳಿಗೆ ಸಾಂತ್ವನ ಹೇಳಿದರು. ತಮ್ಮ ಮುಂಬರುವ ಚಿತ್ರದ ಕೆಲಸದ ಮೇಲೆ ವಿದೇಶಕ್ಕೆ ತೆರಳುವುದಾಗಿ ಈ ಹಿಂದೆಯೇ ಹೇಳಿದ್ದ ಯಶ್ ಈ ಘಟನೆ ನಡೆದ ಹಿನ್ನೆಲೆಯಲ್ಲಿ ವಿಶೇಷ ವಿಮಾನ ಮೂಲಕ ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿ, ಅಲ್ಲಿಂದ ಹೆಲಿಕಾಪ್ಟರ್‌ನಲ್ಲಿ ಗದಗಕ್ಕೆ ಬಂದು ಅಲ್ಲಿಂದ ರಸ್ತೆ ಮಾರ್ಗ ಸೂರಣಗಿ ಗ್ರಾಮಕ್ಕೆ ಭೇಟಿ ನೀಡಿದರು ಎಂದು ತಿಳಿದುಬಂದಿದೆ.


ಕಟೌಟ್‌ಗಳಿಗೆ ಸರ್ಕಾರ ನಿರ್ಬಂಧ ವಿಧಿಸಬೇಕು: ರಾಕಿಂಗ್ ಸ್ಟಾರ್ ಯಶ್ ಹುಟ್ಟುಹಬ್ಬ ಸಂದರ್ಭದಲ್ಲಿ ಕಟೌಟ್ ಕಟ್ಟಲು ಹೋಗಿದ್ದ ಗದಗ ಜಿಲ್ಲೆಯ ಸೂರಣಗಿ ಗ್ರಾಮದ ಮೂವರು ಯುವಕರು ವಿದ್ಯುತ್ ತಂತಿ ತಾಗಿ ಸಾವಿಗೀಡಾಗಿದ್ದು ಬಹಳ ನೋವಿನ ಸಂಗತಿ. ಇಂತಹ ಘಟನೆಗಳು ಆಗದಂತೆ ಸರ್ಕಾರ ಕಟೌಟ್‌ಗಳಿಗೆ ನಿರ್ಬಂಧ ವಿಧಿಸಬೇಕು ಮತ್ತು ಚಿತ್ರನಟರು ಬಹಳ ಎಚ್ಚರಿಕೆಯನ್ನು ವಹಿಸಬೇಕು ಎಂದು ವಿಧಾನಸಭೆ ವಿರೋಧ ಪಕ್ಷ ನಾಯಕ ಆರ್ ಅಶೋಕ್ ಹೇಳಿದ್ದಾರೆ.

ಬೆಂಗಳೂರಿನಲ್ಲಿಂದು ಮಾತನಾಡಿದ ಅವರು, ನಟರ ಬಗ್ಗೆ ಅಭಿಮಾನ ಇರಬೇಕು, ಆದರೆ ಅದು ಅತಿರೇಕವಾಗಿ ಪ್ರಾಣ ಕಳೆದುಕೊಳ್ಳುವ ಮಟ್ಟಕ್ಕೆ ಹೋಗಬಾರದು. ಈ ಬಗ್ಗೆ ನಟರು ಅಭಿಮಾನಿಗಳಿಗೆ ಮೊದಲೇ ತಿಳುವಳಿಕೆ, ಬುದ್ಧಿಮಾತು ಹೇಳಬೇಕು. ನಟರ ಕಟೌಟ್‌ಗಳನ್ನು ಎಷ್ಟು ಅಡಿ ಎತ್ತರಕ್ಕೆ ಹಾಕಬೇಕು, ಎಷ್ಟು, ಹೇಗೆ ಹಾಕಬೇಕು ಎಂದು ಸರ್ಕಾರ ಕೂಡ ನಿರ್ಬಂಧ ವಿಧಿಸಬೇಕು. ಇಂತಹ ಎಚ್ಚರಿಕೆ ವಹಿಸಿದರೆ ದುರ್ಘಟನೆಗಳನ್ನು ತಪ್ಪಿಸಬಹುದು ಎಂದರು. ಯಶ್ ಅವರು ಗಾಯಾಳುಗಳನ್ನು ಭೇಟಿ ಮಾಡಲು ಆಸ್ಪತ್ರೆಗೆ ತೆರಳುತ್ತಿದ್ದ ವೇಳೆ ಅವರನ್ನು ಬೈಕ್‌ನಲ್ಲಿ ಹಿಂಬಾಲಿಸಿದ ಅಭಿಮಾನಿಯೋರ್ವ ಅಪಘಾತಕ್ಕೀಡಾಗಿ, ತೀವ್ರ ಗಾಯಗೊಂಡಿದ್ದಾನೆ. ಯಶ್ ಅವರಿಗೆ ಬೆಂಗಾವಲಾಗಿ ತೆರಳುತ್ತಿದ್ದ ಪೊಲೀಸ್ ವಾಹನಕ್ಕೆ ಈತನ ಬೈಕ್ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡಿದ್ದ ಆತನನ್ನು ಪೊಲೀಸರು ತಮ್ಮ ವಾಹನದಲ್ಲಿ ಕರೆದೊಯ್ದು ಆಸ್ಪತ್ರೆಗೆ ದಾಖಲಿಸಿದರು.

ಉಪ ತಹಸೀಲ್ದಾರ್ ಅಮಾನತು

ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ತಕ್ಷಣ ಅವರನ್ನು ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ, ಚಿಕಿತ್ಸೆ ಫಲಕಾರಿಯಾಗದೇ ಅವರು ಸಾವನ್ನಪ್ಪಿದ್ದರು. ಈ ವೇಳೆ ಘಟನೆಗೆ ಕಾರಣರಾದ ಉಪ ತಹಸೀಲ್ದಾರ್ ಶಿವಕುಮಾರ್ ಅವರನ್ನು ಅಮಾನತುಗೊಳಿಸಬೇಕು. ಅಲ್ಲಿವರೆಗೂ ನಾವು ಶವ ಪಡೆಯುವುದಿಲ್ಲ ಎಂದು ಪಟ್ಟು ಕುಟುಂಬ ವರ್ಗದವರು ಮತ್ತು ಹರತಲೆ ಗ್ರಾಮಸ್ಥರು ಪಟ್ಟು ಹಿಡಿದು ಪ್ರತಿಭಟನೆ ನಡೆಸಿದ್ದರು. ಅಲ್ಲದೇ ಮೃತನ ಕುಂಟುಂಬಕ್ಕೆ ಪರಿಹಾರದ ಜೊತೆಗೆ ಕೆಲಸ ಕೊಡಬೇಕು ಎಂದು ಆಗ್ರಹ ಪಡಿಸಿದ್ದರು. ತನ್ನ ಆತ್ಮಹತ್ಯೆಗೆ ಹುಲ್ಲಹಳ್ಳಿ ನಾಡ ಕಚೇರಿ ಉಪ ತಹಸೀಲ್ದಾರ್ ಎನ್.ಪಿ.ಶಿವಕುಮಾರ್ ನೀಡಿದ ಕಿರುಕುಳವೇ ಕಾರಣ ಎಂದು ಡೆತ್‌ನೋಟ್ ಬರೆದಿಟ್ಟು ಕಂಪ್ಯೂಟರ್ ಆಪರೇಟರ್ ಪರಮೇಶ್ ಆತ್ಮಹತ್ಯೆ ಮಾಡಿಕೊಂಡಿದ್ದ ಹಿನ್ನೆಲೆಯಲ್ಲಿ ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ.ಪ್ರಕಾಶ್, ಉಪ ತಹಸೀಲ್ದಾರ್ ಅವರನ್ನು ವಿಚಾರಣೆ ಕಾಯ್ದಿರಿಸಿ, ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ. ಇದಕ್ಕೂ ಮುನ್ನ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಶಾಸಕ ದರ್ಶನ್ ಧ್ರುವನಾರಾಯಣ್ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿ, ನ್ಯಾಯ ದೊರಕಿಸಿಕೊಡುವ ಭರವಸೆ ನೀಡಿದ್ದರು.

ಅಯೋಧ್ಯೆ ರಾಮಮಂದಿರದ್ದು ಹತ್ತು ಹಲವು ವಿಶೇಷದಲ್ಲಿ ವಿಶೇಷ




ಶ್ರೀರಾಮನ ಬಂಟ ಹನುಮನ ಮನಮೋಹಕ ವಿಗ್ರಹ






ವಿದ್ಯುತ್ ಬೆಳಕಿನಲ್ಲಿ ಕಂಡುಬಂದ ಗರುಡ ವಿಗ್ರಹದ ಚಿತ್ರ



ರಾಮಮಂದಿರದ ಪ್ರವೇಶ ದ್ವಾರದಲ್ಲಿರುವ ಆನೆಯ ಮೂರ್ತಿ. ಇವುಗಳನ್ನು ರಾಜಸ್ಥಾನದ ಬಂಸಿ ಪಹಾರ್‌ಪುರ ಗ್ರಾಮದಿಂದ ಪಡೆದ ಗುಲಾಬಿ ಮರಳುಗಲ್ಲಿನಿಂದ ಕೆತ್ತಲಾಗಿದೆ



ಪ್ರವೇಶದ್ವಾರದಲ್ಲಿ ನಿರ್ಮಾಣ ಮಾಡಲಾಗಿರುವ ಸುಂದರ, ಆಕರ್ಷಕವಾದ ಗರುಡ ವಿಗ್ರಹ



ರಾಮ ಮಂದಿರದ ಆವರಣ

ಅಯೋಧ್ಯೆ: ಜನವರಿ 22ರಂದು ಅಯೋಧ್ಯೆಯಲ್ಲಿ ಉದ್ಘಾಟನೆಯಾಗಲಿರುವ ರಾಮ ಮಂದಿರ ವಿಶೇಷದಲ್ಲಿ ವಿಶೇಷವಾದ ಧಾರ್ಮಿಕ ಹಾಗೂ ಭಕ್ತಿ ನೆಲೆ. ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ದೇವಾಲಯದ ಪ್ರಮುಖ ವೈಶಿಷ್ಟ್ಯಗಳನ್ನು ಹಂಚಿಕೊಂಡಿದೆ.

ರಾಮಮಂದಿರದ ವಿಶೇಷತೆಗಳು: ಮಂದಿರವು ಸಾಂಪ್ರದಾಯಿಕ ನಾಗರ ಶೈಲಿಯಲ್ಲಿದೆ. 380 ಅಡಿ ಉದ್ದ (ಪೂರ್ವ–ಪಶ್ಚಿಮ), 250 ಅಡಿ ಅಗಲ ಮತ್ತು 161 ಅಡಿ ಎತ್ತರವನ್ನು ಹೊಂದಿದೆ. ನಾಗರ ವಾಸ್ತುಶಿಲ್ಪವು ಉತ್ತರ ಭಾರತದಲ್ಲಿ ಹುಟ್ಟಿಕೊಂಡ ದೇವಾಲಯದ ವಾಸ್ತು ಶಿಲ್ಪದ ಶೈಲಿಯಾಗಿದೆ. ದೇವಾಲಯಗಳು ಶಿಖರಗಳೆಂದು ಕರೆಯಲ್ಪಡುವ ಎತ್ತರದ ಪಿರಮಿಡ್ ಗೋಪುರಗಳನ್ನು ಹೊಂದಿದ್ದು, ಮೇಲ್ಭಾಗದಲ್ಲಿ ಕಲಶವಿದೆ. ದೇವಾಲಯಗಳ ಕಂಬಗಳನ್ನು ಸಂಕೀರ್ಣವಾದ ವಿನ್ಯಾಸಗಳಿಂದ ಕೆತ್ತಲಾಗಿದೆ. ಗೋಡೆಗಳನ್ನು, ಶಿಲ್ಪಗಳು ಮತ್ತು ಉಬ್ಬುಶಿಲ್ಪಗಳಿಂದ ಅಲಂಕರಿಸಲಾಗಿದೆ.

ಶ್ರೀ ರಾಮ ಜನ್ಮಭೂಮಿ ತೀರ್ಥದ ಪ್ರಕಾರ, ರಾಮಮಂದಿರವು ಮೂರು ಅಂತಸ್ತಿನದ್ದಾಗಿದ್ದು, ಪ್ರತಿ ಮಹಡಿಯು 20 ಅಡಿ ಎತ್ತರವಿದೆ. ಇದು ಒಟ್ಟು 392 ಕಂಬಗಳು ಮತ್ತು 44 ಬಾಗಿಲುಗಳನ್ನು ಹೊಂದಿದೆ.

ಗರ್ಭಗೃಹವು ದೇವಾಲಯದ ಒಳಗಿನ ಗರ್ಭಗೃಹವಾಗಿದ್ದು, ಅಲ್ಲಿ ದೇವರನ್ನು ಪ್ರತಿಷ್ಠಾಪಿಸಲಾಗುತ್ತಿದೆ. ಮುಖ್ಯ ಗರ್ಭಗುಡಿಯಲ್ಲಿ, ಭಗವಾನ್ ಶ್ರೀರಾಮನ ಬಾಲ್ಯದ ರೂಪ, (ಶ್ರೀರಾಮಲಲ್ಲಾನ ವಿಗ್ರಹ) ಮತ್ತು ಮೊದಲ ಮಹಡಿಯಲ್ಲಿ ಶ್ರೀರಾಮ ದರ್ಬಾರ್ ಇರುತ್ತದೆ.

ದೇವಾಲಯವು ಐದು ಮಂಟಪಗಳನ್ನು (ಸಭಾಂಗಣ) ಒಳಗೊಂಡಿದೆ ಅವುಗಳೆಂದರೆ ನೃತ್ಯ ಮಂಟಪ, ರಂಗ ಮಂಟಪ, ಸಭಾ ಮಂಟಪ, ಪ್ರಾರ್ಥನೆ ಮತ್ತು ಕೀರ್ತನ ಮಂಟಪಗಳು. ದೇವತೆಗಳ ಪ್ರತಿಮೆಗಳು ಕಂಬಗಳು ಮತ್ತು ಗೋಡೆಗಳನ್ನು ಅಲಂಕರಿಸುತ್ತವೆ.

ಮಂದಿರದ ಪ್ರವೇಶವು ಪೂರ್ವದಿಂದ, ಸಿಂಗ್ ದ್ವಾರದ ಮೂಲಕ 32 ಮೆಟ್ಟಿಲುಗಳನ್ನು ಏರುತ್ತದೆ. ಜೊತೆಗೆ ಅಂಗವಿಕಲರು ಮತ್ತು ವಯಸ್ಸಾದವರ ಅನುಕೂಲಕ್ಕಾಗಿ ಇಳಿಜಾರು ಮತ್ತು ಲಿಫ್ಟ್‌ಗಳನ್ನು ಒದಗಿಸಲಾಗಿದೆ.

ಪಾರ್ಕೋಟಾ (ಆಯತಾಕಾರದ ಸಂಯುಕ್ತ ಗೋಡೆ) 732 ಮೀಟರ್ ಉದ್ದ ಮತ್ತು 14 ಅಡಿ ಅಗಲ, ಮಂದಿರವನ್ನು ಸುತ್ತುವರೆದಿದೆ.

ಆವರಣದ ನಾಲ್ಕು ಮೂಲೆಗಳಲ್ಲಿ ನಾಲ್ಕು ಮಂದಿರಗಳಿವೆ –ಸೂರ್ಯ ದೇವ, ದೇವಿ ಭಗವತಿ, ಗಣೇಶ್ ಭಗವಾನ್ ಮತ್ತು ಭಗವಾನ್ ಶಿವನಿಗೆ ಸಮರ್ಪಿತವಾಗಿದೆ. ಉತ್ತರದಲ್ಲಿ ಅನ್ನಪೂರ್ಣ ಮಂದಿರವಿದೆ ಮತ್ತು ದಕ್ಷಿಣದಲ್ಲಿ ಹನುಮಾನ್ ಮಂದಿರವಿದೆ.

ಮಂದಿರದ ಬಳಿ ಒಂದು ಐತಿಹಾಸಿಕ ಬಾವಿ (ಸೀತಾ ಕೂಪ್) ಇದೆ. ಇದು ಪ್ರಾಚೀನವಾದುದು. ಶ್ರೀ ರಾಮ ಜನ್ಮ ಭೂಮಿ ಮಂದಿರದ ಸಂಕೀರ್ಣದಲ್ಲಿ, ಮಹರ್ಷಿ ವಾಲ್ಮೀಕಿ, ಮಹರ್ಷಿ ವಶಿಷ್ಠ, ಮಹರ್ಷಿ ವಿಶ್ವಾಮಿತ್ರ, ಮಹರ್ಷಿ ಅಗಸ್ತ್ಯ, ನಿಶಾದ್ ರಾಜ್, ಮಾತಾ ಶಬರಿ ಮತ್ತು ದೇವಿ ಅಹಲ್ಯಾಳ ಮಂದಿರಗಳಿವೆ.

ಸಂಕೀರ್ಣದ ನೈಋತ್ಯ ಭಾಗದಲ್ಲಿ, ಕುಬೇರ್ ತಿಲಾದಲ್ಲಿ, ಭಗವಾನ್ ಶಿವನ ಪುರಾತನ ಮಂದಿರವನ್ನು ಜಟಾಯು ಸ್ಥಾಪನೆಯೊಂದಿಗೆ ಪುನಃಸ್ಥಾಪಿಸಲಾಗಿದೆ. ಮಂದಿರದಲ್ಲಿ ಎಲ್ಲಿಯೂ ಕಬ್ಬಿಣವನ್ನು ಬಳಸಿಲ್ಲ. ನೆಲದ ತೇವಾಂಶದಿಂದ ರಕ್ಷಣೆಗಾಗಿ ಗ್ರಾನೈಟ್ ಬಳಸಿ 21 ಅಡಿ ಎತ್ತರದ ಸ್ತಂಭವನ್ನು ನಿರ್ಮಿಸಲಾಗಿದೆ.

ಮಂದಿರದ ಅಡಿಪಾಯವನ್ನು 14–ಮೀಟರ್ ದಪ್ಪದ ರೋಲರ್–ಕಾಂಪ್ಯಾಕ್ಟ್ ಕಾಂಕ್ರೀಟ್ (RCC) ಪದರದಿಂದ ನಿರ್ಮಿಸಲಾಗಿದೆ, ಇದು ಕೃತಕ ಬಂಡೆಯ ನೋಟವನ್ನು ನೀಡುತ್ತದೆ.

ಮಂದಿರ ಸಂಕೀರ್ಣವು ಒಳಚರಂಡಿ ಸಂಸ್ಕರಣಾ ಘಟಕ, ನೀರು ಸಂಸ್ಕರಣಾ ಘಟಕ, ಅಗ್ನಿ ಸುರಕ್ಷತೆಗಾಗಿ ನೀರು ಸರಬರಾಜು ಮತ್ತು ಸ್ವತಂತ್ರ ವಿದ್ಯುತ್ ಕೇಂದ್ರವನ್ನು ಹೊಂದಿದೆ.

ಇದರ ಹೊರತಾಗಿ, 25,000 ಜನರ ಸಾಮರ್ಥ್ಯದ ಪಿಲ್ಗ್ರಿಮ್ಸ್ ಫೆಸಿಲಿಟಿ ಸೆಂಟರ್ (PFC) ನ್ನು ನಿರ್ಮಿಸಲಾಗುತ್ತಿದೆ, ಇದು ಯಾತ್ರಾರ್ಥಿಗಳಿಗೆ ವೈದ್ಯಕೀಯ ಸೌಲಭ್ಯಗಳು ಮತ್ತು ಲಾಕರ್ ಸೌಲಭ್ಯವನ್ನು ಒದಗಿಸುತ್ತದೆ. ಸಂಕೀರ್ಣವು ಸ್ನಾನದ ಪ್ರದೇಶ, ವಾಶ್‌ರೂಮ್‌ಗಳು, ವಾಶ್‌ಬಾಸಿನ್, ತೆರೆದ ಟ್ಯಾಪ್‌ಗಳು ಇತ್ಯಾದಿಗಳೊಂದಿಗೆ ಪ್ರತ್ಯೇಕ ಬ್ಲಾಕ್ ಅನ್ನು ಸಹ ಹೊಂದಿರುತ್ತದೆ.

ಮಂದಿರವನ್ನು ಸಂಪೂರ್ಣವಾಗಿ ಭಾರತದ ಸಾಂಪ್ರದಾಯಿಕ ಮತ್ತು ಸ್ಥಳೀಯ ತಂತ್ರಜ್ಞಾನವನ್ನು ಬಳಸಿ ನಿರ್ಮಿಸಲಾಗುತ್ತಿದೆ. ಪರಿಸರ–ಜಲ ಸಂರಕ್ಷಣೆಗೆ ನಿರ್ದಿಷ್ಟ ಒತ್ತು ನೀಡಿ 70 ಎಕರೆ ಪ್ರದೇಶದಲ್ಲಿ 70% ರಷ್ಟು ಹಸಿರು ಬಿಡಲಾಗಿದೆ.

ಕುಂಬಾರ ಸಂಘದ ನೂತನ ದಿನದರ್ಶಿಕೆ ಬಿಡುಗಡೆ




ಕುಲಾಲ ಗುಂಡ ಬ್ರಹ್ಮಾರ್ಯ ಕುಂಬಾರ ಸಂಘದ ನೂತನ ದಿನದರ್ಶಿಕೆ ಬಿಡುಗಡೆ ಮಾಡಲಾಯಿತು.

ತಿ.ನರಸೀಪುರ, ಜ.8– ಶಿಕ್ಷಣದ ಕೊರತೆಯಿಂದಾಗಿ ಕುಂಬಾರ ಸಮಾಜ ಇತರೆ ಸಮಾಜದಂತೆ ಮುಂದುವರೆಯಲು ಸಾಧ್ಯವಾಗಿಲ್ಲ ಎಂದು ಕುಲಾಲ ಗುಂಡ ಬ್ರಹ್ಮಾರ್ಯ ಕುಂಬಾರರ ಸಂಘದ ಮೈಸೂರು ಜಿಲ್ಲಾಧ್ಯಕ್ಷ ಎಚ್.ಎಸ್.ಪ್ರಕಾಶ್ ಹೇಳಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ನೂತನ ದಿನದರ್ಶಿಕೆ ಬಿಡುಗಡೆ ಮಾಡಿ ಮಾತನಾಡಿದ ಅವರು, ರಾಜ್ಯದಲ್ಲಿ ಜನಾಂಗದ ಸ್ಥಿತಿ ಅಷ್ಟೇನು ಉತ್ತಮವಾಗಿಲ್ಲ. ಇತ್ತೀಚೆಗೆ ಸಮಾಜದ ಮಠಗಳು ಸ್ಥಾಪನೆಯಾಗಿವೆ. ಸ್ವಾಮೀಜಿಗಳು ಸಮಾಜದ ಅಂಕು ಡೊಂಕು ತಿದ್ದುವ ಕೆಲಸ ಮಾಡುತ್ತಿದ್ದಾರೆ. ಆದರೆ ನಮ್ಮ ಸಮಾಜದಲ್ಲಿ ಶಿಕ್ಷಣದ ಕೊರತೆಯಿಂದ ನಾವು ಇತರೆ ಸಮಾಜಗಳಂತೆ ಸಾಮಾಜಿಕ, ಆರ್ಥಿಕ, ರಾಜಕೀಯವಾಗಿ ಮುಂದುವರೆಯಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಸಮಾಜದ ಪೋಷಕರು ಮಕ್ಕಳಿಗೆ ಶಿಕ್ಷಣ ಕೊಡಿಸಬೇಕಿದೆ ಎಂದರು.

ಸಂಘದ ಸಂಸ್ಥಾಪಕರಾದ ಕೇತಳ್ಳಿ ರಾಜಣ್ಣ ಮಾತನಾಡಿದರು. ಮಹಿಳಾ ಸಂಘದ ಅಧ್ಯಕ್ಷೆ ರೇಣುಕಮ್ಮ, ಡಾ.ಗೋವಿಂದ ಶೆಟ್ಟಿ, ತಾಲೂಕು ಅಧ್ಯಕ್ಷ ಕಿರಗಸೂರು ರಮೇಶ್, ಉಪಾಧ್ಯಕ್ಷ ಸಿದ್ದರಾಜು, ಜಿಲ್ಲಾ ನಿರ್ದೇಶಕ ಚಂದ್ರಶೇಖರ್, ಮಹದೇವಶೆಟ್ಟಿ, ವೋಡಾಫೋನ್ ಚಂದ್ರು, ಮಹದೇವ ಸ್ವಾಮಿ, ರವಿಕುಮಾರ್, ಎಂ.ಪಿ.ಸಿದ್ದರಾಜು, ಶಿವಕುಮಾರ್, ವಸಂತ, ಬೇಕರಿ ಸಿದ್ದರಾಜು, ಮಾದಶೆಟ್ಟಿ, ನಾಗರಾಜು ಮತ್ತಿತರರಿದ್ದರು.



ಮೈಸೂರಿನ ರಾಮಕೃಷ್ಣನಗರದಲ್ಲಿರುವ ವಿಶ್ವಮಾನವ ವಿದ್ಯಾನಿಕೇತನ ಶಾಲೆಯಲ್ಲಿ ಶಾಲಾ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಈ ವೇಳೆ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು, ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ, ನಿವೃತ್ತ ಪ್ರಾಂಶುಪಾಲ ಜಯರಾಮು ಕೀಲಾರ, ಶಾಲೆಯ ಸಂಸ್ಥಾಪಕ ಪ್ರೊ. ಬಿ.ಕೆ.ಚಂದ್ರಶೇಖರೇಗೌಡ, ಆಡಳಿತಾಧಿಕಾರಿ ಪ್ರೊ. ಕೆ.ಎ.ದಿವಾಕರ್, ಮುಖ್ಯೋಪಾಧ್ಯಾಯಿನಿ ವಿಜಯಲಕ್ಷ್ಮಿ ಮತ್ತು ಶಿಕ್ಷಕವೃಂದ ಹಾಜರಿದ್ದರು.

ಅರಣ್ಯ ಇಲಾಖೆ ಅಕ್ರಮದ ದಾಖಲೆ ಕೊಡ್ತೇನೆ, ಕ್ರಮ ಕೈಗೊಳ್ತೀರಾ ಈಶ್ವರ ಖಂಡ್ರೆಯವರೇ...

● ಮಾಜಿ ಸಿಎಂ ಕುಮಾರಸ್ವಾಮಿ ಸವಾಲು ● ಎ1, ಎ2 ಬಿಟ್ಟು ವಿಕ್ರಮ್ ಸಿಂಹ ವಿರುದ್ಧ ಕ್ರಮ ಕೈಗೊಂಡ್ರಿ; ಆದರೆ ವಿರಾಜಪೇಟೆಯಲ್ಲಿ 2 ವರ್ಷದಿಂದ ರೋಸ್‌ವುಡ್ ಲೂಟಿ ಆಗ್ತಾ ಇದ್ರು ಕ್ರಮ ಕೈಗೊಂಡಿಲ್ಲ ಏಕೆ?



ಬೆಂಗಳೂರು, ಜ.8(ಕೆಎಂಶಿ)–ಅರಣ್ಯ ಇಲಾಖೆಯಲ್ಲಿ ನಡೆದಿರುವ ಅಕ್ರಮಗಳ ಕುರಿತು ಮಾಹಿತಿ, ದಾಖಲೆಗಳನ್ನು ಕೊಡುತ್ತೇನೆ, ತನಿಖೆ ಮಾಡುವ ದಮ್ಮು–ತಾಕತ್ತು ಇದೆಯಾ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಗೆ ಸವಾಲು ಹಾಕಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತರೀಕೆರೆ ಅರಣ್ಯದಲ್ಲಿ ಮರಗಳನ್ನು ಕಡಿದ ಪ್ರಕರಣದಲ್ಲಿ ಸರ್ಕಾರದ ಅಧಿಕಾರಿಗಳೇ ಎಷ್ಟು ಜನ ಶಾಮೀಲಾಗಿದ್ದಾರೆ, ಕಡಿದ ಆ ಮರಗಳಲ್ಲಿ ಅರ್ಧ ಭಾಗದಷ್ಟು ಮರಗಳು ಯಾವ ಶಾಸಕನ ಮನೆಗೆ ಹೋಯಿತು, ಇಂತಹ ಮರಗಳು ಮನೆ ಕಟ್ಟುತ್ತಿದ್ದ ಶಾಸಕನ ಮನೆಗೆ ಹೋಗಿವೆ. ಈ ಬಗ್ಗೆ ನಿಮಗೆ ಗೊತ್ತಿಲ್ಲವಾ ಖಂಡ್ರೆಯವರೇ ಎಂದು ಪ್ರಶ್ನಿಸಿದರು. ದಾಖಲೆ ಇಲ್ಲದೆ ನಾನು ಮಾತನಾಡುವುದಿಲ್ಲ. ಆ ಶಾಸಕ ಯಾರು ಎಂದು ಈಶ್ವರ್ ಖಂಡ್ರೆ ಅವರನ್ನೆ ಕೇಳಿ? ಕಡಿದ ಮರಗಳು ತರೀಕೆರೆಯಲ್ಲಿ ಯಾವ ಶಾಸಕನ ಮನೆಗೆ ಹೋದವು, ನೀವು ಕ್ರಮ ತೆಗೆದುಕೊಂಡಿದ್ದೀರಾ, ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ ಯಾಕೆ?

ಮರ ಕಡಿಯುವವರಿಗೆ ಕುಮಾರಸ್ವಾಮಿ ಬೆಂಬಲ ಕೊಡ್ತಿದ್ದಾರೆ ಎಂದು ಸಚಿವರು ಹೇಳಿದ್ದಾರೆ. ನಾನು ಮರ ಕಡಿಯುವವರಿಗಾಗಲೀ, ಅಕ್ರಮ ಚಟುವಟಿಕೆ ಮಾಡುವವರಿಗಾಗಲೀ ಬೆಂಬಲ ಕೊಡುವವನಲ್ಲ. ಈಶ್ವರ್ ಖಂಡ್ರೆ ಅವರಿಗೆ ಬಹುಶಃ ಮಾಹಿತಿ ಸರಿಯಾಗಿ ಇಲ್ಲ ಎಂದು ತರಾಟೆಗೆ ತೆಗೆದುಕೊಂಡರು.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಚಿವರೇ ಕರೆದ ಸಭೆಯಲ್ಲಿ 40 ಜನ ಅಧಿಕಾರಿಗಳು ಇದ್ದರು. 5 ಜನ ಅಧಿಕಾರಿಗಳನ್ನು ಅಮಾನತು ಮಾಡಿರುವ ವಿಚಾರವಾಗಿ ಹಿರಿಯ ಅಧಿಕಾರಿಗಳು ಏನು ಸಲಹೆ ಕೊಟ್ಟರು. ಎ1, ಎ2 ಆರೋಪಿಗಳೇ ಬೇರೆ, ವಿಕ್ರಮ್ ಸಿಂಹ ಮೇಲೆ ಎಫ್‌ಐಆರ್ ಹಾಕೇ ಇಲ್ಲ. ಎ1, ಎ2 ಅರೋಪಿಗಳಿಗೆ ಅರಣ್ಯಾಧಿಕಾರಿ ಕಚೇರಿಯಲ್ಲಿ ಜಾಮೀನು ಕೊಟ್ಟು ಕಳಿಸಿದ್ದಾರೆ. ವಿಕ್ರಮ್ ಸಿಂಹರನ್ನ ಯಾಕೆ ಅರೆಸ್ಟ್ ಮಾಡಿದ್ದೀರಿ, ಮ್ಯಾಜಿಸ್ಟ್ರೇಟ್ ಮುಂದೆ ಏಕೆ ನಿಲ್ಲಿಸಿದ್ದೀರಿ, ನಿಮಗೆ ಕೋರ್ಟ್ ಏನು ಹೇಳಿತು ಎಂದ ಅವರು; ಇದಕ್ಕಿಂತಲೂ ಅತ್ಯಂತ ಗಂಭೀರ ಪ್ರಕರಣ ನಿಮಗೆ ಕೊಡಲು ನಾನು ಸಿದ್ಧ. ಈಶ್ವರ್ ಖಂಡ್ರೆ ಅವರೇ ಕ್ರಮ ತೊಗೋತೀರಾ ಎಂದು ಸವಾಲು ಹಾಕಿದರು.

ವಿರಾಜಪೇಟೆಯಲ್ಲಿ ರೋಸ್‌ವುಡ್, ಟೀಕ್‌ವುಡ್ ಕದ್ದು ಎರಡು ವರ್ಷಗಳಿಂದ ಸಾಗಾಣಿಕೆ ಮಾಡಲಾಗುತ್ತಿದೆ. ಕಳೆದ ಆಗಸ್ಟ್‌ನಲ್ಲಿ ಹಿರಿಯ ಅಧಿಕಾರಿಗಳು ಈ ಪ್ರಕರಣದ ಬಗ್ಗೆ ಮಾಹಿತಿ ಕೊಟ್ಟಿದ್ದರು.

ಪ್ರಕರಣದಲ್ಲಿ ಇದ್ದ ಎಲ್ಲಾ ದಾಖಲೆಗಳು ಕಾಣೆಯಾಗಿವೆ. ಇದರ ಬಗ್ಗೆ ಸರಕಾರ ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳಬೇಕು ಎಂದಿದ್ದರು. ಪ್ರಕರಣದ ಬಗ್ಗೆ ಈಶ್ವರ್ ಖಂಡ್ರೆ ಏಕೆ ಕ್ರಮ ತೆಗೆದುಕೊಂಡಿಲ್ಲ.

ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಮರಗಳವು. ಯಾವುದೇ ಕ್ರಮ ಆಗಿಲ್ಲ, ಏಕೆ ಖಂಡ್ರೆಯವರೇ ಎಂದರು.

ವಿಕ್ರಮ್ ಸಿಂಹ ಪ್ರಕರಣದಲ್ಲಿ 12 ದಿನಗಳಲ್ಲಿ ಶರವೇಗದಲ್ಲಿ ಕ್ರಮ ಆಗಿದೆ. ವಿರಾಜಪೇಟೆ ಪ್ರಕರಣದ ಬಗ್ಗೆ ಮೌನ ಏಕೆ? ಆಗಸ್ಟ್‌ನಲ್ಲಿ ನಿಮ್ಮ ಮುಂದೆ ಮಾಹಿತಿ ಬಂದಿದೆ, ಎಷ್ಟು ಮರ ಕದಿಯುತ್ತಿದ್ದಾರೆ ಅಂತ ನಿಮಗೆ ಮಾಹಿತಿ ಇದೆ, ಏಕೆ ಇದೂವರೆಗೂ ಕ್ರಮ ಆಗಿಲ್ಲ.

ಪ್ರಧಾನಿ ಭೇಟಿ ಬಳಿಕ ಮೇಕ್ ಮೈ ಟ್ರಿಪ್‌ನಲ್ಲಿ ಲಕ್ಷದ್ವೀಪದ ಮಾಹಿತಿ ಹುಡುಕಾಟ ಶೇ.3,400 ರಷ್ಟು ಏರಿಕೆ!



ಇತ್ತೀಚೆಗೆ ಪ್ರಧಾನಿ ಮೋದಿ ಲಕ್ಷದ್ವೀಪಕ್ಕೆ ಭೇಟಿ ನೀಡಿದ್ದ ಚಿತ್ರ.

ನವದೆಹಲಿ: ಪ್ರಧಾನಿ ಮೋದಿ ಲಕ್ಷದ್ವೀಪಕ್ಕೆ ಭೇಟಿ ನೀಡಿದ ಫೋಟೊಗಳು ವೈರಲ್ ಆದ ಬೆನ್ನಲ್ಲೇ ಮೇಕ್ ಮೈ ಟ್ರಿಪ್‌ನಲ್ಲಿ ದ್ವೀಪದ ಕುರಿತು ಮಾಹಿತಿಯ ಹುಡುಕಾಟ ಶೇ.3,400 ರಷ್ಟು ಏರಿಕೆ ಕಂಡಿದೆ. ಪ್ರಧಾನಿ ಮೋದಿ ದ್ವೀಪಕ್ಕೆ ಭೇಟಿ ನೀಡಿದ ಬಳಿಕ ಈ ಏರಿಕೆಯನ್ನು ಗಮನಿಸಿದ್ದೇವೆ ಎಂದು ಮೇಕ್ ಮೈ ಟ್ರಿಪ್ ಹೇಳಿದೆ.

ಭಾರತೀಯ ಕಡಲ ತೀರಗಳ ಮೇಲಿನ ಈ ಆಸಕ್ತಿಯು ದೇಶದ ಬೆರಗುಗೊಳಿಸುವ ಕಡಲತೀರಗಳನ್ನು ಅನ್ವೇಷಿಸಲು ಭಾರತೀಯ ಪ್ರಯಾಣಿಕರನ್ನು ಉತ್ತೇಜಿಸಲು ಕೊಡುಗೆಗಳು ಮತ್ತು ರಿಯಾಯಿತಿಗಳೊಂದಿಗೆ 'ಬೀಚ್ ಆಫ್ ಇಂಡಿಯಾ' ಅಭಿಯಾನವನ್ನು ಪ್ರಾರಂಭಿಸಲು ಈ ಬೆಳವಣಿಗೆ ನಮಗೆ ಸ್ಫೂರ್ತಿ ನೀಡಿದೆ. ಈ ಜಾಲತಾಣವನ್ನು ವೀಕ್ಷಿಸುತ್ತಿರಿ!" ಎಂದು ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರ್ಮ್ ಎಕ್ಸ್‌ನಲ್ಲಿನ ಪೋಸ್ಟ್‌ನಲ್ಲಿ MakeMyTrip ಹೇಳಿದೆ.

ಮೋದಿ ಭೇಟಿಯ ನಂತರ ಲಕ್ಷದ್ವೀಪ ಆದ್ಯತೆಯ ಪ್ರವಾಸಿ ತಾಣವಾಗಿ ಹೊರಹೊಮ್ಮಿದ್ದು, ಹಲವಾರು ಜನರು ಭಾರತೀಯ ದ್ವೀಪವನ್ನು ಮಾಲ್ಡೀವ್ಸ್ ಮತ್ತು ಸೀಶೆಲ್ಸ್ ನಂತಹ ಜಾಗತಿಕವಾಗಿ ಬೇಡಿಕೆಯಿರುವ ಬೀಚ್ ತಾಣಗಳೊಂದಿಗೆ ಹೋಲಿಸಲು ಪ್ರಾರಂಭಿಸಿದ್ದಾರೆ.

ಮಾಲ್ಡೀವ್ಸ್ ಮಂತ್ರಿಗಳು ಭಾರತದ ಪ್ರಧಾನಿ ವಿರುದ್ಧ ಸಾಮಾಜಿಕ ಮಾಧ್ಯಮದಲ್ಲಿ ಮಾಡಿದ ಕಾಮೆಂಟ್‌ಗಳ ಬೆನ್ನಲ್ಲೇ ಲಕ್ಷದ್ವೀಪಕ್ಕೆ ಭೇಟಿ ನೀಡಲು ಹೆಚ್ಚಿನ ಭಾರತೀಯರು ಆಸಕ್ತಿ ತೋರುತ್ತಿದ್ದಾರೆ. ಮೋದಿ ಭೇಟಿಯ ಫೋಟೊಗಳು ಹಾಗೂ ಅದಕ್ಕೆ ಮಾಲ್ಡೀವ್ಸ್‌ನ ಮಂತ್ರಿಗಳು ನೀಡಿದ ಪ್ರತಿಕ್ರಿಯೆ ಉಭಯ ರಾಷ್ಟ್ರಗಳ ನಡುವೆ ರಾಜತಾಂತ್ರಿಕ ಸಮಸ್ಯೆಯನ್ನು ಉಂಟುಮಾಡಿದೆ.

ಕೊಡಗಿನಲ್ಲಿ ವಾಹನ ದಟ್ಟಣೆ ಸಮಸ್ಯೆಗೆ ಪರಿಹಾರ

ಸಂವಾದದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಭರವಸೆ



ಮಡಿಕೇರಿ, ಜ.8–ರಾಜ್ಯದ ಇತರೆ ಜಿಲ್ಲೆಗಳಿಗಿಂತ ಭಿನ್ನವಾಗಿರುವ ಘಟ್ಟ ಪ್ರದೇಶ ಕೊಡಗಿನಲ್ಲಿ ವಾಹನ ದಟ್ಟಣೆ ಹಾಗೂ ನಿಲುಗಡೆಯ ಸಮಸ್ಯೆಗಳನ್ನು ಸ್ಥಳೀಯ ಸಂಸ್ಥೆಗಳು ಮತ್ತು ಸಾರ್ವಜನಿಕರ ಸಹಕಾರದೊಂದಿಗೆ ಪರಿಹರಿಸಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಭರವಸೆ ನೀಡಿದರು.

ನಗರದ ಪತ್ರಿಕಾ ಭವನದ ಸಭಾಂಗಣದಲ್ಲಿ ಕೊಡಗು ಪತ್ರಕರ್ತರ ಸಂಘದ ವತಿಯಿಂದ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿದ ಅವರು, ಪ್ರಸ್ತುತ ಜಿಲ್ಲೆಯ ಜನಸಂಖ್ಯೆ ಮತ್ತು ವಾಹನಗಳ ಸಂಚಾರಕ್ಕೆ ರಸ್ತೆ ವ್ಯವಸ್ಥೆ ಹೊಂದಿಕೊಳ್ಳುತ್ತದೆ. ಆದರೂ ಪ್ರವಾಸಿ ಋತುಗಳು ಮತ್ತು ಉತ್ಸವಗಳ ವೇಳೆ ಹೆಚ್ಚಿನ ಪ್ರವಾಸಿಗರು ಆಗಮಿಸುವುದರಿಂದ ವಾಹನ ದಟ್ಟಣೆ ಸಮಸ್ಯೆ ಹೆಚ್ಚಾಗಿ ಕಾಡುತ್ತದೆ. ವಾಹನ ದಟ್ಟಣೆ ಹಾಗೂ ನಿಲುಗಡೆ ಸಮಸ್ಯೆಗಳನ್ನು ಜಿಲ್ಲೆಯ ಪಟ್ಟಣ ಪ್ರದೇಶಗಳಲ್ಲಿ ಬಗೆಹರಿಸಲು ಸ್ಥಳೀಯ ಸಂಸ್ಥೆಗಳು ಮತ್ತು ಸಾರ್ವಜನಿಕರ ಸಲಹೆ ಸೂಚನೆಗಳನ್ನು ಪಡೆಯಲು ಪೊಲೀಸ್ ಇಲಾಖೆ ಸದಾ ಮುಕ್ತವಾಗಿದೆ. ಪ್ರವಾಸಿ ತಾಣ ರಾಜಾಸೀಟ್‌ನಲ್ಲಿ ವಾಹನ ನಿಲುಗಡೆಗೆ ಅಗತ್ಯ ವ್ಯವಸ್ಥೆಗಳಿಲ್ಲ. ಇದನ್ನು ಪರಿಹರಿಸುವ ಪರ್ಯಾಯ ಮಾರ್ಗಗಳತ್ತ ಎಲ್ಲರ ಸಹಕಾರದೊಂದಿಗೆ ಪ್ರಯತ್ನಿಸಲಾಗುವುದು ಎಂದರು.

ಕಳೆದ 1 ವರ್ಷದ ಅವಧಿಯಲ್ಲಿ ಎದುರಿಸಿದ ಸವಾಲುಗಳಲ್ಲಿ ವಾಹನ ನಿಯಂತ್ರಣ ಸಮಸ್ಯೆಯೊಂದಿಗೆ ಮಾದಕ ವಸ್ತುಗಳ ಮಾರಾಟ ದಂಧೆ ನಿಯಂತ್ರಣವೂ ಒಂದಾಗಿದೆ. ಪೊಲೀಸ್ ಇಲಾಖೆ ಮಾದಕ ವಸ್ತುಗಳ ಮಾರಾಟ ತಡೆಗೆ ಅಗತ್ಯ ಕ್ರಮ ಕೈಗೊಂಡು ಪ್ರಕರಣಗಳನ್ನು ದಾಖಲಿಸುತ್ತಿದೆ. ಆದರೆ, ಕಾನೂನಿನ ಅನ್ವಯ ಪ್ರಕರಣದ ಆರೋಪಿಗಳು ತಕ್ಷಣ ಹೊರಬರುವ ಪ್ರಸಂಗಗಳು ನಡೆಯುತ್ತವೆ. ಆದರೂ, ಪೊಲೀಸ್ ಇಲಾಖೆ ಈ ನಿಟ್ಟಿನಲ್ಲಿ ಕಾರ್ಯ ತತ್ಪರವಾಗಿದೆ ಎಂದು ತಿಳಿಸಿದರು.

ಮದ್ಯ ಸೇವನೆಯಿಂದ ಕುತ್ತು: ಜಿಲ್ಲಾ ವ್ಯಾಪ್ತಿಯಲ್ಲಿ ಇತರೆ ಜಿಲ್ಲೆಗಳಲ್ಲಿ ಕಂಡು ಬರುವ ರಾಜಕೀಯ ಕಾರಣಗಳಿಂದ ಮತ್ತು ಉದ್ದೇಶ ಪೂರ್ವಕವಾಗಿ ಷಡ್ಯಂತ್ರ ನಡೆಸಿ ನಡೆಸುವ ಹತ್ಯಾ ಪ್ರಕರಣಗಳು ನಡೆಯುತ್ತಿಲ್ಲ. ಇದಕ್ಕೆ ಬದಲಾಗಿ ಕುಟುಂಬಸ್ಥರ ನಡುವಿನ ಕಲಹಗಳಿಂದ ಅದರಲ್ಲೂ ಮದ್ಯ ಸೇವನೆಯಿಂದ ನಡೆಯುವ ಹತ್ಯಾ ಪ್ರಕರಣಗಳೆ ಅಧಿಕವಾಗಿದೆ. ಈ ಹಿನ್ನೆಲೆ ಅನಧಿಕೃತ ಮದ್ಯ ಮಾರಾಟ ಪ್ರಕರಣಗಳ ಮೇಲೆ ಕ್ರಮ ಜರುಗಿಸಲು ಅಬಕಾರಿ ಇಲಾಖೆ ಇನ್ನೂ ಹೆಚ್ಚಿನ ಕ್ರಮ ಕೈಗೊಳ್ಳುವಂತೆ ಒತ್ತಡ ಹಾಕುವುದಾಗಿ ರಾಮರಾಜನ್ ತಿಳಿಸಿದರು.

ಬೆಳೆಗಾರರೇ ನಿಗಾ ವಹಿಸಬೇಕು: ಕೊಡಗಿನಲ್ಲಿ ಕಾಫಿ ಕೊಯ್ಲಿನ ಹಂತದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಹೊರ ಜಿಲ್ಲೆ, ರಾಜ್ಯಗಳಿಂದ ಕಾರ್ಮಿಕರು ಆಗಮಿಸುತ್ತಾರೆ. ಆದರೆ, ಇವರೆಲ್ಲರನ್ನು ಪರಿಶೀಲಿಸಲು ಪೊಲೀಸರಿಗೆ ಅಸಾಧ್ಯ. ಈ ಹಿನ್ನೆಲೆ ತಮ್ಮ ತೋಟಗಳಲ್ಲಿ ಕೆಲಸ ನಿರ್ವಹಿಸಲು ಬರುವ ಕಾರ್ಮಿಕರ ಆಧಾರ್, ಪಾನ್ ಕಾರ್ಡ್, ಅವರ ಸಂಬಂಧಿಗಳ ಮಾಹಿತಿ, ಭಾವ ಚಿತ್ರವನ್ನು ಪಡೆದುಕೊಳ್ಳುವ ಜವಾಬ್ದಾರಿ ಬೆಳೆಗಾರರದ್ದಾಗಿರುತ್ತದೆ ಎಂದು ಎಸ್ಪಿ ಕೆ.ರಾಮರಾಜನ್ ತಿಳಿಸಿದರು.

ಯಾವುದೇ ಕಾರ್ಮಿಕರ ಬಗ್ಗೆ ಸಂಶಯಗಳು ಬಂದಲ್ಲಿ ತಕ್ಷಣ ಪೊಲೀಸರಿಗೆ ಮಾಹಿತಿ ನೀಡಬೇಕು. ಜಿಲ್ಲೆಯಲ್ಲಿ ನಕಲಿ ದಾಖಲೆಗಳೊಂದಿಗೆ ಬಾಂಗ್ಲಾ ವಲಸಿಗ ಕಾರ್ಮಿಕರು ಆಗಮಿಸುತ್ತಾರೆ ಎನ್ನುವ ಆರೋಪಗಳ ಬಗ್ಗೆ ಗಮನ ಸೆಳೆದಾಗ, ಇಂತಹ ಯಾವುದೇ ಪ್ರಕರಣಗಳ ಬಗ್ಗೆ ಸಂಶಯಗಳಿದ್ದಲ್ಲಿ ಪೊಲೀಸರಿಗೆ ಮಾಹಿತಿ ನೀಡುವುದರೊಂದಿಗೆ ಬೆಳೆಗಾರರು ಜಾಗೃತರಾಗಬೇಕೆಂದು ಸಲಹೆ ನೀಡಿದರು.

ಸನ್ಮಾನ: ಇದೇ ಸಂದರ್ಭ ಕೊಡಗು ಪತ್ರಕರ್ತರ ಸಂಘದಿಂದ ಎಸ್ಪಿ ಕೆ.ರಾಮರಾಜನ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಎ.ಮುರಳೀಧರ್ ವಹಿಸಿದ್ದರು. ಜಿಲ್ಲೆಯ ಪತ್ರಕರ್ತರು ಹಾಜರಿದ್ದರು.

ಅನಧಿಕೃತ ಹೋಂ ಸ್ಟೇ ವಿರುದ್ಧ 112 ಕರೆ ಮಾಡಿ

ಹೋಂ ಸ್ಟೇ ಎನ್ನುವ ಕಲ್ಪನೆ ಇತ್ತೀಚಿನ ಎರಡು ದಶಕಗಳಿಂದ ಬಂದಿದೆ. ಅನಧಿಕೃತ ಹೋಂ ಸ್ಟೇ ಎಂದು ಪೊಲೀಸರು ಅವುಗಳ ಪರಿಶೀಲನೆಗೆ ಮುಂದಾದಲ್ಲಿ ಆ ಉದ್ಯಮಕ್ಕೆ ಹೊಡೆತ ಬೀಳುತ್ತದೆ. ಈ ಹಿನ್ನೆಲೆ ಅನಧಿಕೃತ ಹೋಂ ಸ್ಟೇಗಳಿಂದ ಸಾರ್ವಜನಿಕರಿಗೆ ತೊಂದರೆಯಾದಾಗ ದೂರವಾಣಿ '112'ಕ್ಕೆ ಕರೆ ಮಾಡಿದ್ದಲ್ಲಿ ಪೊಲೀಸರು ಅಲ್ಲಿಗೆ ಆಗಮಿಸಿ ಕ್ರಮ ಕೈಗೊಳ್ಳುತ್ತಾರೆ ಎಂದು ಎಸ್ಪಿ ಕೆ.ರಾಮರಾಜನ್ ತಿಳಿಸಿದರು.

ಜಿಲ್ಲಾ ವ್ಯಾಪ್ತಿಯ ಅಕ್ರಮ ಹೋಂ ಸ್ಟೇಗಳು ಮತ್ತು ಅವುಗಳಲ್ಲಿ ವಾಸ್ತವ್ಯಕ್ಕೆ ಬರುವ ಪ್ರವಾಸಿಗರಿಂದ ಸಾರ್ವಜನಿಕರಿಗೆ ಉಂಟಾಗುವ ಸಂಕಷ್ಟಗಳ ಬಗ್ಗೆ ಸಂವಾದದಲ್ಲಿ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಕೊಡಗು ಜಿಲ್ಲೆಯ ಜನರ ಶಿಕ್ಷಣ ಮಟ್ಟ ಹೆಚ್ಚಾಗಿದೆ. ಯಾವುದೇ ಪ್ರಕರಣಗಳು ಪೊಲೀಸ್ ಮೆಟ್ಟಿಲೇರಿದಾಗ ಅದರ ಬಗೆಹರಿಕೆಗೆ ಮಾರ್ಗೋಪಾಯಗಳನ್ನು ಸೂಚಿಸಿದಾಗ ಅದನ್ನು ಅರಿತುಕೊಳ್ಳುತ್ತಾರೆ. ಇದರಿಂದ ಜಿಲ್ಲೆಯಲ್ಲಿ 'ಲಾಠಿ' ಪ್ರಯೋಗದ ಅಗತ್ಯತೆ ಇಲ್ಲ. ಆದರೆ, ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಅಂತಹ ಪರಿಸ್ಥಿತಿಗಳಿಲ್ಲ. ಅಲ್ಲಿ ಲಾಠಿ ಇದ್ದಾಗಲೆ ಒಂದಷ್ಟು ಸಮಸ್ಯೆಗಳು ಬಗೆಹರಿಯುತ್ತದೆ ಎಂದು ಹಾಸ್ಯದ ದಾಟಿಯಲ್ಲಿ ನುಡಿದರು.

ಜಾರ್ಖಂಡ್ ತಂಡ ಹಾಕಿ ಚಾಂಪಿಯನ್

ಬಾಲಕಿಯರ ರಾಷ್ಟ್ರಮಟ್ಟದ ಹಾಕಿಯಲ್ಲಿ ಚಂಡೀಗಡ ತಂಡಕ್ಕೆ ದ್ವಿತೀಯ ಸ್ಥಾನ



ಪೊನ್ನಂಪೇಟೆಯಲ್ಲಿ ನಡೆದ ಬಾಲಕಿಯರ ಹಾಕಿ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದ ಜಾರ್ಖಂಡ್ ತಂಡದ ಆಟಗಾರರು.

ಮಡಿಕೇರಿ, ಜ.8–ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ರಾಜ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಸ್ಕೂಲ್ ಗೇಮ್ಸ್ ಫೆಡರೇಷನ್ ಆಫ್ ಇಂಡಿಯಾ ವತಿಯಿಂದ ಪೊನ್ನಂಪೇಟೆಯ ಸಿಂಥೆಟಿಕ್ ಹಾಕಿ ಟರ್ಫ್ ಮೈದಾನದಲ್ಲಿ ನಡೆದ 17 ವರ್ಷದೊಳಗಿನ ಬಾಲಕಿಯರ 67ನೇ ರಾಷ್ಟ್ರಮಟ್ಟದ ಹಾಕಿ ಪಂದ್ಯಾವಳಿಯಲ್ಲಿ ಜಾರ್ಖಂಡ್ ತಂಡ ಚಾಂಪಿಯನ್ ಪಟ್ಟ ಅಲಂಕರಿಸಿತು.

ಜಾರ್ಖಂಡ್ ಮತ್ತು ಚಂಡೀಗಡ ತಂಡಗಳ ನಡುವೆ ನಡೆದ ಫೈನಲ್ ಪಂದ್ಯದಲ್ಲಿಯಲ್ಲಿ ಜಾರ್ಖಂಡ್ 7–1 ಗೋಲುಗಳಿಂದ ಚಂಡೀಗಡವನ್ನು ಮಣಿಸುವ ಮೂಲಕ ಚಾಂಪಿಯನ್ ಆಗಿ ಹೊರಹೊಮ್ಮಿತು. ಚಂಡೀಗಡ ತಂಡ ದ್ವಿತೀಯ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.

3ನೇ ಸ್ಥಾನಕ್ಕಾಗಿ ಮಣಿಪುರ ಮತ್ತು ಮಧ್ಯಪ್ರದೇಶ ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಮಧ್ಯಪ್ರದೇಶ 1–0 ಗೋಲಿನಿಂದ ಮಣಿಪುರವನ್ನು ಮಣಿಸಿ 3ನೇ ಸ್ಥಾನವನ್ನು ತನ್ನದಾಗಿಸಿಕೊಂಡಿತು.

ಸರಣಿ ಶ್ರೇಷ್ಠ: ಸರಣಿ ಶ್ರೇಷ್ಠ ಪ್ರಶಸ್ತಿಯನ್ನು ಜಾರ್ಖಂಡ್ ತಂಡದ ಜಮುನಾ ಕುಮಾರಿ, ಉತ್ತಮ ಗೋಲ್ ಕೀಪರ್ ಪ್ರಶಸ್ತಿಯನ್ನು ಮಣಿಪುರ ತಂಡದ ವಕಂಬಮ್ ರಜ್ರಿಯ, ಬೆಸ್ಟ್‌ಬ್ಯಾಕ್ ಪ್ರಶಸ್ತಿಯನ್ನು ಜಾರ್ಖಂಡ್ ತಂಡದ ಅನುಪ್ರಿಯಾ ಸೊರೆಂಗ್, ಬೆಸ್ಟ್ ಆಫ್ ಪ್ರಶಸ್ತಿಯನ್ನು ಮಧ್ಯಪ್ರದೇಶ ತಂಡದ ಸಮಿಕ್ಷಾ ಯಾದವ್, ಬೆಸ್ಟ್ ಫಾರ್ವರ್ಡ್ ಪ್ರಶಸ್ತಿಯನ್ನು ಚಂಡಿಗಡ ತಂಡದ ತಮನ್ನಾ ಪಡೆದುಕೊಂಡರು.

ತಾಂತ್ರಿಕ ನಿರ್ದೇಶಕರಾಗಿ ದ್ಯಾನಿ ಈರಪ್ಪ, ತೀರ್ಪುಗಾರರಾಗಿ ನಾಣಯ್ಯ, ಚೆಕ್ಕೇರ ಆದರ್ಶ್, ತಾಂತ್ರಿಕ ನಿರ್ವಹಣೆಯನ್ನು ಅರುಣ್, ಮಾಚಂಗಡ ದರ್ಶನ್, ಮೂಕಳೇರ ವೀರಾ, ಸುರೇಶ್ ಕುಮಾರ್ ನಿಭಾಯಿಸಿದರು.

ಸನ್ಮಾನ: ಹಾಕಿ ಸಮಾರೋಪದಲ್ಲಿ ಪದ್ಮಶ್ರೀ ಪುರಸ್ಕೃತ ಮೊಳ್ಳೇರ ಪಿ.ಗಣೇಶ್, ಒಲಿಂಪಿಯನ್ ಬಿ.ಕೆ.ಸುಬ್ರಮಣಿ, ಏಕಲವ್ಯ ಪ್ರಶಸ್ತಿ ಪುರಸ್ಕೃತೆ ಮುಕ್ಕಾಟೀರ ನಿಲನ್, ಹಿರಿಯ ಹಾಕಿ ಆಟಗಾರ್ತಿ ಚಿಕ್ಕಂಡ ಭಾಗ್ಯಶ್ರೀ ಅವರನ್ನು ಸನ್ಮಾನಿಸಲಾಯಿತು. ಇದೇ ವೇಳೆ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಶಾಸಕ ಎ.ಎಸ್.ಪೊನ್ನಣ್ಣ, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪ ನಿರ್ದೇಶಕ ಎಂ.ಚಂದ್ರಕಾಂತ್, ತಹಸೀಲ್ದಾರ್ ಎಚ್.ಎನ್.ರಾಮಚಂದ್ರ, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಪ್ರಕಾಶ್, ಡಾ.ಬಿ.ಸಿ. ದೊಡ್ಡೇಗೌಡ, ಎಸ್.ಭಾಗ್ಯಮ್ಮ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಮಹದೇವಸ್ವಾಮಿ, ಕ್ರೀಡಾ ಸಂಚಾಲಕರಾದ ಡಾ.ಸದಾಶಿವಯ್ಯ ಎಸ್.ಪಲ್ಲೇದ್, ಶಿಕ್ಷಕರ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಇತರರು ಇದ್ದರು.

ಯಾವುದೇ ಸಂದರ್ಭದಲ್ಲೂ ನಾಡು–ನುಡಿ, ಬಿಟ್ಟು ಕೊಡಲ್ಲ



ಪೊನ್ನಂಪೇಟೆಯ ಸಿಂಥೆಟಿಕ್ ಹಾಕಿ ಟರ್ಫ್ ಮೈದಾನದಲ್ಲಿ ನಡೆದ ಬಾಲಕಿಯರ ಹಾಕಿ ಪಂದ್ಯಾವಳಿಯ ಆಟಗಾರರಿಗೆ ಶಿಕ್ಷಣ ಸಚಿವ ಮಧುಬಂಗಾರಪ್ಪ ಶುಭಕೋರಿದರು.

ಗೋಣಿಕೊಪ್ಪ, ಜ.8–ಕನ್ನಡ ನಾಡು–ನುಡಿ, ನೆಲ–ಜಲ ಎಲ್ಲವೂ ನಮ್ಮದು ಎಂದು ಶಿಕ್ಷಣ ಸಚಿವ ಮಧುಬಂಗಾರಪ್ಪ ಹೇಳಿದರು.

ಪೊನ್ನಂಪೇಟೆಯಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಬಾಲಕಿಯರ ಹಾಕಿ ಪಂದ್ಯಾವಳಿಯ ಸಮಾರೋಪದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸ್ವತಂತ್ರ ಪೂರ್ವದಲ್ಲಿ ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಿತ್ತು ಎಂಬ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿಕೆ ವಿಚಾರದಲ್ಲಿ ಅವರು ಏನು ಹೇಳಿದ್ದಾರೋ ಗೊತ್ತಿಲ್ಲ. ಆದರೆ, ಯಾವುದೇ ಸಂದರ್ಭದಲ್ಲೂ ಕನ್ನಡ ನಾಡು–ನುಡಿ, ನೆಲ–ಜಲ ವನ್ನು ಬಿಟ್ಟುಕೊಡಲ್ಲ. ಹಿಂದೆ ಏನಾಗಿತ್ತೋ ಗೊತ್ತಿಲ್ಲ. ಈಗ ಅದು ನಮ್ಮದು. ಹಿಂದೆ ಬಂಗಾರಪ್ಪಾಜಿ, ಈಗ ಸಿದ್ದರಾಮಯ್ಯ ಸರ್ಕಾರ ಅವುಗಳನ್ನು ಬಿಡಲ್ಲ. ಇದು ತುಂಬಾ ಸೆನ್ಸಿಟೀವ್ ವಿಚಾರವಾಗಿದೆ. ಹಾದಿ ಬೀದಿಯಲ್ಲೆಲ್ಲಾ ಮಾತನಾಡಬಾರದು ಎಂದು ತಿಳಿಸಿದರು.

ಕಾಂಗ್ರೆಸ್ ನಾಯಕರೇ ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ ಕೆಳಗಿಸುತ್ತಾರೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿಕೆ ಕುರಿತು ಮಾತನಾಡಿದ ಅವರು, ವಿರೋಧ ಪಕ್ಷದವರು ಇನ್ನೇನು ಹೇಳಲು ಸಾಧ್ಯವಿದೆ. ಅವರು ನಮ್ಮನ್ನು ಪ್ರೀತಿ ವಿಶ್ವಾಸದಿಂದ ಕಾಣುವುದಿಲ್ಲ. ಬಿಜೆಪಿ ಕಾರ್ಯಕರ್ತರ ಮನೆಯ ಹೆಣ್ಣು ಮಕ್ಕಳು ಸಹ ಪ್ರತಿ ತಿಂಗಳು 2 ಸಾವಿರ ರೂ. ಹಾಗೂ ಉಚಿತ ಅಕ್ಕಿ ತೆಗೆದುಕೊಳ್ಳುತ್ತಿದ್ದಾರೆ. ಇದನ್ನು ನೋಡಿ ಬಿಜೆಪಿಯವರು ಬದಲಾಗಬೇಕಾಗಿದೆ. ನಮ್ಮ ಪಕ್ಷದ ವಿಚಾರ ಬಿಜೆಪಿಯವರಿಗೆ ಏಕೆ? ಪಾಪ ಯತ್ನಾಳ್ ಅವರ ಪಕ್ಷದವರಿಗೆ ಹೇಳುವ ಬದಲು ಮಿಸ್ ಆಗಿ ನಮ್ಮ ಪಕ್ಷದವರಿಗೆ ಹೇಳಿದ್ದಾರೆ. ಕಾಂಗ್ರೆಸ್‌ನಲ್ಲಿ ಅಂತಹ ಸಮಸ್ಯೆ ಇಲ್ಲ. ಅವರ ಮನೆಯದ್ದನ್ನು ಅವರು ನೋಡಿಕೊಳ್ಳಲಿ ಎಂದು ತಿರುಗೇಟು ನೀಡಿದರು.

ಚಿನ್ನದ ಸರ ಕಸಿದಿದ್ದ ಆಟೋ ಚಾಲಕನ ಬಂಧನ



ಮಡಿಕೇರಿ, ಜ.8–ವ್ಯಕ್ತಿ ಮೇಲೆ ಹಲ್ಲೆ ನಡೆಸಿ, ಚಿನ್ನದ ಸರ ಕಸಿದು ಪರಾರಿಯಾಗಿದ್ದ ಆಟೋ ಚಾಲಕನನ್ನು ಮಡಿಕೇರಿ ನಗರ ಪೊಲೀಸರು ಬಂಧಿಸಿದ್ದಾರೆ. ರಾಜರಾಜೇಶ್ವರಿ ನಗರದ ನಿವಾಸಿ ಅಬ್ದುಲ್ ರಜಾಕ್ (35) ಬಂಧಿತ ಆರೋಪಿ.

ಶಿವಕುಮಾರ್ ಎಂಬುವರು ಭಾನುವಾರ ರಾತ್ರಿ 9 ಗಂಟೆಯಲ್ಲಿ ಅಪ್ಪಚ್ಚ ಕವಿ ರಸ್ತೆಯಿಂದ ಅಬ್ದುಲ್ ರಜಾಕ್‌ನ ಆಟೋದಲ್ಲಿ ತೆರಳಿದ್ದರು. ಈ ವೇಳೆ ಹಳೇ ಖಾಸಗಿ ಬಸ್ ನಿಲ್ದಾಣದ ಬಳಿ ಅಬ್ದುಲ್ ರಜಾಕ್ ಶಿವಕುಮಾರ್ ಅವರನ್ನು ಆಟೋದಿಂದ ಕೆಳಗೆ ಎಳೆದು ಹಲ್ಲೆ ನಡೆಸಿ ಕುತ್ತಿಗೆಯಲ್ಲಿದ್ದ 15 ಗ್ರಾಂ ಚಿನ್ನದ ಸರವನ್ನು ಕಿತ್ತು ಪರಾರಿಯಾಗಿದ್ದ. ಈ ಸಂಬಂಧ ಶಿವಕುಮಾರ್ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ನಂತರ ಪೊಲೀಸರು ಅಬ್ದುಲ್ ರಜಾಕ್ ಬಂಧಿಸಿ, 15 ಗ್ರಾಂ ಚಿನ್ನ ಮತ್ತು ಆಟೋವನ್ನು ವಶಕ್ಕೆ ಪಡೆದು ತನಿಖೆ ನಡೆಸುತ್ತಿದ್ದಾರೆ.

ಅಲ್ ಇಹ್ಸಾನ್ ಕಮಿಟಿಯಿಂದ ಉಚಿತ ವಿವಾಹ



ಕುಶಾಲನಗರ, ಜ.8– ಪಟ್ಟಣದ ಅಲ್ ಇಹ್ಸಾನ್ ಕಮಿಟಿ ವತಿಯಿಂದ ಬಡ ಹೆಣ್ಣುಮಕ್ಕಳ ಉಚಿತ ವಿವಾಹ ನಗರದ ಶಾದಿ ಮಹಲ್‌ನಲ್ಲಿ ಭಾನುವಾರ ನಡೆಯಿತು.

ಅಲ್ ಇಹ್ಸಾನ್ ಕಮಿಟಿ ಅಧ್ಯಕ್ಷ ಎಂ.ಇ.ಮುಸ್ತಫಾ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ನಾಲ್ವರು ಬಡ ಹೆಣ್ಣುಮಕ್ಕಳ ವಿವಾಹ ನೆರವೇರಿಸಲಾಯಿತು. ವಧುವಿಗೆ 40 ಗ್ರಾಂ ಚಿನ್ನ, ವಸ್ತ್ರ ಹಾಗೂ ವರನಿಗೆ ವಸ್ತ್ರವನ್ನು ನೀಡಲಾಯಿತು. ಕಾರ್ಯಕ್ರಮದಲ್ಲಿ ಧರ್ಮಗುರು ನಾಸೊರ್ ಫೈಜ್ಹಿ, ದಾರುಲ್ ಉಲೂಂ ಮದ್ರಾಸದ ಪ್ರಾಂಶುಪಾಲ ತಮ್ಲೀಕ್ ದಾರಿಮಿ, ದಾರುಲ್ ಉಲೂಂ ಕಮಿಟಿ ಹಾಗೂ ಅಲ್ ಇಹ್ಸಾನ್ ಕಮಿಟಿ ಪದಾಧಿಕಾರಿಗಳು ಭಾಗವಹಿಸಿದ್ದರು.

ಗ್ರೀನ್‌ಬಡ್ಸ್ ಕಂಪನಿ ಹೂಡಿಕೆ ಹಣ ಕೊಡಿಸುವಂತೆ ಆಗ್ರಹ



ಗ್ರೀನ್‌ಬಡ್ಸ್ ಕಂಪನಿಯಲ್ಲಿ ಸಾರ್ವಜನಿಕರು ಹೂಡಿಕೆ ಮಾಡಿರುವ ಹಣ ವಾಪಸ್ ಕೊಡಿಸಬೇಕು ಎಂದು ಆಗ್ರಹಿಸಿ ಗ್ರೀನ್‌ಬಡ್ಸ್ ಕಾರ್ಯಕರ್ತರು ಚಾ.ನಗರದ ಜಿಲ್ಲಾಧಿಕಾರಿ ಕಚೇರಿಯ ಶಿರಸ್ತೇದಾರ್‌ಗೆ ಮನವಿ ಸಲ್ಲಿಸಿದರು.

ಚಾಮರಾಜನಗರ, ಜ.8–ಗ್ರೀನ್‌ಬಡ್ಸ್ ಕಂಪನಿಯಲ್ಲಿ ಸಾರ್ವಜನಿಕರು ಹೂಡಿಕೆ ಮಾಡಿರುವ ಹಣ ವಾಪಸ್ ಕೊಡಿಸಬೇಕು ಎಂದು ಆಗ್ರಹಿಸಿ ಗ್ರೀನ್‌ಬಡ್ಸ್ ಕಾರ್ಯಕರ್ತರು ಸೋಮವಾರ ನಗರದ ಜಿಲ್ಲಾಧಿಕಾರಿ ಕಚೇರಿಯ ಶಿರಸ್ತೇದಾರ್‌ಗೆ ಮನವಿ ಸಲ್ಲಿಸಿದರು.

ಮೈಸೂರು ಮೂಲದ ಗ್ರೀನ್‌ಬಡ್ಸ್ ಕಂಪನಿಗೆ ಚಾಮರಾಜನಗರ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳ ಸಾರ್ವಜನಿಕರು ಹಣ ಹೂಡಿಕೆ ಮಾಡಿದ್ದಾರೆ. ಆದರೆ, ಕಂಪನಿ ಹಣ ಪಾವತಿ ಮಾಡದೇ ಬಾಗಿಲು ಮುಚ್ಚಿದ ಹಿನ್ನೆಲೆಯಲ್ಲಿ ಹಣ ಕಟ್ಟಿಸಿರುವ ಕಾರ್ಯಕರ್ತರು ಠೇವಣಿದಾರರಿಗೆ ಹಣ ಕೊಡಿಸಲು ಆಗದೇ ಕೆಲವರು ಊರನ್ನೇ ತೊರೆದಿದ್ದಾರೆ. 2013 ರಿಂದ ಇಲ್ಲಿಯವರಗೆ ರೈತ ಸಂಘಟನೆಗಳ ಮುಖಂಡರು ನಮಗೆ ನ್ಯಾಯ ಒದಗಿಸಲು ಹೋರಾಡಿದ್ದಾರೆ. ಅವರ ಹೋರಾಟದ ಫಲವಾಗಿ ಸರ್ಕಾರ ಕಂಪನಿಯ ಆಸ್ತಿ ವಶಪಡಿಸಿಕೊಂಡಿದೆ. ಆಸ್ತಿಯನ್ನು ಇ–ಹರಾಜು ನಡೆಸಲು ಸರ್ಕಾರ ವಿಶೇಷ ಪ್ರಾಧಿಕಾರ ರಚನೆ ಮಾಡಿ, ಪ್ರಾಧಿಕಾರದ ವಿಶೇಷಾಧಿಕಾರಿಗಳು ಆಸ್ತಿ ಹರಾಜು ಪ್ರಕ್ರಿಯೆಗೆ ಪ್ರಕಟಣೆ ಹೊರಡಿಸಿದ್ದಾರೆ. ಆದರೆ, ತಾಲೂಕುಮಟ್ಟದ ಅಧಿಕಾರಿಗಳು ಸಹಕಾರ ನೀಡದ ಪರಿಣಾಮ ಆಸ್ತಿ ಹರಾಜು ಪ್ರಕ್ರಿಯೆ ನೆನೆಗುದಿಗೆ ಬಿದ್ದಿದೆ ಎಂದು ಮನವಿಯಲ್ಲಿ ಆರೋಪಿಸಿದ್ದಾರೆ.

ಕಾರ್ಯಕರ್ತರಾದ ಶ್ರೀಕಂಠಪ್ರಸಾದ್, ಎಸ್.ಮಹದೇವನಾಯ್ಕ, ಎಂ.ಕೃಷ್ಣರಾಜು, ನಾಗವೇಣಿ, ಶಶಿಕಲಾ, ಶಾಂತಮ್ಮ, ಬಂಗಾರಮ್ಮ, ಕೆ.ಕೆ.ಮಂಜುಳಾ, ಸುಮತಿ, ಸಾಕಮ್ಮ, ಪ್ರೇಮ ಇತರರು ಹಾಜರಿದ್ದರು.

ಮಹಾಸಭೆಗೆ ತೆರಳಿದ ವಿಶ್ವಕರ್ಮ ಸಂಘದ ಪದಾಧಿಕಾರಿಗಳು



ಬೆಂಗಳೂರಿನಲ್ಲಿ ನಡೆಯುವ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಸಂಘಟನಾ ಸಭೆಗೆ ಚಾಮರಾಜನಗರದಿಂದ ಸಮಾಜದವರು ಬಸ್‌ನಲ್ಲಿ ಪ್ರಯಾಣ ಬೆಳೆಸಿದರು.

ಚಾಮರಾಜನಗರ ಜ.8– ಬೆಂಗಳೂರಿನಲ್ಲಿ ನಡೆಯುವ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಸಂಘಟನಾ ಸಭೆಗೆ ಚಾಮರಾಜನಗರದಿಂದ ಸಮಾಜದ 60ಕ್ಕೂ ಹೆಚ್ಚು ಮಂದಿ ಬಸ್‌ನಲ್ಲಿ ಪ್ರಯಾಣ ಬೆಳೆಸಿದರು.

ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಮುಂಭಾಗ ಸಮಾವೇಶಗೊಂಡ ತಾಲೂಕಿನ ವಿಶ್ವಕರ್ಮ ಸಂಘದ ಪದಾಧಿಕಾರಿಗಳು, ಬೆಂಗಳೂರಿನ ಶಾಸಕರ ಭವನದಲ್ಲಿ ವಿಶ್ವಕರ್ಮ ರಾಜ್ಯಾಧ್ಯಕ್ಷ ಕೆ.ಪಿ.ನಂಜುಂಡಿ ಅಧ್ಯಕ್ಷತೆಯಲ್ಲಿ ನಡೆಯುವ ಸಂಘಟನಾ ಸಭೆಗೆ ತೆರಳಿದರು. ಈ ಸಂದರ್ಭದಲ್ಲಿ ಮಂಜುನಾಥ್ ವಿಶ್ವಕರ್ಮ, ನಾಗೇಂದ್ರ, ಕೃಷ್ಣ ರಾಮಸಮುದ್ರ, ಕುಮಾರ ನಾಗವಳ್ಳಿ, ರಂಗಸ್ವಾಮಿ, ಲೋಕೇಶ್ ತಮ್ಮಡಹಳ್ಳಿ, ನಾಗರಾಜಚಾರ್, ಕೆಂಪರಾಜು.ಆರ್, ಕೃಷ್ಣಾಚಾರ್, ಮಹದೇವಸ್ವಾಮಿ, ಸಿದ್ದರಾಜು, ಶಾಂತಮ್ಮ, ಲೀಲಾವತಿ, ರೂಪಾದೇವಿ, ಸಿದ್ದಮ್ಮ, ಈರಮ್ಮ ಇತರರು ಇದ್ದರು.

ಚಾ.ನಗರದಲ್ಲಿ ಜ.26ರಿಂದ ಫಲಪುಷ್ಪ ಪ್ರದರ್ಶನ

ಸಿದ್ಧತೆ ಕೈಗೊಳ್ಳುವಂತೆ ಸಭೆಯಲ್ಲಿ ಅಧಿಕಾರಿಗಳಿಗೆ ಜಿಪಂ ಸಿಇಓ ಸೂಚನೆ



ಚಾ.ನಗರದ ಜಿಲ್ಲಾ ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಫಲಪುಷ್ಪ ಪ್ರದರ್ಶನ ಸಂಬಂಧ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ ಮಾತನಾಡಿದರು.

ಚಾಮರಾಜನಗರ, ಜ.8– ಜ.26, 27 ಹಾಗೂ 28 ರಂದು ನಗರದಲ್ಲಿ ಫಲಪುಷ್ಪ ಪ್ರದರ್ಶನ ಆಯೋಜಿಸಲಾಗುತ್ತಿದ್ದು, ಈ ಸಂಬಂಧ ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಆನಂದ್ ಪ್ರಕಾಶ್ ಮೀನಾ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಫಲಪುಷ್ಪ ಪ್ರದರ್ಶನ ಸಂಬಂಧ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ನಡೆದ ಸಮನ್ವಯ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ತೋಟಗಾರಿಕೆ ಇಲಾಖೆ, ಎನ್‌ಆರ್‌ಎಲ್‌ಎಂ ಹಾಗೂ ಕೃಷಿ ಸಂಬಂಧಿತ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲಾಡಳಿತ ಭವನದ ಆವರಣದಲ್ಲಿ ಫಲಪುಷ್ಪ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಮೂರು ದಿನ ನಡೆಯುವ ಕಾರ್ಯಕ್ರಮದಲ್ಲಿ ಯಾವುದೇ ಲೋಪಗಳು ಕಂಡುಬರದಂತೆ ಆಯೋಜನೆಗೆ ಎಲ್ಲಾ ಸಿದ್ಧತೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು. ತೋಟಗಾರಿಕೆ, ರೇಷ್ಮೆ, ಮೀನುಗಾರಿಕೆ ಸೇರಿದಂತೆ ವಿವಿಧ ಇಲಾಖೆಗಳ ಅಭಿವೃದ್ಧಿ ಯೋಜನೆ, ಕಾರ್ಯಕ್ರಮಗಳ ಕುರಿತು ಜಿಲ್ಲೆಯ ರೈತರು ಹಾಗೂ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವುದೇ ಫಲಪುಷ್ಪ ಪ್ರದರ್ಶನದ ಉದ್ದೇಶವಾಗಿದೆ. ಫಲಪುಷ್ಪ ಪ್ರದರ್ಶನಕ್ಕೆ ಖಾಸಗಿ ಸಂಸ್ಥೆಗಳು ಸಹ ಸಹಭಾಗಿತ್ವ ನೀಡಲಿವೆ. ಈ ನಿಟ್ಟಿನಲ್ಲಿ ಫಲಪುಷ್ಪ ಪ್ರದರ್ಶನದಲ್ಲಿ ಸಂಬಂಧಪಟ್ಟ ಎಲ್ಲಾ ಇಲಾಖೆಗಳು ಮಳಿಗೆಗಳನ್ನು ತೆರೆದು ಜನರಿಗೆ ವೈಜ್ಞಾನಿಕ ಮಾಹಿತಿ ಹಾಗೂ ಅರಿವು ಮೂಡಿಸಲು ಮುಂದಾಗಬೇಕು ಎಂದರು. ತೋಟಗಾರಿಕೆ ಇಲಾಖೆಯಿಂದ ಆಧುನಿಕ ತಾಂತ್ರಿಕತೆಯುಳ್ಳ ಹನಿ ನೀರಾವರಿ ಪದ್ಧತಿ, ಕೃಷಿಹೊಂಡ, ನೀರು ಸಂರಕ್ಷಣೆ, ಕೊಯ್ಲು, ಗ್ರೀನ್‌ಹೌಸ್, ವಿವಿಧ ಹಣ್ಣಿನ ಮಾದರಿಗಳು, ಹೂವಿನ ಕಲಾಕೃತಿಗಳು, ತರಕಾರಿ ಕೆತ್ತನೆ, ಜೇನುಕೃಷಿ, ತಾರಸಿ ಕೈತೋಟ, ಕೃಷಿ ಇಲಾಖೆಯಿಂದ ಜಲಾನಯನ ಮಾದರಿ ಪ್ರಾತ್ಯಕ್ಷಿಕೆ ಹಾಗೂ ಸಿರಿಧಾನ್ಯ ಪ್ರದರ್ಶನ, ಮೀನುಗಾರಿಕೆ ಇಲಾಖೆಯಿಂದ ಬಯೋಫಿಕ್ ಮಾದರಿಯಲ್ಲಿ ಮೀನು ಸಾಕಾಣಿಕೆ, ರೇಷ್ಮೆ ಹಾಗೂ ಪಶುಪಾಲನಾ ಇಲಾಖೆಗಳಿಂದ ಆಧುನಿಕ ತಂತ್ರಜ್ಞಾನ, ತಳಿಗಳ ಪ್ರದರ್ಶನಗಳು ಇರಲಿವೆ ಎಂದು ತಿಳಿಸಿದರು.

ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಶಿವಪ್ರಸಾದ್, ಕೃಷಿ ಇಲಾಖೆಯ ಜಂಟಿನಿರ್ದೇಶಕ ಅಬೀಬ್ ಹಾಗೂ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಯಶಸ್ಸಿಗೆ ಸಮನ್ವಯ ಸಾಧಿಸಿ:

ಜಿಲ್ಲಾ ಪಂಚಾಯಿತಿಯ ರಾಷ್ಟ್ರೀಯ ಜೀವನೋಪಾಯ ಸಂವರ್ಧನಾ ಯೋಜನೆಯಡಿ ಮಹಿಳಾ ಸ್ವಸಹಾಯ ಗುಂಪುಗಳು ತಯಾರಿಸಿದ ಉತ್ಪನ್ನಗಳ ಮಾರಾಟ ಮತ್ತು ಸ್ವಚ್ಛ ಭಾರತ್ ಮಿಷನ್ ಯೋಜನೆ, ಸ್ವೀಪ್ ಕಾರ್ಯಕ್ರಮ ಹಾಗೂ ಸರ್ಕಾರದ ಗೃಹಲಕ್ಷ್ಮೀ, ಯುವನಿಧಿ ಸೇರಿದಂತೆ ಗ್ಯಾರಂಟಿ ಯೋಜನೆಗಳು, ಸಮಾಜ ಕಲ್ಯಾಣ ಇಲಾಖೆಯಿಂದ ಸಂವಿಧಾನ ಪೀಠಿಕೆ ಪ್ರದರ್ಶನ ಸಾರ್ವಜನಿಕರ ಗಮನ ಸೆಳೆಯುವಂತಿರಬೇಕು. ಒಟ್ಟಾರೆ ಫಲಪುಷ್ಪ ಪ್ರದರ್ಶನದ ಯಶಸ್ಸಿಗಾಗಿ ಸಂಬಂಧಿತ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಅವಶ್ಯವಿರುವ ಪೂರ್ವ ಸಿದ್ಧತಾ ಕಾರ್ಯಗಳನ್ನು ಪೂರ್ಣಗೊಳಿಸುವಂತೆ ಜಿಪಂ ಸಿಇಓ ಸೂಚಿಸಿದರು.

ಹೊರೆಯಾಲದಲ್ಲಿ ಕುಂದುಕೊರತೆ ಸಭೆ



ಬೇಗೂರು ಸಮೀಪದ ಹೊರೆಯಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕುಂದುಕೊರತೆ ಸಭೆಯನ್ನು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಉದ್ಘಾಟಿಸಿದರು.


ಬೇಗೂರು(ಗುಂಡ್ಲುಪೇಟೆ), ಜ.8– ಸಮೀಪದ ಹೊರೆಯಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಕುಂದುಕೊರತೆ ಸಭೆ ಸೋಮವಾರ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ನೇತೃತ್ವದಲ್ಲಿ ನಡೆಯಿತು.

ಸಭೆಯಲ್ಲಿ ಮಾತನಾಡಿದ ಶಾಸಕರು, ಸರ್ಕಾರದ ಸವಲತ್ತುಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವ ವ್ಯವಸ್ಥೆ ಮಾಡಲಾಗಿದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ಹಣ ಬಿಡುಗಡೆಯಾಗದೆ ತಾಲೂಕಿನಲ್ಲಿ ವಸತಿ ಸಮಸ್ಯೆ ಸಾಕಷ್ಟಿದೆ. ಅದನ್ನು ಬಗೆಹರಿಸಲಾಗುವುದು. ತೊಡಕುಗಳಿದ್ದರೆ ಕಾನೂನು ವ್ಯಾಪ್ತಿಯಲ್ಲಿ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲಾಗುವುದು ಎಂದರು.

ಜಿಲ್ಲಾ ಮತ್ತು ತಾಲೂಕು ಕೇಂದ್ರಕ್ಕೆ ಜನರು ಅಲೆಯುವುದನ್ನು ತಪ್ಪಿಸಲು ಗ್ರಾಪಂ ವ್ಯಾಪ್ತಿ ಕುಂದುಕೊರತೆ ಸಭೆ ಹಮ್ಮಿಕೊಳ್ಳಲಾಗಿದೆ. ಮಂಗಳವಾರ ಸೋಮಹಳ್ಳಿ ಮತ್ತು ಕಬ್ಬಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಸಾರ್ವಜನಿಕರ ಕುಂದುಕೊರತೆ ಸಭೆ ನಡೆಯಲಿದೆ. ಈ ವೇಳೆ ಅರ್ಜಿಗಳನ್ನು ಪಡೆದು ಸ್ಥಳದಲ್ಲೇ ಸಮಸ್ಯೆ ಬಗೆಹರಿಸಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಚಾಮುಲ್ ಮಾಜಿ ಅಧ್ಯಕ್ಷ ನಂಜುಂಡ ಪ್ರಸಾದ್, ತಹಸೀಲ್ದಾರ್ ರಮೇಶ್ ಬಾಬು, ತಾಪಂ ಇಓ ರಾಮಲಿಂಗಯ್ಯ, ಜಿಪಂ ಮಾಜಿ ಅಧ್ಯಕ್ಷ ಬಿ.ಎ.ಮುನಿರಾಜು, ಮಾಜಿ ಸದಸ್ಯ ಶಿವಸ್ವಾಮಿ, ಡಾ.ದೀಪಕ್, ಎಪಿಎಂಸಿ ಸದಸ್ಯ ರಂಗಪುರ ನಾಗರಾಜು, ಹೊರೆಯಾಲ ಗೋಪಾಲ್, ನೀಲಕಂಠಪ್ಪ, ಗ್ರಾಪಂ ಅಧ್ಯಕ್ಷೆ ಲೀಲಾವತಿ, ಉಪಾಧ್ಯಕ್ಷೆ ಚೆನ್ನಮ್ಮ, ಕಾಂಗ್ರೆಸ್ ಮುಖಂಡ ಕುರುಬರಹುಂಡಿ ಶಿವಲಿಂಗಪ್ಪ, ಹಿರೀಕಾಟಿ ಪುರುಷೋತ್ತಮ್‌ಗೌಡ, ತಾಲೂಕಿನ ವಿವಿಧ ಇಲಾಖೆಯ ಅಧಿಕಾರಿಗಳು ಗ್ರಾಮ ಪಂಚಾಯಿತಿ ಸದಸ್ಯರು ಹಾಜರಿದ್ದರು.

ಡಾ.ಎಸ್.ಪಿ.ಬಾಲಸುಬ್ರಹ್ಮಣ್ಯಂ ಗಾನ ಗಂಧರ್ವ ಕಲಾ ವೇದಿಕೆ ವತಿಯಿಂದ ಚಾಮರಾಜನಗರ ತಾಲೂಕಿನ ಉತ್ತವಳ್ಳಿ ಗ್ರಾಮದ ಆಶ್ರಯ ಸೇವಾ ಚಾರಿಟಬಲ್ ಟ್ರಸ್ಟ್‌ನ ವೃದ್ಧ ಮತ್ತು ಅನಾಥಾಶ್ರಮಕ್ಕೆ ಕುಕ್ಕರ್ ವಿತರಿಸಲಾಯಿತು. ವೇದಿಕೆಯ ಜಿಲ್ಲಾ ಅಧ್ಯಕ್ಷ ಎಚ್.ಎಂ.ಶಿವಣ್ಣ, ಗೌರವಾಧ್ಯಕ್ಷ ಸುರೇಶ್ ಗೌಡ, ಪ್ರಧಾನ ಕಾರ್ಯದರ್ಶಿ ಡಿ.ರಾಜು, ಸಂಘಟನಾ ಕಾರ್ಯದರ್ಶಿ ಜಯರಾಜು, ಜಂಟಿ ಕಾರ್ಯದರ್ಶಿ ಜೋಸೆಫ್, ಸದಸ್ಯ ಮಹೇಶ್ ಕುಮಾರ್, ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ರಮೇಶ್ ಪ್ರಭು ಇದ್ದರು



ಗುಂಡ್ಲುಪೇಟೆಯಲ್ಲಿ ಅಯ್ಯಪ್ಪಸ್ವಾಮಿ ಜಾತ್ರೆ



ಗುಂಡ್ಲುಪೇಟೆಯ ಅಯ್ಯಪ್ಪಸ್ವಾಮಿ ದೇವಾಲಯದಲ್ಲಿ ಭಕ್ತರು ಪೂಜೆ ಸಲ್ಲಿಸಿದರು.

ಗುಂಡ್ಲುಪೇಟೆ, ಜ.8– ಪಟ್ಟಣದ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದ ವತಿಯಿಂದ ಆಯೋಜಿಸಿದ್ದ ಅಯ್ಯಪ್ಪ ಸ್ವಾಮಿ ಜಾತ್ರೆ ಮತ್ತು ಕೊಂಡೋತ್ಸವ ವಿಜೃಂಭಣೆಯಿಂದ ನೆರವೇರಿತು.

ಅಯ್ಯಪ್ಪಸ್ವಾಮಿಯ ಬೆಳ್ಳಿಯ ಮೂರ್ತಿಯನ್ನು ಸಾವಿರಾರು ವ್ರತಧಾರಿಗಳ ನೇತೃತ್ವದಲ್ಲಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಉತ್ಸವ ಮೂರ್ತಿಗೆ ಭಕ್ತರು ಪೂಜೆ ಸಲ್ಲಿಸಿದರು.

ಆಂಜನೇಯ ದೇವಾಲಯದ ಆವರಣದಲ್ಲಿ ಕೊಂಡವನ್ನು ಅಯ್ಯಪ್ಪ ಮಾಲಾಧಾರಿಗಳು ಹಾಯುವ ಮೂಲಕ ಪೂಜಾ ಕಾರ್ಯಕ್ರಮ ಸಂಪನ್ನಗೊಂಡಿತು.

ಇಂದು ಸಂತೇಮರಹಳ್ಳಿಯಲ್ಲಿ ಯುವಸೌರಭ

ಚಾಮರಾಜನಗರ, ಜ.8– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜ.9ರಂದು ಬೆಳಗ್ಗೆ 11 ಗಂಟೆಗೆ ಯುವ ಸೌರಭ ಕಾರ್ಯಕ್ರಮವನ್ನು ಸಂತೇಮರಹಳ್ಳಿಯ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಎ.ಆರ್.ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದ ವಿ.ಶ್ರೀನಿವಾಸ ಪ್ರಸಾದ್, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಹೆಚ್.ಎಂ.ಗಣೇಶ್‌ಪ್ರಸಾದ್, ಎಂ.ಆರ್. ಮಂಜುನಾಥ್, ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಮರಿತಿಬ್ಬೇಗೌಡ, ಮಧು ಜಿ.ಮಾದೇಗೌಡ, ಸಿ.ಎನ್.ಮಂಜೇಗೌಡ, ಗ್ರಾಪಂ ಅಧ್ಯಕ್ಷೆ ರಾಜಮ್ಮ, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಂಜುನಾಥ ಪ್ರಸನ್ನ ಭಾಗವಹಿಸಲಿದ್ದಾರೆ. ಸುಗಮ ಸಂಗೀತ, ವಚನ ಸಂಗೀತ, ಜನಪದಗೀತೆ, ಸಮೂಹ ನೃತ್ಯ, ನೃತ್ಯ ರೂಪಕ, ಜನಪದ ಪ್ರದರ್ಶನ, ನಾಟಕ, ಯಕ್ಷಗಾನ, ಮೂಡಲಪಾಯ, ಬಯಲಾಟ, ಗೊಂಬೆಮೇಳ ಹಾಗೂ ಸಮೂಹ ಕಾರ್ಯಕ್ರಮಗಳು ನಡೆಯಲಿವೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಒಂದನೇ ಪುಟದಿಂದ

ಜಿಪಿಎಸ್ ಆಧಾರಿತ ಟೋಲ್ ಸಂಗ್ರಹ

ದೂರ ಕ್ರಮಿಸುತ್ತಾರೋ ಅಷ್ಟು ದೂರಕ್ಕೆ ಮಾತ್ರ ಫಾಸ್ಟ್‌ಟ್ಯಾಗ್‌ನಲ್ಲಿ ಹಣ ಕಡಿತವಾಗುತ್ತದೆ. ಅಲ್ಲದೆ ಇನ್ನು ಮೇಲೆ ಫಾಸ್ಟ್‌ಟ್ಯಾಗ್ ಕಡ್ಡಾಯವಾಗಿರುತ್ತದೆ.

ಜಿಪಿಎಸ್ ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆ ಜಾರಿಗೊಳಿಸುವ ಸಂಬಂಧ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೇಯಲ್ಲಿ ಈಗಾಗಲೇ ಜಿಯೋ ಫೆನ್ಸಿಂಗ್ ಅಳವಡಿಕೆ ಕಾರ್ಯ ಆರಂಭಿಸಲಾಗಿದೆ. ಹೆದ್ದಾರಿಯಲ್ಲಿ ಸಾಗುವ ವಾಹನಗಳಿಗೆ ತಕ್ಕಂತೆ ಒಂದು ಕಿಲೋ ಮೀಟರ್‌ಗೆ ಎಷ್ಟು ಹಣ ಪಾವತಿಸಬೇಕು ಎಂಬ ಬಗ್ಗೆ ತೀರ್ಮಾನ ಕೂಡ ಕೈಗೊಳ್ಳಲಾಗಿದೆ. ಭಾರತದಲ್ಲಿ ಈಗಾಗಲೇ ಜಿಪಿಎಸ್ ಮೂಲಕ ಟೋಲ್ ಸಂಗ್ರಹಿಸಲು 18 ಲಕ್ಷ ವಾಣಿಜ್ಯ ವಾಹನಗಳಿಗೆ ಜಿಪಿಎಸ್ ಉಪಕರಣ ಅಳವಡಿಸಲಾಗಿದೆ. ಹೆದ್ದಾರಿಯ ಎಂಟ್ರಿ ಮತ್ತು ಎಕ್ಸಿಟ್‌ನಲ್ಲಿ ಎಎನ್‌ಪಿಆರ್(ಆಟೋ ಮ್ಯಾಟಿಕ್ ನಂಬರ್ ಪ್ಲೇಟ್ ರೀಡರ್) ಕ್ಯಾಮರಾದಿಂದ ವಾಹನಗಳು ಎಲ್ಲಿಂದ ಟೋಲ್‌ರಸ್ತೆಗೆ ಪ್ರವೇಶ ಪಡೆಯಲಿವೆ, ಯಾವ ಸ್ಥಳದಲ್ಲಿ ನಿರ್ಗಮಿಸಲಿವೆ ಎಂಬುದು ಜಿಪಿಎಸ್ ಆಧಾರಿತ ಸಾಫ್ಟ್‌ವೇರ್ ಮೂಲಕ ಮಾಹಿತಿ ರವಾನೆ ಆಗಲಿದೆ. ಈ ಮೂಲಕ ಎಷ್ಟು ದೂರ ಕ್ರಮಿಸುತ್ತಾರೊ ಅಷ್ಟು ದೂರಕ್ಕೆ ಫಾಸ್ಟ್ ಟ್ಯಾಗ್ ನಲ್ಲಿ ಹಣ ಕಡಿತವಾಗಲಿದೆ. ದೇಶದಲ್ಲಿ ಮೊದಲ ಬಾರಿಗೆ ಎರಡು ರಾಷ್ಟ್ರೀಯ ಹೆದ್ದಾರಿಯಲ್ಲಿ ಇದನ್ನು ಪ್ರಾಯೋಗಿಕವಾಗಿ ಪರಿಚಯಿಸಲಾಗುತ್ತಿದೆ. ಈ ಸಂಬಂಧ ಯಾವುದೇ ಲೋಪ ದೋಷ ಉಂಟಾಗದಂತೆ ಎಲ್ಲಾ ಸಮಸ್ಯೆ ಪರಿಹಾರ ಮಾಡಲಾಗಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಕಾರ್ಯದರ್ಶಿ ಅನುರಾಗ್ ಜೈನ್ ದೆಹಲಿಯಲ್ಲಿ ತಿಳಿಸಿದ್ದಾರೆ.

ಭವಿಷ್ಯತ್ತಿನಲ್ಲಿ ಟೋಲ್ ಪ್ಲಾಜಾಗಳೇ ಇರಲ್ಲ...

ಜಿಪಿಎಸ್ ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆ ಜಾರಿಗೊಳಿಸಿದರೆ ಭವಿಷ್ಯತ್ತಿನಲ್ಲಿ ಟೋಲ್ ಪ್ಲಾಜಾಗಳು ಇತಿಹಾಸ ಸೇರಲಿವೆ. ಇದರಿಂದ ಟೋಲ್‌ನಲ್ಲಿ ವಾಹನ ಸವಾರರು ಕಾದು ಮುಂದೆ ಸಾಗುವ ಪ್ರಮೇಯವೇ ಇರಲ್ಲ. ಹೊಸ ವ್ಯವಸ್ಥೆಯಿಂದ ಹೆದ್ದಾರಿಯಲ್ಲಿ ಸಾಗುವ ವಾಹನ ಸವಾರರು ಯಾವುದೇ ಅಡೆತಡೆ ಇಲ್ಲದೆ ನಿಶ್ಚಿಂತೆಯಿಂದ ಪ್ರಯಾಣ ಮಾಡಬಹುದು. ಫಾಸ್ಟ್ ಟ್ಯಾಗ್ ಅಳವಡಿಸುವ ಮುನ್ನ 2018 ರಲ್ಲಿ ಟೋಲ್ ಪ್ಲಾಜಾಗಳಲ್ಲಿ ವಾಹನ ಸವಾರರು ಶುಲ್ಕ ಪಾವತಿಸಿ ಮುಂದೆ ಸಾಗಲು ಕನಿಷ್ಟ 8 ನಿಮಿಷ ಕಾಯಬೇಕಿತ್ತು. ಆದರೆ 2021 ರ ನಂತರ ಫಾಸ್ಟ್‌ಟ್ಯಾಗ್ ಕಡ್ಡಾಯಗೊಳಿಸಿದ ಮೇಲೆ ಕೇವಲ 48 ಸೆಕೆಂಡ್ ಗಳಲ್ಲಿ ವಾಹನ ಸವಾರರು ಪ್ಲಾಜಾದಿಂದ ಮುಂದೆ ಸಾಗಬಹುದಾಗಿದೆ.

ಆದರೆ ಜಿಪಿಎಸ್ ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆ ಜಾರಿಯಾದರೆ ವಾಹನ ಸವಾರರು ಸಾವಕಾಶವಾಗಿ ಸಂಚರಿಸಬಹುದು. ಇದರಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ಸುಗಮ ವಾಹನ ಸಂಚಾರಕ್ಕೆ ಸಹಕಾರಿಯಾಗಲಿದೆ.

ವಾಹನಗಳಲ್ಲಿ ಜಿಪಿಎಸ್ ಇಲ್ಲವೆಂದರೆ ಚಿಂತೆ ಬೇಡ

ಹಾಗೆಂದ ಮಾತ್ರಕ್ಕೆ ಪ್ರತಿಯೊಂದು ವಾಹನವೂ ಜಿಪಿಎಸ್ ಅಳವಡಿಸಿಕೊಂಡಿರಬೇಕೆಂಬುದು ಕಡ್ಡಾಯವಲ್ಲ. ಜಿಪಿಎಸ್ ಇಲ್ಲದ ವಾಹನಗಳಿಗೆ ಆಟೋ ಮ್ಯಾಟಿಕ್ ನಂಬರ್ ಪ್ಲೇಟ್ ರೀಡರ್‌ನಿಂದ ಶುಲ್ಕ ಪಾವತಿ ವ್ಯವಸ್ಥೆ ಕಲ್ಪಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅವಕಾಶ ಕಲ್ಪಿಸಿದೆ. ಬಹಳಷ್ಟು ಹಳೆಯ ವಾಹನಗಳಿಗೆ ಜಿಪಿಎಸ್ ಇಲ್ಲ. ಆದರೆ ಕಳೆದ ಎರಡು ವರ್ಷಗಳಲ್ಲಿ ಮಾರುಕಟ್ಟೆಗೆ ಬಂದಿರುವ ವಾಹನಗಳಲ್ಲಿ ಜಿಪಿಎಸ್ ಅಳವಡಿಸಲಾಗಿದೆ. ಈಗ ಮಾರುಕಟ್ಟೆಗೆ ಬರುತ್ತಿರುವ ಎಲ್ಲಾ ವಾಹನಗಳಲ್ಲಿ ಜಿಪಿಎಸ್ ಇರುವ ಕಾರಣ ಭವಿಷ್ಯತ್ತಿನಲ್ಲಿ ಜಿಪಿಎಸ್ ಆಧಾರಿತ ಟೋಲ್ ಸಂಗ್ರಹ ಯೋಜನೆ ಯಶಸ್ವಿಯಾಗಲಿದೆ.

"ಟೋಲ್ ಪ್ಲಾಜಾಗಳಲ್ಲಿ ವಾಹನ ಸವಾರರು ಕ್ಯೂನಲ್ಲಿ ನಿಂತು ಕಾಯಬೇಕಾದ ಪರಿಸ್ಥಿತಿಯಿಂದ ಮುಕ್ತ ಮಾಡಲು ಕೇಂದ್ರ ಸರ್ಕಾರ ಜಿಪಿಎಸ್ ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆ ಜಾರಿ ಮಾಡುತ್ತಿದೆ. ಇದರಿಂದ ವಾಹನ ಸವಾರರು ಸರದಿಯಲ್ಲಿ ನಿಲ್ಲುವುದು ತಪ್ಪುತ್ತದೆ. ಪ್ರತಿ ಕಿಲೋ ಮೀಟರ್‌ಗೆ ಇಂತಿಷ್ಟು ಹಣ ನಿಗದಿ ಮಾಡುವುದರಿಂದ ವಾಹನ ಸವಾರರು ಹೈವೇಯಲ್ಲಿ ತಾವು ಎಷ್ಟು ದೂರ ಕ್ರಮಿಸುತ್ತಾರೋ ಅಷ್ಟು ಹಣ ಮಾತ್ರ ಫಾಸ್ಟ್‌ಟ್ಯಾಗ್‌ನಲ್ಲಿ ಕಡಿತವಾಗುತ್ತದೆ. ಈಗ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೇನಲ್ಲಿ ಪ್ರಯಾಣಿಸುವವರು ಮಂಡ್ಯಗೆ ಹೋಗಬೇಕೆಂದರೂ ಬೆಂಗಳೂರಿಗೆ ಹೋಗುವಷ್ಟು ಟೋಲ್ ಹಣ ಪಾವತಿ ಮಾಡಬೇಕಿದೆ. ಆದರೆ ಹೊಸ ವ್ಯವಸ್ಥೆಯಿಂದ ವಾಹನ ಸವಾರರು ಎಷ್ಟು ಕಿಲೋ ಮೀಟರ್ ಸಾಗುತ್ತಾರೊ ಅಷ್ಟು ಹಣ ಮಾತ್ರ ಪಾವತಿಸುತ್ತಾರೆ. ಇದರಿಂದ ಜನರಿಗೆ ಪ್ರಯಾಣದ ಟೋಲ್ ಪಾವತಿಯ ಹೊರೆ ತಪ್ಪುತ್ತದೆ.

– ಪ್ರತಾಪ್ ಸಿಂಹ, ಮೈಸೂರು–ಕೊಡಗು ಲೋಕಸಭಾ ಸದಸ್ಯರು

ನವೀಕರಣ ಕಾಮಗಾರಿ ಪೂರ್ಣ

ಕಚೇರಿ ಕಾರ್ಯ ನಿರ್ವಹಿಸುತ್ತಿತ್ತು. ಈ ಹಿಂದಿನ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಅದೇ ಆವರಣ ದಲ್ಲೇ ನಿರ್ಮಿಸಿದ್ದ ಹೊಸ ಕಟ್ಟಡಕ್ಕೆ ತಮ್ಮ ಕಚೇರಿ ಸ್ಥಳಾಂತರಿಸಿದರಲ್ಲದೇ, ಹಳೇ ಕಚೇರಿ ಕಟ್ಟಡವನ್ನು ನವೀಕರಿಸಿ, ಸಂರಕ್ಷಿ ಸಲು ಆಸಕ್ತಿ ತೋರಿದ್ದರು. ಈ ಪಾರಂಪರಿಕ ಬ್ಯಾಂಡ್ ಹೌಸ್ ಅನ್ನು ನವೀಕರಿಸಲು ಸಿಎಸ್‌ಆರ್ ಯೋಜನೆಯಡಿ ಮೈಸೂ ರಿನ ಬ್ಯಾಂಕ್ ನೋಟ್ ಪೇಪರ್ ಮಿಲ್ ಇಂಡಿಯಾ (BNPM INDIA) ಲಿಮಿಟೆಡ್ ಮುಂದೆ ಬಂದ ಹಿನ್ನೆಲೆಯಲ್ಲಿ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಮೂಲಕ 2022ರ ಫೆಬ್ರವರಿ 1ರಂದು ಒಡಂಬಡಿಕೆ ಮಾಡಿಕೊಂಡು ಕಾಮಗಾರಿ ಆರಂಭಿಸಲಾಗಿತ್ತು. ಬಿಎನ್‌ಪಿಎಂ ಇಂಡಿಯಾ ಸಂಸ್ಥೆಯು ಕಾಮಗಾರಿಗೆ ಸಿಎಸ್‌ಆರ್ ಅಡಿ ಆರ್ಥಿಕ ನೆರವು ಇಲಾಖೆಯು ಟೆಂಡರ್ ಮೂಲಕ 64 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ಮೈಸೂರಿನ ಟಿ. ಸುಭಾಷ್ ಎಂಬುವರಿಗೆ ಕಾಮಗಾರಿಯನ್ನು ಶೇ. 5.21 ಕಡಿಮೆ ವೆಚ್ಚದಲ್ಲಿ 57,46,218 ರೂ.ಗಳಲ್ಲಿ 6 ತಿಂಗಳೊಳಗೆ ಪೂರ್ಣಗೊಳಿಸಲು ಒಪ್ಪಿಸಲಾಗಿತ್ತು.

2022ರ ಮೇ 12ರಂದು ಆರಂಭವಾದ ಬ್ಯಾಂಡ್ ಹೌಸ್ ನವೀಕರಣ ಕಾಮಗಾರಿಯನ್ನು ಇದೀಗ ಶೇ. 100ರಷ್ಟು ಪೂರ್ಣಗೊಳಿಸಲಾಗಿದ್ದು, ಉದ್ಘಾಟನೆಗೆ ಸಿದ್ಧಗೊಂಡಿದೆ. ಛಾವಣಿಯ ಮುರಿದ ಹೆಂಚುಗಳನ್ನು ತೆಗೆದು ಹೊಸದಾಗಿ ಹಾಕಿ, ಮಂಗಳೂರು ಟೈಲ್ಸ್, ಮರದ ತೊಲೆಗಳು, ಜಂತಿಗಳನ್ನೂ ಬದಲಾಯಿಸಲಾಗಿದೆ. ಶಿಥಿಲಗೊಂಡಿದ್ದ ಗೋಡೆಗೆ ಲೈಮ್ ಮೊರ್ಟಾರ್ ಗಾರೆಯಿಂದ ಪ್ಲಾಸ್ಟಿಂಗ್ ಮಾಡಿ ಮರದ ಕಿಟಕಿಗಳನ್ನೂ ಬದಲಾಯಿಸಲಾಗಿದೆ. ಗೋಡೆಗಳ ಒಳ ಮತ್ತು ಹೊರ ಭಾಗಗಳಿಗೆ ಬಣ್ಣ ಬಳಿಯುವ ಜೊತೆಗೆ ಸ್ವಚ್ಛಗೊಳಿಸಿ ಅಗತ್ಯವಿದ್ದೆಡೆ ಪಾಲಿಷ್ ಮಾಡಲಾಗಿದೆ. ಇದೀಗ ಕಾಮಗಾರಿ ಪೂರ್ಣಗೊಂಡಿರುವುದರಿಂದ 2024ರ ಜನವರಿ 22ರ ನಂತರ ಪ್ರಾಯೋಜಕ ಸಂಸ್ಥೆ ಬಿಎನ್‌ಪಿಎಂ ಇಂಡಿಯಾ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕರಿಂದ ಕಟ್ಟಡವನ್ನು ಉದ್ಘಾಟಿಸಲು ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ಸಿದ್ಧತೆ ನಡೆಸಿದ್ದಾರೆ. ಸರಿಯಾಗಿ ನಿರ್ವಹಣೆ ಮಾಡದ ಕಾರಣ ಹಳೇ ಕಟ್ಟಡದ ಮಂಗಳೂರು ಟೈಲ್ಸ್ ರೂಫ್ ಶೈಲಿಯಲ್ಲಿ ಅಳವಡಿಸಿರುವ ಛಾವಣಿ ಸೋರುತ್ತಿದ್ದು, ಗೋಡೆಗಳ ಪ್ಲಾಸ್ಟಿಂಗ್ ಬಿರುಕು ಬಿಟ್ಟಿತ್ತು. ರಿಪೇರಿ ಮಾಡಿ ಸಂರಕ್ಷಿಸಲಾಗಿರುವ ಬ್ಯಾಂಡ್ ಹೌಸ್ ಪಾರಂಪರಿಕ ಕಟ್ಟಡಕ್ಕೆ ಕರ್ನಾಟಕ ಪೊಲೀಸ್ ಬ್ಯಾಂಡ್ ಸಂಗೀತ ಸಲಕರಣೆಗಳನ್ನು ಸ್ಥಳಾಂತರಿಸಿ ವಸ್ತು ಸಂಗ್ರಹಾಲಯವಾಗಿ ಪರಿವರ್ತಿಸಲು ಪೊಲೀಸ್ ಘಟಕವು ಸಿದ್ಧತೆ ನಡೆಸಿದೆ. ಮೈಸೂರು ಅರಮನೆಯಲ್ಲಿ ನುಡಿಸುತ್ತಿದ್ದ ಸಂಗೀತ ಸಲಕರಣೆಗಳನ್ನು ಈ ಮ್ಯೂಸಿಯಂನಲ್ಲಿರಿಸಿ ವರ್ಷವಿಡೀ ವೀಕ್ಷಿಸಲು ಸಾರ್ವಜನಿಕರಿಗೆ ಮುಕ್ತ ಅವಕಾಶ ಕಲ್ಪಿಸಲು ಮೈಸೂರು ನಗರ ಪೊಲೀಸ್ ಘಟಕವು ತಯಾರಿ ನಡೆಸಿದೆ. ವಾಹನ ಪಾರ್ಕಿಂಗ್, ಸಂಗೀತ ಸಲಕರಣೆಗಳ ಬಗ್ಗೆ ಮಾಹಿತಿ ನೀಡಲು ಪೊಲೀಸ್ ಬ್ಯಾಂಡ್‌ನ ಸಿಬ್ಬಂದಿಯನ್ನು ನಿಯೋಜಿಸಲಾಗುವುದು.

"ಮೈಸೂರು ಪೊಲೀಸ್ ಆಯುಕ್ತರ ಕೋರಿಕೆಯಂತೆ ಸರ್ಕಾರದ ಆದೇಶದನ್ವಯ ನಾವು ಬ್ಯಾಂಕ್ ನೋಟ್ ಪೇಪರ್ ಮಿಲ್ ಇಂಡಿಯಾ ದೊಂದಿಗೆ ಒಡಂಬಡಿಕೆ ಮಾಡಿಕೊಂಡು ಪಾರಂಪರಿಕ ಶೈಲಿಗೆ ಭಂಗ ಬಾರದಂತೆ ಬ್ಯಾಂಡ್ ಹೌಸ್ ನವೀಕರಣ ಕಾಮಗಾರಿಯನ್ನು ಪೂರ್ಣಗೊಳಿಸಿದ್ದೇವೆ. ಇಷ್ಟರಲ್ಲೇ ಪೊಲೀಸ್ ಆಯುಕ್ತರ ವಶಕ್ಕೆ ಕಟ್ಟಡ ಒಪ್ಪಿಸಲಾಗುವುದು. ಅನುಭವಿ ಗುತ್ತಿಗೆದಾರರ ಮೂಲಕ ಕಾಮಗಾರಿ ಪೂರ್ಣಗೊಳಿಸಿದ್ದು, ಪಾರಂಪರಿಕ ಕಟ್ಟಡಕ್ಕೆ ಬಳಸುವ ಸಾಮಗ್ರಿ ಗಳಿಂದ ನವೀಕರಿಸಿ ಸಂರಕ್ಷಿಸಲಾಗಿದೆ. – ಎ.ದೇವರಾಜು, ಪಾರಂಪರಿಕ ಆಯುಕ್ತರು

ಶಾಲಾ ಮಕ್ಕಳಿಗೆ 'ರಾಗಿ ಮಾಲ್ಟ್'

ಸರ್ಕಾರಿ ಶಾಲೆಗಳನ್ನು ಸುಧಾರಿಸುವ ನಿಟ್ಟಿನಲ್ಲಿ ಸರ್ಕಾರ ಅಗತ್ಯ ಕ್ರಮ ಕೈಗೊಂಡಿದೆ. ಶಿಕ್ಷಕರ ನೇಮಕ, ಮಧ್ಯಾಹ್ನದ ಬಿಸಿಯೂಟ, ಮೊಟ್ಟೆ ಹಾಗೂ ಹಾಲು ವಿತರಣೆ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ತಲುಪಿಸಲಾಗುತ್ತಿದೆ. ಶಾಲಾ ಮಕ್ಕಳಿಗೆ ಪಠ್ಯ ಪುಸ್ತಕ ಹೊರೆಯಾಗದಂತೆ ಕ್ರಮ ಕೈಗೊಳ್ಳಲಾಗಿದೆ. ಕೊಡಗು ಜಿಲ್ಲೆಯಲ್ಲಿ ಶತಮಾನ ಪೂರೈಸಿರುವ ಸರ್ಕಾರಿ ಶಾಲೆಗಳು ಇದ್ದು, ಈ ಶಾಲೆಗಳನ್ನು ಅಭಿವೃದ್ಧಿ ಪಡಿಸಲು ನಿರ್ಧರಿಸಲಾಗಿದೆ. ಇವುಗಳನ್ನು ಕರ್ನಾಟಕ ಪಬ್ಲಿಕ್ ಶಾಲೆ ಮಾದರಿಯಲ್ಲಿ ಅಭಿವೃದ್ಧಿಪಡಿಸಲಾಗುವುದು ಎಂದರು. ಹಳೇ ಶಾಲೆಗಳ ಅಭಿವೃದ್ಧಿಗೆ ಕ್ರಮ ವಹಿಸಲಾಗಿದೆ. ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ವಿದ್ಯಾರ್ಥಿಗಳು ನೆಲದಲ್ಲಿ ಕೂರಬಾರದು. ಶಾಲೆಗಳಿಗೆ ಡೆಸ್ಕ್, ಬೆಂಚ್ ಇತರೆ ಸಾಮಗ್ರಿಗಳನ್ನು ವಿತರಿಸಲಾಗುವುದು. ಹೊಸ ತಾಲೂಕುಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ನೇಮಕಾತಿ ಸಂಬಂಧ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಅಧಿಕಾರಿಗಳ ಕೊರತೆ ಇರುವುದರಿಂದ ನೇಮಕ ಮಾಡಿಲ್ಲ. ಮುಂದಿನ ದಿನಗಳಲ್ಲಿ ನೇಮಕಾತಿ ಮಾಡಲಾಗುವುದು ಎಂದರು. ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ, ಹಾಕಿ ಕೊಡಗು ಜಿಲ್ಲೆಯ ಸಂಸ್ಕೃತಿಯ ಭಾಗವಾಗಿದೆ. ಪೊನ್ನಂಪೇಟೆ ಹಾಕಿ ಕ್ರೀಡಾಂಗಣಕ್ಕೆ ಇನ್ನಷ್ಟು ಮೂಲಸೌಲಭ್ಯ ಕಲ್ಪಿಸಲಾಗುವುದು. ಆ ನಿಟ್ಟಿನಲ್ಲಿ ಕ್ರಿಯಾ ಯೋಜನೆ ರೂಪಿಸಲಾಗುವುದು. ಜಿಲ್ಲೆಯ ಹಾಕಿ ಕ್ರೀಡಾಪಟುಗಳು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆಯು ವಂತಾಗಬೇಕು. ವಿರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 10 ಆಟದ ಮೈದಾನಗಳನ್ನು ಗುರುತಿಸಲಾಗಿದ್ದು, ಸ್ಥಳೀಯ ಕ್ರೀಡಾಪಟುಗಳು ಇದರ ಪ್ರಯೋಜನ ಪಡೆಯುವಂತಾಗಬೇಕು ಎಂದರು.ಕೊಡಗು ಜಿಲ್ಲೆಯಲ್ಲಿ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದೆ. ರಾಷ್ಟ್ರಮಟ್ಟದ ಹಾಕಿ ಪಂದ್ಯಾವಳಿಗೆ ಹೆಚ್ಚಿನ ಅನುದಾನ ಒದಗಿಸುವಂತಾಗಬೇಕು ಎಂದು ಸಚಿವರಲ್ಲಿ ಮನವಿ ಮಾಡಿದರು.

ಆಕರ್ಷಕ ಚಿತ್ರಗಳಿಂದ ಸುದ್ದಿಗೆ ಮೌಲ್ಯ: ಸುತ್ತೂರು ಶ್ರೀಗಳು



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಪ್ರಕಟಿಸಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹಾಗೂ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಬಿಡುಗಡೆ ಮಾಡಿದರು.

ಮೈಸೂರು, ಜ.8(ಎಂಟಿವೈ)– ಪತ್ರಕರ್ತರು ಹಾಗೂ ಪತ್ರಿಕಾ ಛಾಯಾಗ್ರಾಹಕರು ಪರಸ್ಪರ ಸಮನ್ವಯತೆಯಿಂದ ಕೆಲಸ ನಿರ್ವಹಿಸಿದಾಗ ಪತ್ರಿಕೆಗಳಲ್ಲಿ ಛಾಯಾಚಿತ್ರದೊಂದಿಗೆ ಉತ್ತಮ ಸುದ್ದಿ ನಿರೀಕ್ಷಿಸಬಹುದು ಎಂದು ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಪ್ರಕಟಿಸಿರುವ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಮೈಸೂರಲ್ಲಿ ಜಿಲ್ಲಾ ಪತ್ರಕರ್ತರ ಸಂಘ ಹಾಗೂ ಫೋಟೋ ಜರ್ನಲಿಸ್ಟ್‌ಗಳ ಸಂಘ ಕಾರ್ಯನಿರ್ವ ಹಿಸುತ್ತಿವೆ. ಎರಡೂ ಸಂಘಗಳು ಪರಸ್ಪರ ಸಹಕಾರ ಮನೋಭಾವದಿಂದ ಕಾರ್ಯ ನಿರ್ವಹಿಸಬೇಕು. ಅದರಲ್ಲೂ ಪತ್ರಕರ್ತರು ಮತ್ತು ಪತ್ರಿಕಾ ಛಾಯಾಗ್ರಾಹಕರು ಸಮನ್ವಯತೆಯಲ್ಲಿ ಕೆಲಸ ಮಾಡಬೇಕು. ಆಗ ಮಾತ್ರ ಪತ್ರಿಕೆಗಳಲ್ಲಿ ಇನ್ನಷ್ಟು ಉತ್ತಮವಾದ ಸುದ್ದಿ–ಚಿತ್ರಗಳು ಪ್ರಕಟವಾಗಲಿದೆ. ಮೈಸೂರು ಫೋಟೋ ಜರ್ನಲಿಸ್ಟ್‌ಗಳ ಸಂಘ ಅತ್ಯುತ್ತಮವಾದ ಕ್ಯಾಲೆಂಡರ್ ಪ್ರಕಟಿಸಿದೆ. ಪ್ರತಿಯೊಂದು ಪುಟದಲ್ಲೂ ಉತ್ತಮವಾದ ಹಾಗೂ ಆಕರ್ಷಕವಾದ ಛಾಯಾಚಿತ್ರ ಪ್ರಕಟಿಸಿದ್ದು, ನೋಡುಗರ ಕಣ್ಮನ ಸೆಳೆಯುತ್ತದೆ. ಛಾಯಾಗ್ರಾಹಕರು ಸಮಾಜಮುಖಿ ಆಲೋಚನೆಯೊಂದಿಗೆ ಚಿತ್ರ ತೆಗೆದಿದ್ದಾರೆ ಎಂದು ಶ್ಲಾಘಿಸಿದರು.

ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಪ್ರಕಟಿಸಿರುವ ಕ್ಯಾಲೆಂಡರ್‌ನಲ್ಲಿ ಮುಖಪುಟದಲ್ಲಿ ಇತ್ತೀಚೆಗೆ ಸಾವನ್ನಪ್ಪಿದ ದಸರಾ ಆನೆ ಅರ್ಜುನನ ಫೋಟೋ ಪ್ರಕಟಿಸಿ ಶ್ರದ್ಧಾಂಜಲಿ ಅರ್ಪಿಸಲಾಗಿದೆ. ದಸರಾ ಮಹೋತ್ಸವದಲ್ಲಿ 8 ಬಾರಿ ಚಿನ್ನದ ಅಂಬಾರಿ ಹೊತ್ತು ಸಾಗಿದ ಅರ್ಜುನ ಎಲ್ಲರ ಪ್ರೀತಿಗೆ ಪಾತ್ರವಾಗಿತ್ತು. ದಸರಾ ಮಹೋತ್ಸವದಲ್ಲಿ ಈ ಹಿಂದೆ ಅಂಬಾರಿಯಲ್ಲಿ ಮಹಾರಾಜರು ಕುಳಿತು ಸಾಗುವಾಗ ರಸ್ತೆಯ ಎರಡೂ ಬದಿಯಲ್ಲಿ ನಿಂತಿರುತ್ತಿದ್ದ ಅಪಾರ ಸಂಖ್ಯೆಯ ಜನರು ಕೈ ಮುಗಿಯುತ್ತಿದ್ದರು. ಜಂಬೂಸವಾರಿ ವೀಕ್ಷಿಸುತ್ತಿದ್ದ ವಿದೇಶಿಗರು ಮಹಾರಾಜರತ್ತ ಕೈ ಬೀಸುತ್ತಿದ್ದರು. ಮೈಸೂರು ಭಾಗದ ಜನರಿಗೆ ಮಹಾರಾಜರು ಎಂದರೆ ಅಪಾರವಾದ ಗೌರವ, ಪ್ರೀತಿ ಇತ್ತು ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ಅಂತಾರಾಷ್ಟ್ರೀಯ ವನ್ಯಜೀವಿ ಛಾಯಾಗ್ರಾಹಕ ಎಸ್.ತಿಪ್ಪೇಸ್ವಾಮಿ, ಹಿರಿಯ ಪತ್ರಕರ್ತ ಬಿ.ಎಸ್. ಪ್ರಭುರಾಜನ್ ಅವರನ್ನು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ವತಿಯಿಂದ ಸನ್ಮಾನಿಸಲಾಯಿತು. ಹಿರಿಯ ವಕೀಲರೂ ಆದ 'ಲಾ ಗೈಡ್' ಕನ್ನಡ ಕಾನೂನು ಮಾಸ ಪತ್ರಿಕೆ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್ ಹಾಗೂ ಹೋಟೆಲ್ ಉದ್ಯಮಿ ರವಿಶಾಸ್ತ್ರಿ ಅವರಿಗೆ ಸ್ಮರಣಿಕೆ ನೀಡಲಾಯಿತು.



ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ವತಿಯಿಂದ ಅಂತಾರಾಷ್ಟ್ರೀಯ ವನ್ಯಜೀವಿ ಛಾಯಾಗ್ರಾಹಕ ಎಸ್.ತಿಪ್ಪೇಸ್ವಾಮಿ, ಹಿರಿಯ ಪತ್ರಕರ್ತ ಬಿ.ಎಸ್.ಪ್ರಭುರಾಜನ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಗುಂಡ್ಲುಪೇಟೆ ಕ್ಷೇತ್ರದ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು. ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಅಸೋಸಿಯೇಷನ್ ಅಧ್ಯಕ್ಷ ಪ್ರಗತಿ ಗೋಪಾಲಕೃಷ್ಣ, ಪ್ರಧಾನ ಕಾರ್ಯದರ್ಶಿ ಎಂ.ಎನ್.ಲಕ್ಷ್ಮಿ ನಾರಾ ಯಣ ಯಾದವ್, ಉಪಾಧ್ಯಕ್ಷ ಎಸ್.ಆರ್. ಮಧುಸೂದನ್, ಖಜಾಂಚಿ ನಂದನ್, ಸದಸ್ಯರಾದ ಅನುರಾಗ್ ಬಸವರಾಜ್, ಚಂದ್ರು, ಹಂಪಾ ನಾಗರಾಜ್, ಅನೂಪ್, ಶ್ರೀರಾಮ್, ಉದಯ್ ಶಂಕರ್, ನಾಗೇಶ್ ಪಾಣತ್ತಲೆ, ಗವಿಮಠ ರವಿ, ಕೃಷ್ಣೋಜಿರಾವ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಇದು ಪ್ರತಿಭೆ, ಪ್ರಾಮಾಣಿಕರ ಕಾಲವಲ್ಲ!

• ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ತೀವ್ರ ಬೇಸರ • ಅಭಿಮಾನಿ ಬಳಗದ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗಿ



ಮಾನಸಗಂಗೋತ್ರಿ ವಿಜ್ಞಾನ ಭವನದ ಸೆಮಿನಾರ್ ಹಾಲ್‌ನಲ್ಲಿ ಪ್ರೊ.ಕೆ.ಎಸ್.ರಂಗಪ್ಪ ಅಭಿಮಾನಿ ಬಳಗದ 8ನೇ ವರ್ಷದ ಕ್ಯಾಲೆಂಡರ್ ಅನ್ನು ಮೈಸೂರು ವಿವಿ ಕುಲಪತಿ ಪ್ರೊ.ಕೆ.ಎನ್.ಲೋಕನಾಥ್ ಬಿಡುಗಡೆ ಮಾಡಿದರು. ವಿಶ್ರಾಂತ ಕುಲಪತಿಗಳಾದ ಪ್ರೊ.ಕೆ.ಎಸ್.ರಂಗಪ್ಪ, ಪ್ರೊ. ಜಿ.ಹೇಮಂತ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು, ಜ.8(ಎಂಕೆ)– ಸರಿಯಾಗಿರುವುದನ್ನು ಸರಿ, ಸರಿಯಿಲ್ಲದಿರುವುದನ್ನು ಸರಿಯಿಲ್ಲ ಎಂದು ಧೈರ್ಯವಾಗಿ ಹೇಳುವ ಮನಸ್ಥಿತಿಯನ್ನು ಬೆಳೆಸಿಕೊಂಡು ಕೆಲಸ ಮಾಡುವುದರ ಜೊತೆಗೆ ಒಳ್ಳೆಯ ವಿದ್ವತ್ ಇರುವವರನ್ನು ಯಾವಾಗಲೂ ಜೊತೆಯಲ್ಲಿಟ್ಟುಕೊಳ್ಳಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳೂ ಆದ ಖ್ಯಾತ ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪ ಅಭಿಪ್ರಾಯಿಸಿದರು.

ಮಾನಸಗಂಗೋತ್ರಿ ವಿಜ್ಞಾನ ಭವನದ ಸೆಮಿನಾರ್ ಹಾಲ್‌ನಲ್ಲಿ ಸೋಮವಾರ ಪ್ರೊ.ಕೆ.ಎಸ್.ರಂಗಪ್ಪ ಅಭಿಮಾನಿ ಬಳಗದ ವತಿಯಿಂದ ಆಯೋಜಿಸಿದ್ದ 8ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಹಳಷ್ಟು ಜನ ತಮ್ಮಲ್ಲಿ ಪ್ರತಿಭೆ ಇಲ್ಲದಿದ್ದರೂ ಬೇಕಾಬಿಟ್ಟಿ ಮಾತನಾಡುತ್ತಾರೆ. ಅಂತಹವರ ಮಧ್ಯೆ ಒಳ್ಳೆಯ ಪ್ರತಿಭೆ ಇದ್ದವರನ್ನು ಗುರ್ತಿಸುವ ಕೆಲಸವಾಗಬೇಕು. ವಿಜ್ಞಾನ ಭವನ ಕಟ್ಟಲು ಪ್ರಾಮಾಣಿಕವಾಗಿ ದುಡಿದ ಪ್ರತಿಭಾನ್ವಿತರನ್ನು ಮುಳುಗಿಸುವ ಕೆಲಸವಾಗಿದ್ದು, ಮನಸ್ಸಿಗೆ ಬೇಸರವಾಯಿತು. ಅಂತಹ ಪ್ರತಿಭಾನ್ವಿತರನ್ನು ಮುಳುಗಿಸುವುದು ಸರಿಯಲ್ಲ. ಸಾಧನೆ ಮಾಡುವವರನ್ನು ಪ್ರೋತ್ಸಾಹಿಸುವುದರಿಂದ ಅಭಿವೃದ್ಧಿ ಸಾಧ್ಯ ಎಂದು ಹೇಳಿದರಲ್ಲದೆ ನಾನು ನಿವೃತ್ತಿಯಾಗಿ 10 ವರ್ಷವಾದರೂ ಅಭಿಮಾನ ಇಟ್ಟುಕೊಂಡಿರುವುದಕ್ಕೆ ಋಣಿಯಾಗಿದ್ದೇನೆ ಎಂದು ಕೃತಜ್ಞತೆ ಸಲ್ಲಿಸಿದರು.

ಸಂಘಟಿತರಾಗುವುದು ಮುಖ್ಯ: ಅಂಬೇಡ್ಕರ್ ಅಭಿವೃದ್ಧಿ ನಿಗಮದ ನಿವೃತ್ತ ಎಂ.ಡಿ ಡಾ.ರಾಜು ಮಾತನಾಡಿ, ದೇಶದ ಜನಸಂಖ್ಯೆಯಲ್ಲಿ ಶೇ.40 ರಷ್ಟು ಯುವಕರೇ ಇದ್ದಾರೆ. ಇಂತಹ ಬಲಿಷ್ಠ ಯುವ ಸಮೂಹವನ್ನು ಸಂಘಟಿಸುವ ಮೂಲಕ ಅವರೆಲ್ಲಾ ತಮ್ಮ ಜವಾಬ್ದಾರಿಯತ್ತಾ ಕಾರ್ಯೋನ್ಮುಖರಾದರೆ ದೇಶದ ಅಭಿವೃದ್ಧಿ ವೇಗ ಪಡೆಯುತ್ತದೆ. ಕಾಲ ಬದಲಾದಂತೆ ದೇಶದ ಆರ್ಥಿಕ ವ್ಯವಸ್ಥೆಯೂ ಬದಲಾಗುತ್ತಿದೆ. 10ನೇ ಸ್ಥಾನದಲ್ಲಿದ್ದ ಭಾರತ 5ನೇ ಅತೀ ದೊಡ್ಡ ಆರ್ಥಿಕತೆಯ ರಾಷ್ಟ್ರವಾಗಿದೆ. ಸಂವಿಧಾನದ ಅಡಿಯಲ್ಲಿ ಪ್ರತಿಯೊಬ್ಬರು ಸಮಾನರೆಂಬುದನ್ನು ಅರಿತು ಸಂಘಟಿತರಾಗಬೇಕು ಎಂದರು.

ರಂಗಪ್ಪರ ಗುಣಗಾನ: ಮೈಸೂರು ವಿವಿ ಕುಲಪತಿ ಪ್ರೊ.ಕೆ.ಎನ್.ಲೋಕನಾಥ್, ವಿಶ್ರಾಂತ ಕುಲಪತಿ ಪ್ರೊ. ಜಿ.ಹೇಮಂತ್ ಕುಮಾರ್ ಇನ್ನಿತರರು ಪ್ರೊ.ಕೆ.ಎಸ್. ರಂಗಪ್ಪ ಅವರ ಕಾರ್ಯವೈಖರಿ, ಅವರೊಂದಿಗಿನ ಒಡನಾಟ ಹಂಚಿಕೊಂಡರು. ಐಓಇ ಸಂಯೋಜಕ ಪ್ರೊ.ಕೆಂಪರಾಜು, ಮೈಸೂರು ವಿವಿ ಮಾಜಿ ಸಿಂಡಿಕೇಟ್ ಸದಸ್ಯ ಡಾ.ಈ.ಸಿ.ನಿಂಗರಾಜೇಗೌಡ, ಕಾವೇರಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್‌ನ ಡೀನ್ ಪ್ರೊ.ಶ್ರೀಕಂಠಸ್ವಾಮಿ, ಪ್ರೊ.ಮೇವಾಸಿಂಗ್ ಮತ್ತಿತರರಿದ್ದರು.



ಹೊಸಕೋಟೆಯಲ್ಲಿ ನಡೆದ 43ನೇ ಕರ್ನಾಟಕ ರಾಜ್ಯ ಮಾಸ್ಟರ್ ಅಥ್ಲೆಟಿಕ್ಸ್‌ನಲ್ಲಿ ಭಾಗವಹಿಸಿ ಚಕ್ರ ಹಾಗೂ ಗುಂಡು ಎಸೆತದಲ್ಲಿ ಕಂಚಿನ ಪದಕ ಪಡೆದ 70 ವರ್ಷದ ಎಂ.ಪಿ.ಚಂದ್ರಶೇಖರ್ ಅವರನ್ನು ನಜರ್‌ಬಾದ್‌ನ ನಾಗರಿಕರು ಅಭಿನಂದಿಸಿದರು. ಚಿತ್ರದಲ್ಲಿ ವರದರಾಜು, ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕ ಎಸ್.ಆರ್. ರವಿ, ಕುಮಾರ್, ವಿಕಾಸ್ ಸಿಂಹ, ರಾಕೇಶ್, ಕ್ರಿಯೇಟಿವ್ ಕುಮಾರ್ ಇದ್ದಾರೆ.



ಮೈಸೂರಿನ ರಾಜೀವ್‌ನಗರ, ಉದಯಗಿರಿ, ಶಾಂತಿನಗರ, ಗೌಸಿಯಾನಗರ ಒಳಗೊಂಡಂತೆ ವಿವಿಧೆಡೆ ಹಾದುಹೋಗಿರುವ ಒಳಚರಂಡಿ ಮುಖ್ಯ ಕಾಲುವೆ ಮಾರ್ಗದ ಕಾಮಗಾರಿಗೆ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಸೋಮವಾರ ಚಾಲನೆ ನೀಡಿದರು. ಈ ವೇಳೆ ಮಾಜಿ ಕಾರ್ಪೋರೇಟರ್ ಎನ್.ಧ್ರುವರಾಜ ಇತರರು ಉಪಸ್ಥಿತರಿದ್ದಾರೆ. ಸುಮಾರು 4.80 ಕೋಟಿ ರೂ. ವೆಚ್ಚದ ಈ ಕಾಮಗಾರಿಗೆ ರಾಷ್ಟ್ರೀಯ ಹಸಿರು ಪ್ರಾಧಿಕಾರ ಅನುದಾನ ನೀಡಿದೆ. ಇದರಲ್ಲಿ ಪಾಲಿಕೆಯ ಪಾಲು 1.50 ಕೋಟಿ ರೂ. ಆಗಿದೆ.

ಹಳ್ಳಿಗೂ ಜನೌಷಧ ಕೇಂದ್ರ ವಿಸ್ತರಣೆ: ಅಮಿತ್ ಶಾ

ನವದೆಹಲಿ: ಗ್ರಾಮೀಣ ಪ್ರದೇಶದ ಬಡವರು ಮತ್ತು ರೈತರಿಗೆ ಕೈಗೆಟುಕುವ ದರದಲ್ಲಿ ಔಷಧ ನೀಡಲು ದೇಶದ 241 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ (ಪ್ಯಾಕ್ಸ್) ಜನೌಷಧ ಕೇಂದ್ರ ಆರಂಭಿಸಲಾಗಿದೆ ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ತಿಳಿಸಿದರು.

ಪ್ಯಾಕ್ಸ್‌ಗಳಲ್ಲಿ ಜನೌಷಧ ಕೇಂದ್ರ ಆರಂಭಿಸುವ ಸಂಬಂಧ ಸೋಮವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸಮಾವೇಶದಲ್ಲಿ ಮಾತನಾಡಿದ ಅವರು, ನಗರ ಪ್ರದೇಶದಲ್ಲಿ ಜನೌಷಧ ಕೇಂದ್ರಗಳು ಹೆಚ್ಚಿದ್ದು, ಬಡವರಿಗೆ ಹೆಚ್ಚಿನ ಪ್ರಯೋಜನ ಲಭಿಸುತ್ತಿದೆ. ಸದ್ಯ ಗ್ರಾಮೀಣರಿಗೂ ಈ ಸೇವೆ ವಿಸ್ತರಿಸಲಾಗಿದೆ ಎಂದು ತಿಳಿಸಿದರು.

ಜನೌಷಧ ಕೇಂದ್ರ ಸ್ಥಾಪನೆಗಾಗಿ ಕಳೆದ ಆರು ತಿಂಗಳಲ್ಲಿ ದೇಶದಾದ್ಯಂತ 4,470 ಸಂಘಗಳಿಂದ ಅರ್ಜಿ ಸ್ವೀಕರಿಸಲಾಗಿತ್ತು. ಈ ಪೈಕಿ 2,373 ಸಂಘಗಳಿಗೆ ಅನುಮೋದನೆ ನೀಡಲಾಗಿದೆ ಎಂದು ವಿವರಿಸಿದರು.

ಅರ್ಹತೆ ಪಡೆದ ಐದು ಸಂಘಗಳಿಗೆ ಸ್ಟೋರ್ ಕೋಡ್ ಪ್ರಮಾಣ ಪತ್ರ ವಿತರಿಸಿದ ಅವರು, ಬೈಲಾದಲ್ಲಿ ತಿದ್ದುಪಡಿ ಮಾಡಿಕೊಂಡು ಜನೌಷಧ ಕೇಂದ್ರ ತೆರೆಯುವ ಮೂಲಕ ಸಂಘಗಳು ತಮ್ಮ ವಾಣಿಜ್ಯ ಚಟುವಟಿಕೆಯನ್ನು ವಿಸ್ತರಿಸಬಹುದಾಗಿದೆ ಎಂದು ಸಲಹೆ ನೀಡಿದರು.

ಗ್ರಾಮೀಣ ಪ್ರದೇಶದ ಮಳಿಗೆಗಳಲ್ಲಿ ಜನರು ಈಗ ಕಡಿಮೆ ದರದಲ್ಲಿ ಜೆನೆರಿಕ್ ಔಷಧ ಖರೀದಿಸಬಹುದು ಎಂದರು.

ಭಾರತದ ಪ್ರಗತಿಗೆ ಸಾವಿತ್ರಿ ಬಾಯಿ ಫುಲೆ ಅವರ ಶಿಕ್ಷಣ ಕ್ರಾಂತಿ ಕಾರಣ

ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಅಭಿಮತ

ಮೈಸೂರು,ಜ.8(ಎಂಟಿವೈ)– ಶಿಕ್ಷಣದಿಂದ ವಂಚಿತರಾಗಿ ದೌರ್ಜನ್ಯಕ್ಕೆ ಒಳಗಾಗಿದ್ದ ಸಮುದಾಯಕ್ಕೆ ಸಾವಿತ್ರಿ ಬಾಯಿ ಫುಲೆ ಶಿಕ್ಷಣ ಕೊಡಿಸಲು ಮಾಡಿದ ತ್ಯಾಗ ಅಪರಿಮಿತ ಎಂದು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ವಿಶ್ವಜ್ಞಾನಿ ಡಾ.ಬಿ.ಆರ್.ಅಂಬೇಡ್ಕರ್ ಜನಸೇವಾ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಸಾವಿತ್ರಿ ಬಾಯಿ ಫುಲೆ ಜನ್ಮದಿನ ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶತಮಾನಗಳಿಂದ ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದ ಮಹಿಳೆಯರಿಗೆ ಶಿಕ್ಷಣ ಕೊಡಿಸಲು ಶ್ರಮಿಸಿದರು. ಶಿಕ್ಷಣ ಕ್ಷೇತ್ರದಲ್ಲಿ ಸಾವಿತ್ರಿ ಬಾಯಿ ಫುಲೆ ಅವರ ಕ್ರಾಂತಿ ಭಾರತದ ಪ್ರಗತಿಗೆ ಕಾರಣವಾಯಿತು. ಸಾಮಾಜಿಕ ಕಟ್ಟುಪಾಡು ಮೀರಿ ಜನರ ಸಾಕ್ಷರತೆಗಾಗಿ ದುಡಿದ ಅವರ ವ್ಯಕ್ತಿತ್ವ ಸ್ಮರಣೀಯ ಎಂದು ತಿಳಿಸಿದರು.

ಅನಕ್ಷರಸ್ಥರ ಹೃದಯದಲ್ಲಿ ಶಿಕ್ಷಣದ ಬೀಜ ಬಿತ್ತಿದವರು ಫುಲೆ ದಂಪತಿಗಳು. ಹಲವು ಸಂಕಷ್ಟ ಗಳನ್ನು ಎದುರಿಸಿ ಮಹಿಳೆಯರ ಶಿಕ್ಷಣಕ್ಕೆ ಒತ್ತು ನೀಡಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ವಿಶ್ವಜ್ಞಾನಿ ಡಾ.ಬಿ.ಆರ್.ಅಂಬೇಡ್ಕರ್ ಜನಸೇವಾ ಪ್ರತಿಷ್ಠಾನದ ವತಿಯಿಂದ ಸೋಮವಾರ ಆಯೋಜಿಸಿದ್ದ ಸಾವಿತ್ರಿ ಬಾಯಿ ಫುಲೆ ಜನ್ಮದಿನ ಕಾರ್ಯಕ್ರಮದಲ್ಲಿ ವಿಶ್ವೇಶ್ವರನಗರದ ಭವಾನಿಸ್ವಾಮಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕಿ ಎಂ.ಎನ್.ಯಶೋಧಾ, ಅಕ್ಕನ ಬಳಗದ ಮಹಾದೇವಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕಿ ಎಂ.ಜಿ.ಸುಗುಣಾವತಿ ಅವರಿಗೆ ಸಾವಿತ್ರಿ ಬಾಯಿ ಫುಲೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸಾವಿತ್ರಿಬಾಯಿ ಫುಲೆ ಅವರ ಕಾಲದಲ್ಲಿ ಅಸ್ಪೃಶ್ಯತೆ ಆಚರಣೆ ಪ್ರಬಲವಾಗಿತ್ತು. ಬಾಲ್ಯ ವಿವಾಹ ಪದ್ಧತಿ ಜಾರಿಯಲ್ಲಿತ್ತು. ಮಹಿಳೆಯರು ಮನೆಯಿಂದ ಹೊರ ಬರುವುದಕ್ಕೆ ನಿರ್ಬಂಧ ಹೇರಲಾಗಿತ್ತು. ಜ್ಯೋತಿ ಬಾಫುಲೆ ಅವರ ತಂದೆ ಶಿಕ್ಷಣ ಕೊಡಿಸಲು ಪ್ರೋತ್ಸಾಹಿಸಿದ ಕಾರಣ ಅಹಮದಾಬಾದ್‌ನಲ್ಲಿ ಮೊದಲ ಶಿಕ್ಷಕಿ ಪದವಿ ಪಡೆದು, ಮೊದಲ ದಲಿತ ಮಹಿಳಾ ಶಾಲೆಯನ್ನು ಆರಂಭಿಸಿದರು. ಸಮಾಜದ ವಿರೋಧದ ನಡುವೆಯೂ ಹೆಣ್ಣು ಮಕ್ಕಳು ಹಾಗೂ ಅಕ್ಷರ ವಂಚಿತ ರಿಗಾಗಿ 18 ಶಾಲೆಗಳನ್ನು ಸ್ಥಾಪಿಸಿದರು ಎಂದರು.

ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಮಾತನಾಡಿ, ಈ ಹಿಂದೆ ಭಾರತದಲ್ಲಿ ಆಚರಣೆಯಲ್ಲಿದ್ದ ಜಾತಿ, ಲಿಂಗ ಆಧಾರಿತವಾಗಿ ಶಿಕ್ಷಣ ವ್ಯವಸ್ಥೆ ವಿರುದ್ಧ ಸಾವಿತ್ರಿ ಬಾಯಿ ಫುಲೆ ಹೋರಾಟ ಮಾಡಿದರು. ಕೆಲವರಿಗೆ ಮಾತ್ರ ಸೀಮಿತವಾಗಿದ್ದ ಶಿಕ್ಷಣವನ್ನು ಮಹಿಳೆಯರು ಹಾಗೂ ದೌರ್ಜನ್ಯಕ್ಕೊಳಗಾಗಿದ್ದ ಸಮುದಾಯಕ್ಕೂ ದೊರಕುವಂತೆ ಮಾಡಿದರು. ಇಂದು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಸಾವಿತ್ರಿ ಬಾಯಿ ಫುಲೆ ಹೆಸರಿನಲ್ಲಿ ಮರು ರೂಪಿಸುವ ಅಗತ್ಯವಿದೆ. ಆ ಮೂಲಕ ಗುಣಮಟ್ಟದ ಶಿಕ್ಷಣ, ಮೌಲ್ಯಯುತ ಶಿಕ್ಷಣ ನೀಡುವುದಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ವಿಶ್ವೇಶ್ವರನಗರದ ಭವಾನಿ ಸ್ವಾಮಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕಿ ಎಂ.ಎನ್.ಯಶೋಧಾ, ಅಕ್ಕನ ಬಳಗದ ಮಹಾದೇವಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕಿ ಎಂ.ಜಿ.ಸುಗುಣಾವತಿ ಅವರಿಗೆ ಸಾವಿತ್ರಿ ಬಾಯಿ ಫುಲೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕ್ ಮಾಜಿ ನಿರ್ದೇಶಕ ಎಸ್.ಆನಂದ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿ ಕುಮಾರ್, ವಿಶ್ವಜ್ಞಾನಿ ಡಾ.ಬಿ.ಆರ್. ಅಂಬೇಡ್ಕರ್ ಜನಸೇವಾ ಪ್ರತಿಷ್ಠಾನದ ಅಧ್ಯಕ್ಷ ಕೆ.ಮಹೇಶ್ ಉಪಸ್ಥಿತರಿದ್ದರು.

ವಿದೂಷಿ ಅನಘ ಪ್ರಕಾಶ್‌ರಿಂದ ಇಂದು ಭಾರತನಾಟ್ಯ ಪ್ರದರ್ಶನ



ಮೈಸೂರು, ಜ. 8– ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ಮೈಸೂರು ದಸರಾ ವಸ್ತುಪ್ರದರ್ಶನದ ಪಿ.ಕಾಳಿಂಗರಾವ್ ಗಾನ ಮಂಟಪದಲ್ಲಿ ನಾಳೆ (ಜ.9) ಸಂಜೆ 6ಗಂಟೆಗೆ ಬೆಂಗಳೂರಿನ ಐಕ್ಯಂ ಡ್ಯಾನ್ಸ್ ಅಕಾಡೆಮಿ ವತಿಯಿಂದ ವಿದೂಷಿ ಅನಘ ಪ್ರಕಾಶ್ ನೇತೃತ್ವದಲ್ಲಿ ಭರತನಾಟ್ಯ ನೃತ್ಯರೂಪಕ ಕಾರ್ಯಕ್ರಮದಲ್ಲಿ ಮುದಕರ್ತ, ಪಲ್ಲವಿ, ವರ್ಣ, ತರಣ, ಗೋವರ್ಧನ ತಿಲ್ಲನ ನೃತ್ಯರೂಪಕ ಪ್ರದರ್ಶನಗೊಳ್ಳಲಿದೆ, ಕಲಾವಿದರುಗಳಾದ ಅನಘ ಪ್ರಕಾಶ್, ರಾಹುಲ್ ಆಚಾರಿ, ಅನುಷ ಎಲ್, ಸಾತ್ವಿಗ ಸುರೇಶ್, ಅನ್ವೇಶ ಆನಂದ್, ರಿಚಾ ದುಬೆ, ಭೂಮಿಕಾ ಸತೀಶ್ ಕುಮಾರ್ ಭರತನಾಟ್ಯ ಪ್ರದರ್ಶನ ನೀಡಲಿದ್ದು, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ರಾಜೇಶ್ ಜಿ.ಗೌಡ ಉದ್ಘಾಟಿಸಲಿದ್ದಾರೆ. ಮ್ಯಾನೇಜರ್ ನಂದಕುಮಾರ್, ವೆಂಕಟೇಶ್, ಶ್ರೀನಿಧಿ ನಿರೂಪಕ ಅಜಯ್ ಶಾಸ್ತ್ರಿ ಭಾಗವಹಿಸಲಿದ್ದಾರೆ..

ಸಹಕಾರ ಸಂಘಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ತರಬೇತಿ ಆರಂಭ

ಮೈಸೂರು, ಜ.8(ಬಿಎಲ್‌ಯು)– ಸಹಕಾರ ಸಂಘಗಳಿಗೆ ಚುನಾವಣೆ ನಡೆಸುವ ಬಗ್ಗೆ ಸಹಕಾರ ಸಂಘಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಇಂದು ವಿಶೇಷ ತರಬೇತಿ ಆರಂಭಿಸಲಾಯಿತು.

ನಗರದ ಸಹಕಾರ ಭವನದಲ್ಲಿ ಇಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ ಹಾಗೂ ಸಹಕಾರ ಇಲಾಖೆ ಸಂಯುಕ್ತಾಶ್ರಮಯದಲ್ಲಿ ಆರಂಭಗೊಂಡ ವಿಶೇಷ ತರಬೇತಿ ಕಾರ್ಯಕ್ರಮವನ್ನು ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಉಪಾಧ್ಯಕ್ಷ ಬಿ.ಎನ್.ಸದಾನಂದ ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಅವರು, ಚುನಾವಣೆ ವಸ್ತು ನಿಷ್ಠವಾಗಿ, ಯಾವುದೇ ಲೋಪ ದೋಷವಿಲ್ಲದೆ ನಡೆಯಲು ಚುನಾವಣಾಧಿಕಾರಿಗಳಿಗೆ ಜ್ಞಾನ ಆಧಾರಿತ ತರಬೇತಿ ನೀಡುವುದು ಅತ್ಯವಶ್ಯ ಎಂದು ಅಭಿಪ್ರಾಯಪಟ್ಟರು

ಮುಕ್ತ ಹಾಗೂ ನ್ಯಾಯ ಸಮ್ಮತವಾಗಿ ಚುನಾವಣೆ ನಡೆದು ಪದಾಧಿಕಾರಿಗಳ ಆಯ್ಕೆಯಾದರೆ ಸಹಕಾರ ಸಂಘಗಳು ಅಭಿವೃದ್ಧಿ ಹೊಂದುತ್ತವೆ. ಈ ನಿಟ್ಟಿನಲ್ಲಿ ಪ್ರತಿಯೊಂದು ತಾಲೂಕಿನ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಇಂತಹ ತರಬೇತಿ ನೀಡಬೇಕು ಎಂದು ಹೇಳಿದರು. ಮೊದಲ ದಿನದ ತರಬೇತಿ ಕಾರ್ಯಕ್ರಮದಲ್ಲಿ ಹೆಚ್.ಡಿ. ಕೋಟೆ ಹಾಗೂ ಕೆ.ಆರ್.ನಗರ ತಾಲೂಕಿನ ಸಹಕಾರ ಸಂಘಗಳ 85 ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಚುನಾವಣಾ ಪ್ರಕ್ರಿಯೆಗಳ ಬಗ್ಗೆ ಉತ್ತರ ಕನ್ನಡ ಜಿಲ್ಲೆಯ ಸಹಕಾರ ಸಂಘಗಳ ಉಪ ನಿಬಂಧಕ ಮಂಜುನಾಥ್ ಸಿಂಗ್ ಮಾಹಿತಿ ನೀಡಿದರು. ನಾಳೆ ಹುಣಸೂರು ಮತ್ತು ಪಿರಿಯಾಪಟ್ಟಣ ತಾಲೂಕಿನ ಸಹಕಾರ ಸಂಘಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ತರಬೇತಿ ನೀಡಲಾಗುವುದು.

ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕರಾದ ಕೆ.ಈರೇಗೌಡ, ಟಿ.ರಾಮೇಗೌಡ, ವೈ.ಭೈರಪ್ಪ, ಹೆಚ್.ಎಸ್. ಪ್ರಶಾಂತ್ ತಾತಾಚಾರ್, ಸಹಕಾರ ಸಂಘಗಳ ಜಂಟಿ ನಿಬಂಧಕ ಸಿ.ಪ್ರಸಾದ್ ರೆಡ್ಡಿ, ಸಹಾಯಕ ನಿಬಂಧಕ ಅನುಸೂಯ, ಸಹಕಾರ ಅಭಿವೃದ್ಧಿ ಅಧಿಕಾರಿ ರವಿ, ಒಕ್ಕೂಟದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ.ಎಂ.ವಿಶ್ವೇಶ್ವರಯ್ಯ, ವ್ಯವಸ್ಥಾಪಕ ಪಿ.ಎಸ್.ಹರೀಶ್, ಕೆಐಸಿಎಂ ಪ್ರಾಂಶುಪಾಲ ಚಂದ್ರಶೇಖರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಸಹಕಾರ ಭವನದಲ್ಲಿ ಸೋಮವಾರ ಚುನಾವಣೆ ನಡೆಯುವ ಬಗ್ಗೆ ಸಹಕಾರ ಸಂಘಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಆಯೋಜಿಸಿದ್ದ ವಿಶೇಷ ತರಬೇತಿ ಕಾರ್ಯಕ್ರಮವನ್ನು ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಉಪಾಧ್ಯಕ್ಷ ಬಿ.ಎನ್.ಸದಾನಂದ ಉದ್ಘಾಟಿಸಿದರು.

ವಿವೇಕಾನಂದ ಜಯಂತಿ ಅಂಗವಾಗಿ ವಿವೇಕ ಕಲಾ ಹಬ್ಬದಲ್ಲಿ ಚಿತ್ರಕಲಾ ಸ್ಪರ್ಧೆ

ಮನುಕುಲಕ್ಕೆ ವಿವೇಕಾನಂದರ ಕೊಡುಗೆ ಅಮೂಲ್ಯ

ನೈಪುಣ್ಯ ಶಾಲೆ ಮುಖ್ಯಸ್ಥರು ಆದ ಬಿಜೆಪಿ ರಾಜ್ಯ ಹಿಂದುಳಿದ ವರ್ಗಗಳ ಅಧ್ಯಕ್ಷ ಆರ್.ರಘು ಕೌಟಿಲ್ಯ ಅಭಿಮತ



ಮೈಸೂರಲ್ಲಿ ಸ್ವಾಮಿ ವಿವೇಕಾನಂದ ಜಯಂತಿ ಅಂಗವಾಗಿ ವಿವೇಕ ಕಲಾ ಹಬ್ಬ ಚಿತ್ರಕಲಾ ಸ್ಪರ್ಧೆಯ ಪೋಸ್ಟರ್‌ನ್ನು ಬಿಜೆಪಿ ರಾಜ್ಯ ಹಿಂದುಳಿದ ವರ್ಗದ ಅಧ್ಯಕ್ಷ ಆರ್.ರಘು ಕೌಟಿಲ್ಯ ಬಿಡುಗಡೆ ಮಾಡಿದರು.

ಮೈಸೂರು, ಜ.8– ದೇಶಕ್ಕೆ ಸ್ವಾಮಿ ವಿವೇಕಾನಂದರ ಕೊಡುಗೆ ಅಮೂಲ್ಯವಾದದ್ದು. ಅಂತಹ ಮಹಾನ್ ವ್ಯಕ್ತಿಯ ಹೆಸರಿನಲ್ಲಿ ವಿವೇಕ ಕಲಾ ಹಬ್ಬ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಿರುವುದು ಅತ್ಯಂತ ಸ್ವಾಗತಾರ್ಹ ಸಂಗತಿ ಎಂದು ಬಿಜೆಪಿ ರಾಜ್ಯ ಹಿಂದುಳಿದ ವರ್ಗದ ಅಧ್ಯಕ್ಷ ಆರ್.ರಘು ಕೌಟಿಲ್ಯ ಹೇಳಿದರು

ಮೈಸೂರಿನ ಆರ್‌ಟಿ ನಗರದಲ್ಲಿರುವ ನೈಪುಣ್ಯ ಶಾಲೆಯಲ್ಲಿ ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಮತ್ತು ಟಿ.ಟಿ.ಎಲ್ ಸ್ವತಂತ್ರ ಪದವಿ ಪೂರ್ವ ಕಾಲೇಜು ವತಿಯಿಂದ ಸ್ವಾಮಿ ವಿವೇಕಾನಂದ ಜಯಂತಿ ಅಂಗವಾಗಿ ವಿವೇಕ ಕಲಾ ಹಬ್ಬ ಚಿತ್ರಕಲಾ ಸ್ಪರ್ಧೆಯನ್ನು ಜನವರಿ 12ರಂದು ಸರಸ್ವತಿಪುರಂನಲ್ಲಿರುವ ಟಿ.ಟಿ.ಎಲ್ ಕಾಲೇಜಿನಲ್ಲಿ ಆಯೋಜಿಸಿರುವ ವಿವೇಕ ಕಲಾ ಹಬ್ಬದ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದರು. ಇಂತಹ ಸ್ಪರ್ಧೆಗಳು ನಡೆದಾಗಲಷ್ಟೇ ನಮ್ಮ ಮಹತ್ತರವಾದ ಸಂಸ್ಕೃತಿಯನ್ನು ಉಳಿಸಿ, ಬೆಳೆಸಲು ಸಾಧ್ಯ. ಈ ಜಗತ್ತಿನಲ್ಲಿ ಅಸಾಧ್ಯ ಎನ್ನುವ ವಿಚಾರಗಳು ಯಾವುದೂ ಇಲ್ಲ. ಪ್ರಯತ್ನ, ಛಲದಿಂದ ಎಲ್ಲವನ್ನೂ ಸಾಧಿಸಲು ಸಾಧ್ಯವಿದೆ. ಸ್ವಾಮಿ ವಿವೇಕಾನಂದರು ದೇಶದ ಶಕ್ತಿ, ಯುವಜನತೆಗೆ ಸ್ಫೂರ್ತಿ. ಅಂತಹ ಚೇತನವನ್ನು ನಾವೆಲ್ಲರೂ ಬದುಕಿನಲ್ಲಿ ಸ್ಮರಿಸಬೇಕು. ಇಂದಿನ ಜಾಗತಿಕ ಯುಗದಲ್ಲಿ ಜನರು ಮಾನವೀಯ ಮೌಲ್ಯಗಳನ್ನು ಮರೆತು ಬದುಕುತ್ತಿದ್ದಾರೆ. ಯುವ ಶಕ್ತಿ ದೇಶದ ಆಸ್ತಿ. ಆದುದರಿಂದ ನಾವೆಲ್ಲರೂ ನಮ್ಮೊಳಗಿನ ವಿವೇಕವನ್ನು ಎಚ್ಚರಿಸಿ, ವಿವೇಕಾನಂದರ ಚಿಂತನೆಗಳನ್ನು ಓದಿ ತಿಳಿದು ಅದರಂತೆ ಬದುಕೋಣ ಎಂದರು.

ಜ. 12ರ ಶುಕ್ರವಾರ ಬೆಳಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆ ವರೆಗೂ ಚಿತ್ರ ಬಿಡಿಸಲು ಕಾಲಾವಕಾಶವಿರುತ್ತದೆ. ಪ್ರವೇಶ ಉಚಿತ, ಸ್ಥಳದಲ್ಲೇ ಹೆಸರು ನೋಂದಾಯಿಸಿಕೊಳ್ಳಹುದು, ಹೆಚ್ಚಿನ ವಿವರಗಳಿಗೆ 9740003619/9880752727 ಸಂಪರ್ಕಿಸಬಹುದು ಎಂದು ತಿಳಿಸಿದರು

ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಎಲ್. ರಾಜಗೋಪಾಲಾಚಾರ್ಯ, ವಕೀಲರಾದ ಶರತ್, ಬೈರತಿ ಲಿಂಗರಾಜು, ಮಿರ್ಲೆ ಪನೀಶ್, ನಾಗೇಂದ್ರ ಬಾಬು, ಇನ್ನಿತರರು ಹಾಜರಿದ್ದರು.

ಆರಾಧ್ಯ ಸ್ನೇಹ ಬಳಗದಿಂದ ರಾಜ್ಯಮಟ್ಟದ ಕ್ರಿಕೆಟ್ ಪಂದ್ಯಾವಳಿ



ಮೈಸೂರು, ಜ.8–ಮೈಸೂರು ಜೆ.ಪಿ.ನಗರದಲ್ಲಿರುವ ಪುಟ್ಟರಾಜು ಗವಾಯಿ ಕ್ರೀಡಾಂಗಣದಲ್ಲಿ ಆರಾಧ್ಯ ಸ್ನೇಹ ಬಳಗದ ವತಿಯಿಂದ ರಾಜ್ಯಮಟ್ಟದ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸಲಾಗಿತ್ತು.


ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಸಮಾಜ ಸೇವಕ ಮತ್ತು ಆರಾಧ್ಯ ಮಹಾಸಭಾ ನಿರ್ದೇಶಕ ಪುಟ್ಟಬುದ್ಧಿಯವರು ಚಾಲನೆ ನೀಡಿ ಮಾತನಾಡಿ, ಕ್ರೀಡೆಯು ಮನುಷ್ಯನ ಮನಸ್ಸು ಮತ್ತು ಆರೋಗ್ಯವನ್ನು ಸಮತೋಲನದಲ್ಲಿಡುತ್ತದೆ. ಪ್ರತಿನಿತ್ಯವೂ ಕ್ರೀಡಾಚಟುವಟಿಕೆಗಳಲ್ಲಿ ಭಾಗವಹಿಸುವುದು ಒಳ್ಳೆಯ ಬೆಳವಣಿಗೆ. ಏಕೆಂದರೆ ಇಂದು ನಾವು ರಾಸಾಯನಿಕಯುಕ್ತ ಆಹಾರ ಪದಾರ್ಥಗಳನ್ನು ಸೇವಿಸುತ್ತಿದ್ದೇವೆ. ಇದರಿಂದ ಹತ್ತಾರು ಕಾಯಿಲೆಗಳು ಮನುಷ್ಯನಿಗೆ ಬರತೊಡಗಿವೆ. ರೋಗದಿಂದ ದೂರವಿರಬೇಕಾದರೆ ವ್ಯಾಯಾಮ ಅತ್ಯಗತ್ಯ. ಮನುಷ್ಯನಿಗೆ ದೈಹಿಕ ಆರೋಗ್ಯ ಮುಖ್ಯ. ದೇಹವನ್ನು ದಂಡಿಸಿ, ವ್ಯಾಯಾಮ, ಯೋಗ, ಧ್ಯಾನದಲ್ಲಿ ತೊಡಗಿದಾಗ ಮಾತ್ರ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಎಂದು ತಿಳಿಸಿದರು. ಆರಾಧ್ಯ ಸ್ನೇಹಬಳಗದ ಗೌರವ ಅಧ್ಯಕ್ಷರಾದ ಮಲ್ಲಿಕಾರ್ಜುನ ಅವರು ಮಾತನಾಡಿದರು. ವೇದಿಕೆಯಲ್ಲಿ ಆರಾಧ್ಯ ಮಹಾಸಭಾ ಹಾಗೂ ಸ್ನೇಹ ಬಳಗದ ಮುಖಂಡರಾದ ರವಿಕುಮಾರ್, ಸುನಿಲ್‌ಕುಮಾರ್, ಅನು ಆರಾಧ್ಯ, ಅಶೋಕಾರಾಧ್ಯ, ಮಧು ಆರಾಧ್ಯ ಉಪಸ್ಥಿತರಿದ್ದರು. ಬೆಳಗಿನಿಂದ ನಡೆದ ಈ ರಾಜ್ಯಮಟ್ಟದ ಕ್ರೀಡಾಸ್ಪರ್ಧೆಯಲ್ಲಿ ಒಟ್ಟು ಎಂಟು ತಂಡಗಳು ಭಾಗವಹಿಸಿದ್ದು, ಪ್ರಥಮ ಬಹುಮಾನವನ್ನು ಸತತವಾಗಿ ಎರಡನೇ ಬಾರಿ ಹೆಚ್.ಡಿ.ಕೋಟೆ ತಾಲೂಕಿನ ಭೀಮನಹಳ್ಳಿಯ ಅಪ್ಪು ಬಾಯ್ಸ್ ಕ್ರಿಕೆಟ್ ತಂಡ 25,000 ರೂ. ನಗದು ಬಹುಮಾನವನ್ನು ಪಡೆದುಕೊಂಡು, ಪರ್ಯಾಯ ಪಾರಿತೋಷಕವನ್ನು ತನ್ನ ದಾಗಿಸಿಕೊಂಡಿತು. ದ್ವಿತೀಯ ಬಹುಮಾನವಾಗಿ ರನ್ನರ್ಸ್ ತಂಡ ಮೈಸೂರಿನ ಪವರ್ ಹಿಟ್ಟರ್ಸ್ ತಂಡ 15,000 ರೂ. ನಗದು ಬಹುಮಾನ ಹಾಗೂ ಪಾರಿತೋಷಕವನ್ನು ಪಡೆದುಕೊಂಡಿತು. ಕ್ರಿಕೆಟ್ ಪಂದ್ಯಾವಳಿ ಗಳನ್ನು ಅಂಪೈರ್‌ಗಳಾದ ಎಡ್ವಿನ್ ಪ್ರೇಮಕುಮಾರ್ ಹಾಗೂ ಗೌತಮ್ ನೆರವೇರಿಸಿಕೊಟ್ಟರು.

ನಾಳೆ ಶ್ರೀ ಶಿವರಾತ್ರೀಶ್ವರರ ಜಯಂತಿ

ಮೈಸೂರು, ಜ. 8–ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1064ನೇ ಜಯಂತಿಯನ್ನು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜ.10 ರಂದು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ದಿವ್ಯಸಾನ್ನಿಧ್ಯದಲ್ಲಿ, ಸರಳವಾಗಿ ಆಚರಿಸಲಾಗುವುದು.

ಪ್ರಾತಃಕಾಲ 3 ಗಂಟೆಗೆ ಕರ್ತೃ ಗದ್ದುಗೆಯಲ್ಲಿ ರುದ್ರಾಭಿಷೇಕ, ಸಹಸ್ರನಾಮಾವಳಿ, ಶಿವಾಷ್ಟೋತ್ತರ ಶಿವರಾತ್ರೀಶ್ವರ ಅಷ್ಟೋತ್ತರ ಇತ್ಯಾದಿ ವಿಶೇಷ ಪೂಜೆಗಳು ಹಾಗೂ ಆದಿಜಗದ್ಗುರುಗಳವರ ಉತ್ಸವಮೂರ್ತಿಗೆ ಷೋಡಶೋಪಚಾರ ಪೂಜೆ ನೆರವೇರುತ್ತದೆ. ಬೆಳಗ್ಗೆ 9 ಗಂಟೆಗೆ ಉತ್ಸವಮೂರ್ತಿಯನ್ನು ಗದ್ದುಗೆಯಿಂದ ಶ್ರೀಮಠಕ್ಕೆ ಬಿಜಯಂಗೈಸಲಾಗುತ್ತದೆ. 9.30 ಗಂಟೆಗೆ ಸಾಲಂಕೃತ ರಥದಲ್ಲಿ ಮೆರವಣಿಗೆ ಹೊರಟು ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಸಾಗಿ ಶ್ರೀಮಠವನ್ನು ತಲುಪುತ್ತದೆ. ಬೆಳಗ್ಗೆ 9 ಗಂಟೆಗೆ ಜೆಎಸ್‌ಎಸ್ ಕಲಾ ಮಂಟಪ ಹಾಗೂ ಶ್ರೀಕ್ಷೇತ್ರದ ಉಚಿತ ಶಾಲೆಯ ವಿದ್ಯಾರ್ಥಿಗಳಿಂದ ಗಾಯನ ಏರ್ಪಡಿಸಲಾಗಿದೆ. 10.30ಕ್ಕೆ ವಿವಿಧ ಪ್ರಶಸ್ತಿಗಳ ಪುರಸ್ಕೃತರಾಗಿರುವ ಗಣ್ಯರನ್ನು ಸನ್ಮಾನಿಸಲಾಗುವುದು.

ಇದೇ ಸಂದರ್ಭದಲ್ಲಿ ಜ್ಯೋತಿಷ ಮಹಾಮಹೋಪಾಧ್ಯಾಯ ಸಿದ್ಧಾಂತಿ ಡಾ. ಕೆಜಿ. ಪುಟ್ಟಹೊನ್ನಯ್ಯನವರು ಸಿದ್ಧಪಡಿಸಿ ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರದಿಂದ ಪ್ರಕಟಿಸಿ ರುವ ಶ್ರೀ ಕ್ರೋಧಿ ಸಂವತ್ಸರದ ಸುತ್ತೂರು ಶ್ರೀ ಶಿವರಾತ್ರೀಶ್ವರ ಪಂಚಾಂಗ' ಮತ್ತು ಜೆಎಸ್‌ಎಸ್ ಮಹಾವಿದ್ಯಾಪೀಠದ ಕನ್ನಡ ಮತ್ತು ಇಂಗ್ಲಿಷ್ ಟೇಬಲ್ ಕ್ಯಾಲೆಂಡರ್ ಗಳು ಹಾಗೂ ಬೆಂಗಳೂರು ಶ್ರೀ ಚೈತನ್ಯ ಶಾಲೆಯ ವಿದ್ಯಾರ್ಥಿನಿ ಕು. ಕೆ. ನೇತ್ರಾ ಪರ್ಲ್‌ಸನ್‌ರವರು ರಚಿಸಿರುವ ಒನ್ ಮೈಂಡ್ ಗೇಮ್ ಕೃತಿಯನ್ನು ಬಿಡುಗಡೆ ಮಾಡಲಾಗುವುದು. ಶಿವದೀಕ್ಷೆ–ಲಿಂಗ ದೀಕ್ಷೆ ಪಡೆ ಯಲಿಚ್ಛಿಸುವವರು ಜನವರಿ 9ರಂದು ಮಂಗಳವಾರ ಸಂಜೆ ಶ್ರೀಕ್ಷೇತ್ರಕ್ಕೆ ಬಂದು ಹೆಸರು ನೋಂದಾಯಿಸಿಕೊಳ್ಳಬೇಕು. ಭಕ್ತಾದಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಶ್ರೀಗುರು ಕೃಪೆಗೆ ಪಾತ್ರರಾಗಬೇಕೆಂದು ಕೋರಲಾಗಿದೆ.



ಕ್ರೀಡೆಯಿಂದ ವಿದ್ಯಾರ್ಥಿಗಳು ವಿಶ್ವ ಮಾನವರಾಗಬಹುದು

ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ



ಮೈಸೂರು, ಜ. 8– ಕ್ರೀಡೆ ವಿದ್ಯಾರ್ಥಿಗಳ ಜೀವನದ ಬಹುಮುಖ್ಯ ಅಂಶ. ಶಿಕ್ಷಣ ಮತ್ತು ಆಧ್ಯಾತ್ಮ ಬೇರೆ ಅಲ್ಲ, ಅದರಲ್ಲಿ ಕ್ರೀಡೆಯೂ ಒಂದು. ಈ ಮೂರೂ ಸಮರ್ಪಕವಾಗಿ ಮಕ್ಕಳಲ್ಲಿ ಬೆರೆತರೆ ಅವರು ವಿಶ್ವಮಾನವರಾಗುತ್ತಾರೆ ಎಂದು ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಮಕ್ಕಳಿಗೆ ವಿಶ್ವಮಾನವ ಸಂದೇಶವನ್ನು ಮನವರಿಕೆ ಮಾಡಿಕೊಟ್ಟರು.

ಮಕ್ಕಳು ಓದಿನ ಜೊತೆಗೆ ಕ್ರೀಡೆಯಲ್ಲೂ ಆಸಕ್ತಿ ಬೆಳೆಸಿಕೊಂಡರೆ ಆರೋಗ್ಯ, ದೈಹಿಕ ಸದೃಢತೆ ಕಾಪಾಡಿಕೊಳ್ಳಬಹುದು ಎಂದು ಅಂತಾರಾಷ್ಟ್ರೀಯ ಅಥ್ಲೀಟ್ ಹಾಗೂ ತರಬೇತುದಾರರಾದ ಶ್ರೀಮತಿ ರೀನಾ ಜಾರ್ಜ್ ಅಭಿಪ್ರಾಯಪಟ್ಟರು. ನಗರದ ಹರಿ ವಿದ್ಯಾಲಯದ ವತಿಯಿಂದ ಅಲಯನ್ಸ್ ಸ್ಕ್ವೇರ್, ಎಂಡಿಎಎ, ಡಿಕ್ಯಾತಲಾನ್, ಸುಯೋಗ್ ಆಸ್ಪತ್ರೆ, ಎಸ್ಟ್ರಾನ್ಸ್ ಮತ್ತು ಸುಮೇಧ ವಿತರಕರ ಸಹಯೋಗದಲ್ಲಿ ಹರಿ ವಿದ್ಯಾಲಯದ ಶಾಲೆಯ ಆವರಣದಲ್ಲಿ ಆಯೋಜಿಸಿದ್ದ ವಿದ್ಯಾರ್ಥಿ ರನ್ ಎರಡನೇ ಆವೃತ್ತಿ ರಸ್ತೆ ಓಟದ ಸ್ಪರ್ಧೆಗೆ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿ ದೆಸೆಯಲ್ಲಿ ಓದಿನ ಜೊತೆಗೆ ಕ್ರೀಡೆಯಲ್ಲಿ ತೊಡಗಿಕೊಳ್ಳುವುದು ಸಹ ಬಹಳ ಮುಖ್ಯ. ಈ ದಿನದ ಕಾರ್ಯಕ್ರಮದಲ್ಲಿ ಇಷ್ಟೊಂದು ವಿದ್ಯಾರ್ಥಿಗಳು ಸೇರಿರುವುದನ್ನು ನೋಡಿದರೆ ಸಂತಸವಾಗುತ್ತದೆ. ಪೋಷಕರು ಮಕ್ಕಳಿಗೆ ಕ್ರೀಡೆಯಲ್ಲಿ ತೊಡಗಿಕೊಳ್ಳುವಂತೆ ಉತ್ತೇಜಿಸಬೇಕು. ಕೆಲವರು ಅದರಿಂದಲೇ ಬದುಕು ರೂಪಿಸಿಕೊಳ್ಳುತ್ತಾರೆ, ಸಾಧನೆ ಮಾಡುತ್ತಾರೆ. ಅದರಲ್ಲಿ ದೈಹಿಕ ಶಿಕ್ಷಕರು ಹಾಗೂ ಪೋಷಕರ ಪಾತ್ರ ಬಹಳ ಮುಖ್ಯ ಎಂದು ಹೇಳಿದರು.

ಹರಿ ವಿದ್ಯಾಲಯದ ಕಾರ್ಯದರ್ಶಿ ಎಚ್.ಆರ್.ಭಗವಾನ್ ಮಾತನಾಡಿ, ವಿದ್ಯಾರ್ಥಿ ರನ್ ಅನ್ನು ಎರಡನೇ ಬಾರಿಗೆ ಆಯೋಜಿಸಲಾಗಿದೆ. ಈ ಬಾರಿ ಬಂದಿರುವ ಪ್ರತಿಕ್ರಿಯೆ ನೋಡಿ ನಮಗೆ ಬಹಳ ಸಂತಸವಾಗಿದೆ. ಸುಮಾರು 400 ಹೆಚ್ಚು ಸ್ಪರ್ಧಾಳುಗಳು ರಸ್ತೆ ಓಟದ ಸ್ಪರ್ಧೆಯಲ್ಲಿ ಭಾಗಿಯಾಗಿರುವುದನ್ನು ನೋಡಿ ಖುಷಿಯಾಗಿದೆ. ಇನ್ನು ಮುಂದೆ ಪ್ರತಿವರ್ಷ ಈ ಕಾರ್ಯಕ್ರಮ ಮಾಡುತ್ತೇವೆ. ಇದಕ್ಕೆ ಎಲ್ಲರ ಸಹಕಾರ ಮುಖ್ಯ ಎಂದು ಹೇಳಿದರು.

ಆಡಳಿತ ಮಂಡಳಿ ಸದಸ್ಯರು, ದೈಹಿಕ ಶಿಕ್ಷಣ ನಿರ್ದೇಶಕ ಶ್ರೀಕಾಂತ್, ಸಿಬ್ಬಂದಿ ವರ್ಗದವರು ಮತ್ತು ಸುಮಾರು 50 ಶಾಲೆಗಳ ವಿದ್ಯಾರ್ಥಿಗಳು, ಅವರ ಪೋಷಕರು ಕಾರ್ಯಕ್ರಮದಲ್ಲಿ ಹಾಜರಿದ್ದರು.

'ಸೋಮಶ್ರೀ' ಪ್ರಶಸ್ತಿ ಪ್ರದಾನ



ಮೈಸೂರು, ಜ. 8– ಶ್ರೀ ಉಮಾಮಹೇಶ್ವರ ನೃತ್ಯ ಕಲಾಕ್ಷೇತ್ರ ಟ್ರಸ್ಟ್ ಸಂಸ್ಥೆಯ ಸಂಸ್ಥಾಪಕರಾದ ಕರ್ನಾಟಕ ಕಲಾಶ್ರೀ ನಾಟ್ಯಚಾರ್ಯ ಟಿ.ಎಸ್.ಸೋಮಶೇಖರ್ ಸಂಸ್ಮರಣಾರ್ಥ ಆಯೋಜಿಸಲಾಗಿದ್ದ 'ನೃತ್ಯ ಸಮರ್ಪಣಾ–2024' ನೃತ್ಯ ವೈಭವ ಭರತನಾಟ್ಯ ಕಾರ್ಯಕ್ರಮವು ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ನಡೆಯಿತು.

ಕಾರ್ಯಕ್ರಮದಲ್ಲಿ ಸಂಸ್ಥೆಯ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು 'ನೃತ್ಯ ವೈಭವ' ಎಂಬ ಶೀರ್ಷಿಕೆಯಲ್ಲಿ ಮಾರ್ಗಂ ಭರತನಾಟ್ಯ ಕಾರ್ಯಕ್ರಮದಲ್ಲಿ 9 ಬಗೆಯ ನೃತ್ಯವನ್ನು ಪ್ರದರ್ಶಿಸಿದರು. ವಿದೂಷಿ. ಶಾರಿಕಾ ಕೌಶಿಕ್‌ರವರು ದುರ್ಗೆ ದುರ್ಗೆ ಕೃತಿಗೆ ಅಭಿನಯಿಸಿ ಎಲ್ಲರ ಮೆಚ್ಚುಗೆ ಗಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರೊಫೆಸರ್ ಬಿ.ಜಯಪ್ರಕಾಶ್‌ಗೌಡ ಮಾತನಾಡಿ, ಸೋಮಶೇಖರ್ ಅವರು ಹೆಚ್ಚು ನೃತ್ಯ ಕಲೆ ಪ್ರಚಾರದಲ್ಲಿಲ್ಲದ ಸಂದರ್ಭದಲ್ಲಿ ಮಂಡ್ಯದಲ್ಲಿ ಮೊದಲು ನೃತ್ಯ ಸಂಸ್ಥೆ ತೆರೆದು ಹಲವಾರು ವಿದ್ಯಾರ್ಥಿಗಳಿಗೆ ಕಲೆಯನ್ನು ಧಾರೆ ಎರೆದರು ಎಂದು ಸೋಮಶೇಖರ್ ಅವರ ಸಾಧನೆಯನ್ನು ನೆನೆದರು. ಡಾ.ಮಾಣಿಕ್ ಬಂಗೇರಿ ಸಂಸ್ಥೆಯ ಬಗೆಗೆ ಮೆಚ್ಚುಗೆಯ ಮಾತುಗಳನ್ನಾಡಿದರು. ತದನಂತರ ಪ್ರಾಧ್ಯಾಪಕರು ಮತ್ತು ಫೈನ್ ಆರ್ಟ್ಸ್ ಕಾಲೇಜು, ನೃತ್ಯ ವಿಭಾಗದ ಮುಖ್ಯಸ್ಥ ಕರ್ನಾಟಕ ಕಲಾಶ್ರೀ ಟಾ. ಕೆ.ಕುಮಾರ್ ಹಾಗೂ ರಾಸವೃಂದ ಸ್ಕೂಲ್ ಆಫ್ ಡ್ಯಾನ್ಸ್ ನಿರ್ದೇಶಕ ಡಾ. ರೋಹಿತ ಈಶ್ವರ್ ಅವರಿಗೆ "ಸೋಮಶ್ರೀ" ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ನೃತ್ಯ ವೈಭವ ಕಾರ್ಯಕ್ರಮಕ್ಕೆ ಸಹಕಾರ ನೀಡಿದವರು ಹಾಡುಗಾರಿಕೆಯಲ್ಲಿ ಬೆಂಗಳೂರಿನ ವಿದ್ವಾನ್ ರಾಜಮಾನ್ಯ ನಟುವಾಂಗದಲ್ಲಿ, ಗುರು ವಿದೂಷಿ ಶ್ರೀಲಕ್ಷ್ಮಿ ಕುಮಾರ್ ಮೃದಂಗದಲ್ಲಿ, ವಿದ್ವಾನ್ ಹೆಚ್.ಎಲ್ ಶಿವಶಂಕರ ಸ್ವಾಮಿ ಕೊಳಲಿನಲ್ಲಿ, ವಿದ್ವಾನ್ ರಾಜೇಶ್ ಹಾಗೂ ರಿದಮ್ ಪ್ಯಾಡ್‌ನಲ್ಲಿ ಹೆಚ್.ಎಲ್ ಅನಂತ ಕೃಷ್ಣ ಸಹಕಾರ ನೀಡಿದರು. ಶ್ರೀಲಕ್ಷ್ಮಿ ಕುಮಾರ್ ಸ್ವಾಗತಿಸಿದರು. ಡಾ. ದೀಪಿಕಾ ಪಾಂಡುರಂಗಿ ಕಾರ್ಯಕ್ರಮ ನಿರೂಪಿಸಿದರು.



ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಸಹ ಕಾರ್ಯದರ್ಶಿ ಹಾಗೂ ಶ್ರೀ ಸಿದ್ಧಿವಿನಾಯಕ ಗ್ರೂಪ್ ಗೌರವಾಧ್ಯಕ್ಷರಾಗಿದ್ದ ದಿವಂಗತ ದಾಸನಕೊಪ್ಪಲು ಜಯರಾಮು ಅವರಿಗೆ ಶ್ರೀ ಸಿದ್ಧಿವಿನಾಯಕ ಗ್ರೂಪ್ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಕೆ.ಉಮಾಶಂಕರ್, ಟಿ.ಬಿ.ಚಿಕ್ಕಣ್ಣ, ಕೃಷ್ಣೆಗೌಡ, ಹರೀಶ್, ಬಾಂಡ್ ರಮೇಶ್, ಆನಂದ್, ರಮೇಶ್ ಕುಪ್ಪೆಗಾಲ, ರಾಜೇಶ್, ಕುಮಾರ್, ಬೈರೇಗೌಡ, ತಿಮ್ಮೇಗೌಡ, ರಮೇಶ್ ಚೈತ್ರಾಂಜಲಿ, ಶ್ರೀನಿವಾಸ್‌ಗೌಡ, ಲೋಕೇಶ್, ರವಿ, ಸೋಮಣ್ಣ, ಪ್ರಕಾಶ್, ಸತ್ಯನಾರಾಯಣ, ವೆಂಕಟೇಶ್ ಮತ್ತಿತರರು ಭಾಗಿಯಾಗಿದ್ದರು.

ಕಲ್ಲಡ್ಕ ಪರ ಕಾಂಗ್ರೆಸ್ ಮೃದು ಧೋರಣೆ; ಕೂಡಲೇ ಬಂಧಿಸುವಂತೆ ಎಸ್‌ಡಿಪಿಐ ಒತ್ತಾಯ

ಮೈಸೂರು, ಜ. 8– ಮುಸ್ಲಿಮರ ವಿರುದ್ಧ ಯಾವುದೇ ದೂರುಗಳು ದಾಖಲಾಗದಿದ್ದರೂ ಸಣ್ಣ ಪುಟ್ಟ ವಿಚಾರಗಳನ್ನು ಮುಂದಿಟ್ಟು ಬಂಧನ ಮಾಡುವ ಸರ್ಕಾರ, ಕಲ್ಲಡ್ಕ ಪ್ರಭಾಕರ ಭಟ್ ಅವರ ಮೇಲೆ ಹತ್ತಾರು ದೂರು ದಾಖಲಾಗಿದ್ದರೂ ಅವರನ್ನು ಬಂಧಿಸದೆ ಅವರ ಪರ ಮೃದು ಧೋರಣೆ ತೋರುವುದು ಸಾಕಷ್ಟು ಅನುಮಾನಕ್ಕೆ ಕಾರಣವಾಗಿದೆ ಎಂದು ಎಸ್‌ಡಿಪಿಐ ಮೈಸೂರು ಜಿಲ್ಲಾ ಅಧ್ಯಕ್ಷ ರಫತ್ ಖಾನ್ ಟೀಕಿಸಿದ್ದಾರೆ.

ಮೈಸೂರಿನಲ್ಲಿ ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಕೋಮುಸೌಹಾರ್ದತೆಗೆ ಧಕ್ಕೆ ತರುವ ಮತ್ತು ಮಹಿಳೆಯರನ್ನು ಅವಮಾನಿಸುವ ಬಹಿರಂಗ ಹೇಳಿಕೆ ನೀಡಿದ್ದರೂ ಸರ್ಕಾರ ಇವರ ವಿರುದ್ಧ ಕ್ರಮಕ್ಕೆ ಮುಂದಾಗಿಲ್ಲ. ಈ ಹಿಂದೆಯೂ ಪ್ರಭಾಕರ್ ಭಟ್ ಅವರು ಇಂಥದ್ದೇ ವರ್ತನೆ ತೋರಿದ್ದರು. ದೊಂಬಿ ಸೃಷ್ಟಿಸುವುದು, ಮಹಿಳೆಯರನ್ನು ಅವಮಾನಿಸುವುದು, ಧಾರ್ಮಿಕ ಭಾವನೆಗಳನ್ನು ಘಾಸಿಗೊಳಿಸುವ ಕೆಲಸ ಮಾಡಿದ್ದಾರೆ.

ಇದು ಮುಂದುವರಿದು ಹನುಮ ಜಯಂತ್ಯುತ್ಸವ ಅಂಗವಾಗಿ ಡಿಸೆಂಬರ್ 24ರಂದು ಶ್ರೀರಂಗಪಟ್ಟಣದಲ್ಲಿ ಹಿಂದೂ ಜಾಗರಣಾ ವೇದಿಕೆಯು ಆಯೋಜಿಸಿದ್ದ ಸಂಕೀರ್ತನಾ ಯಾತ್ರೆಯಲ್ಲಿ ಪ್ರಭಾಕರ್ ಭಟ್ಟರು ಮುಸ್ಲಿಮರ ವಿರುದ್ಧ ಧಾರ್ಮಿಕ ದ್ವೇಷಕಾರಿದ್ದಾರೆ. ಇವರ ವಿರುದ್ಧ ಶ್ರೀರಂಗಪಟ್ಟಣ ಟೌನ್ ಪೊಲೀಸ್ ಠಾಣೆಯಲ್ಲಿ ಐಪಿಸಿ ಸೆಕ್ಷನ್‌ಗಳಾದ 294 (ಸಾರ್ವಜನಿಕ ಸ್ಥಳದಲ್ಲಿ ಅಶ್ಲೀಲ ಮಾತುಗಳನ್ನು ಆಡುವುದು), 509 (ಮಹಿಳೆಯ ಖಾಸಗಿತನಕ್ಕೆ ಸಂಬಂಧಿಸಿದ ಮಾತುಗಳನ್ನಾಡುವುದು), 153ಎ (ಧರ್ಮದ ಆಧಾರದಲ್ಲಿ ಸಮುದಾಯಗಳ ನಡುವೆ ದ್ವೇಷ ಹರಡುವುದು) ಮತ್ತು 298 (ಉದ್ದೇಶಪೂರ್ವಕವಾಗಿ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡುವುದು) ಅಡಿ ಪ್ರಕರಣ ದಾಖಲಾಗಿದೆ. ಆದರೂ ಸರ್ಕಾರ ಇವರನ್ನು ಬಂಧಿಸುವುದಿಲ್ಲ ಎಂದು ಹೈಕೋರ್ಟ್‌ನಲ್ಲಿ ಹೇಳಿರುವುದರ ಹಿಂದಿನ ಮರ್ಮವೇನು ಎಂದವರು ಪ್ರಶ್ನಿಸಿದರು.

ಅಭಿಜಾತೆ–2024 ತೃತೀಯ ರಾಜ್ಯ ವಿಪ್ರ ಮಹಿಳಾ ಸಮ್ಮೇಳನದಲ್ಲಿ ಗೌರವ ಪ್ರದಾನ









ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಆಯೋಜಿಸಲಾಗಿದ್ದ ಅಭಿಜಾತೆ–2024 ತೃತೀಯ ರಾಜ್ಯ ವಿಪ್ರ ಮಹಿಳಾ ಸಮ್ಮೇಳನದಲ್ಲಿ ಮೈಸೂರಿನ ಗೀತಾ ಶಿಶು ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ, ಶಿಕ್ಷಣ ತಜ್ಞೆ ವನಜಾ ಬಿ.ಪಂಡಿತ್ ಅವರಿಗೆ ಧೀ ಶಕ್ತಿ ಪುರಸ್ಕಾರವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ಅಹಲ್ಯಾ ಶರ್ಮಾ ನೀಡಿ ಗೌರವಿಸಿದರು. ಸಮ್ಮೇಳನದ ಕಾರ್ಯಾಧ್ಯಕ್ಷೆ ಮೇದಿನಿ ಗರುಡಾಚಾರ್, ಸಂಚಾಲಕರಾದ ಡಾ.ಶುಭಮಂಗಳ ಸುನಿಲ್, ಉಷಾ ಹಾರನಹಳ್ಳಿ, ರೂಪಾಶಾಸ್ತ್ರಿ ಉಪಸ್ಥಿತರಿದ್ದರು. ಮೈಸೂರಿನ ವಿದುಷಿ ಡಾ.ಸುಕನ್ಯಾ ಪ್ರಭಾಕರ್, ವಿದ್ವಾನ್ ಡಾ. ಜ್ಯೋತಿಶಂಕರ್, ಮೈಸೂರಿನ ರಾಷ್ಟ್ರೀಯ ಮಹಿಳಾ ಕ್ರಿಕೆಟ್ ಆಟಗಾರ್ತಿ ಶುಭ ಸತೀಶ್ ಅವರನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವಿಪ್ರ ಮಹಿಳಾ ಸಮ್ಮೇಳನದಲ್ಲಿ ಗೌರವಿಸಲಾಯಿತು.

ಮೈಸೂರು ಮಿತ್ರ

ಸಮಸ್ಯೆಗಳಿಗೆ ಸ್ಪಂದಿಸಿ ಇಲ್ಲದಿದ್ದರೆ ಜಾಗ ಖಾಲಿ ಮಾಡಿ

ಜನಸ್ಪಂದನಾ ಸಭೆಯಲ್ಲಿ ಪುರಸಭಾಧಿಕಾರಿಗಳ ವಿರುದ್ಧ ಸಚಿವ ಕೆ.ವೆಂಕಟೇಶ್ ಕಿಡಿ

ಪಿರಿಯಾಪಟ್ಟಣ, ಜ.8– ಪಟ್ಟಣದ ಜನತೆಯ ಸಮಸ್ಯೆಗಳಿಗೆ ಸ್ಪಂದಿಸಿ ಕೆಲಸ ಮಾಡುವುದಾದರೇ ಮಾಡಿ ಇಲ್ಲದಿದ್ದರೇ ಇಲ್ಲಿಂದ ಜಾಗ ಖಾಲಿ ಮಾಡಿ ಎಂದು ಪಟ್ಟಣದ ಪುರಸಭೆ ಅಧಿಕಾರಿಗಳ ವಿರುದ್ಧ ಸಚಿವ ಕೆ.ವೆಂಕಟೇಶ್ ಕಿಡಿಕಾರಿದರು. ಪಟ್ಟಣದ ಪುರಸಭೆ ಆವರಣದಲ್ಲಿ ನಡೆದ ಜನಸ್ಪಂದನಾ ಸಭೆಯಲ್ಲಿ ಪುರಸಭೆ ಆಡಳಿತ ಹಾಗೂ ಅವ್ಯವಹಾರ ಬಗ್ಗೆ ಬಂದ ದೂರುಗಳನ್ನು ಪರಿಶೀಲಿಸಿ ಮಾತನಾಡಿದರು.

ಸಭೆಯಲ್ಲಿ ಕಾಂಗ್ರೆಸ್ ಮುಖಂಡ ಬಿ.ಎಸ್. ರಾಮಚಂದ್ರ ಮಾತನಾಡಿ, ನಾನು ಸಾರ್ವಜನಿಕ ವಲಯದಲ್ಲಿರುವ ವ್ಯಕ್ತಿ. ನಾನು ಪುರಸಭೆಗೆ ತೆರಳಿ ಖಾತೆ ಬಗ್ಗೆ ವಿಚಾರಿಸಿದರೇ ನನ್ನ ಬಳಿಯೇ ಸಿಬ್ಬಂದಿ ರಘು ಎಂಬಾತ 50 ಸಾವಿರ ಲಂಚ ಕೇಳಿದರು. ನನ್ನಂತವರಿಗೆ ಈ ರೀತಿ ಆದರೆ ಜನಸಾಮಾನ್ಯರ ಗತಿ ಏನು ಎಂದು ಅಸಮಾಧಾನ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ವೆಂಕಟೇಶ್ ಆತನನ್ನು ಈಗಾಗಲೇ ಎತ್ತಂಗಡಿ ಮಾಡಲಾಗಿದೆ ಎಂದರು.

ಪತ್ರಕರ್ತ ದೇವಣ್ಣ ಮಾತನಾಡಿ, ಕಳೆದ 27 ವರ್ಷಗಳಿಂದ ಇದ್ದ ಸರ್ಕಾರಿ ಜಾಗ ಭೂಮಿಯನ್ನು ಪುರಸಭೆಯವರು ಇತ್ತೀಚೆಗೆ ಖಾತೆ ಮಾಡಿದ್ದಾರೆ. ಇದಕ್ಕೆ ನನಗೆ ಸ್ಥಳದಲ್ಲೇ ಸಮರ್ಪಕ ಉತ್ತರ ಬೇಕು ಎಂದು ಪಟ್ಟು ಹಿಡಿದಾಗ ತಹಸೀಲ್ದಾರ್ ಕುಂಜಿ ಅಹಮ್ಮದ್ ಈ ಬಗ್ಗೆ ಕ್ರಮ ವಹಿಸುವುದಾಗಿ ತಿಳಿಸಿದರು.

ಪಟ್ಟಣದ ನಿವಾಸಿ ಅರುಣ್ ಮಾತನಾಡಿ, ಪುರಸಭೆಯಲ್ಲಿ ನೀರಿನ ಹಾಗೂ ಮನೆ ಕಂದಾಯ ಕಟ್ಟಿಸಿಕೊಂಡ ಮೇಲೆ ಲೆಡ್ಜರ್‌ನಲ್ಲಿ ಎಂಟ್ರಿ ಮಾಡಿಕೊಳ್ಳುವುದಿಲ್ಲ. ಈ ಬಗ್ಗೆ ಸಾರ್ವಜನಿಕರನ್ನು ಗೊಂದಲಕ್ಕೀಡು ಮಾಡಿ ಸುಲಿಗೆ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

14ನೇ ವಾರ್ಡ್ ನಿವಾಸಿ ಗಿರೀಶ್ ಮಾತನಾಡಿ, ನಮ್ಮ ವಾರ್ಡ್‌ನಲ್ಲಿ ಅಂಗನವಾಡಿಗೆ ಸ್ವಂತ ಕಟ್ಟಡವಿಲ್ಲ ದಯಮಾಡಿ ಆದಷ್ಟು ಅನುವು ಮಾಡಿಕೊಡಿ ಎಂದು ಮನವಿ ಮಾಡಿದರೆ, ಅದೇ ವಾರ್ಡ್‌ನ ಮುರಳಿ ನುಗ್ಗೆಹಳ್ಳಿ ರಸ್ತೆ ಅವ್ಯವಸ್ಥೆಯಿಂದ ಕೂಡಿದೆ. ಬೀದಿ ದೀಪ ಕೆಟ್ಟು ಹೋಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ವಾರ್ಡ್ ನಂ.21ರ ನಿವಾಸಿ ರಾಮಕೃಷ್ಣ ಅವರು ನಮ್ಮ ವಾರ್ಡ್‌ನಲ್ಲಿ ಸಮರ್ಪಕ ಚರಂಡಿ ವ್ಯವಸ್ಥೆ ಇಲ್ಲ. ಇದರಿಂದಾಗಿ ಮಳೆಗಾಲದಲ್ಲಿ ಚರಂಡಿ ನೀರು ಮನೆಗಳಿಗೆ ನುಗ್ಗಿ ಅವಾಂತರ ಸೃಷ್ಟಿಯಾಗುತ್ತದೆ. ಹೀಗಾಗಿ ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಪಟ್ಟಣದ ನಿವಾಸಿ ಸುರೇಶ್ ಮಾತನಾಡಿ, ಸೆಂಟ್ ಮೇರಿಸ್ ಆಸ್ಪತ್ರೆ ಪಕ್ಕ ಅನೈರ್ಮಲ್ಯ ತಾಂಡವವಾಡುತ್ತಿದೆ. ಈ ಬಗ್ಗೆ ಪುರಸಭೆ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರೇ, ರಾಜಾಪುರದ ಹೌಸಿಂಗ್ ಬೋರ್ಡ್‌ನಲ್ಲಿ ರಸ್ತೆ ಹಾಗೂ ಚರಂಡಿ ಅವ್ಯವಸ್ಥೆಯಿಂದ ಕೂಡಿದ್ದು ಪುರಸಭೆಯವರು ಮೌನ ವಹಿಸಿದ್ದಾರೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಸಚಿವರು ನಾನು ಈಗಾಗಲೇ ಗೃಹ ಮಂಡಳಿ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಅವರು ಬಡಾವಣೆ ಅಭಿವೃದ್ಧಿಗೆ ನೀಡಿದ್ದ 1.30 ಕೋಟಿ ರೂ. ಏನಾಯಿತು ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು.

ಅದೇ ರೀತಿ ಜಾಕಿ ಸುರೇಶ್ ಅವರು ನಮ್ಮ ಜಮೀನಿಗೆ ರಸ್ತೆ ಇಲ್ಲ. ಸರ್ಕಾರಿ ರಸ್ತೆಯನ್ನು ಅಕ್ಕಪಕ್ಕದವರು ಒತ್ತುವರಿ ಮಾಡಿಕೊಂಡಿದ್ದಾರೆ. ಪಟ್ಟಣದಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಇದೆ. ಬೀದಿ ನಾಯಿಗಳ ಹಾವಳಿ ಇದೆ. ತಾವರೆಕೆರೆ ಕೋಡಿ ಬಿದ್ದರೆ ಚರಂಡಿಯಿಂದ ರಸ್ತೆಗೆ ನೀರು ನುಗ್ಗುತ್ತದೆ. ಇ ಸ್ವತ್ತು ಕೇಳಿದರೇ ಅಧಿಕಾರಿಗಳು ಟೌನ್ ಪ್ಲಾನಿಂಗ್ ಕೇಳುತ್ತಾರೆ. ಅಂಗಡಿ ಮಾಲೀಕರಿಂದ ಪ್ಲಾಸ್ಟಿಕ್ ಅನ್ನು ಸೀಜ್ ಮಾಡುವ ಪುರಸಭಾಧಿಕಾರಿಗಳು ಅರ್ಧ ಬೆಲೆಗೆ ಪುನಃ ಅಂಗಡಿಯವರಿಗೆ ಮಾರಾಟ ಮಾಡುತ್ತಾರೆ. ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟ ಸೇರಿದಂತೆ ಇನ್ನಿತರ ಸಮಸ್ಯೆಗಳ ಬಗ್ಗೆ ತಿಳಿಸಿದರು.

ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿದ ಸಚಿವ ವೆಂಕಟೇಶ್ ಪುರಸಭೆಯ ಆಡಳಿತಾರೂಢರಿಗೆ ಕಡಿವಾಣ ಹಾಕಿ ನಾನು ನಿಮ್ಮ ಬೆಂಬಲಕ್ಕೆ ನಿಲ್ಲುತ್ತೇನೆ ಎಂದು ಉಪವಿಭಾಗಾಧಿಕಾರಿ ಹ್ಯಾರಿಸ್ ಸುಮೇರ್ ಅವರಿಗೆ ತಿಳಿಸಿದರು. ತಹಸೀಲ್ದಾರ್ ಕುಂಜಿ ಅಹಮದ್, ಇಓ ನವೀನ್, ಆಶ್ರಯ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್, ಪುರಸಭಾ ಮುಖ್ಯಾಧಿಕಾರಿ ಮುತ್ತಪ್ಪ, ಮಾಜಿ ಪುರಸಭಾ ಅಧ್ಯಕ್ಷ ವಿಷಕಂಠಯ್ಯ, ಸದಸ್ಯರಾದ ರೇವತಿ, ಶ್ಯಾಮ್, ಮುಖಂಡರಾದ ಡಿ.ಟಿ. ಸ್ವಾಮಿ, ರವಿ, ಪ್ರಕಾಶ್ ಸಭೆಯಲ್ಲಿ ಭಾಗವಹಿಸಿದ್ದರು.



ಪಿರಿಯಾಪಟ್ಟಣದ ಪುರಸಭೆ ಆವರಣದಲ್ಲಿ ನಡೆದ ಜನಸ್ಪಂದನಾ ಸಭೆಯಲ್ಲಿ ಸಚಿವ ಕೆ.ವೆಂಕಟೇಶ್ ಮಾತನಾಡಿದರು.

ಕಾಡಾನೆಗಳ ದಾಳಿ: ಫಸಲು ನಾಶ


ಹಂಪಾಪುರ, ಜ.8– ಕಾಡಾನೆಗಳ ದಾಳಿಗೆ ಲಕ್ಷಾಂತರ ರೂ. ಮೌಲ್ಯದ ಫಸಲು ನಾಶವಾಗಿರುವ ಘಟನೆ ಹೆಚ್.ಡಿ.ಕೋಟೆ ತಾಲೂಕಿನ ಮಾದಾಪುರ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ನಡೆದಿದೆ.

ಮಾದಾಪುರ ಗ್ರಾಪಂ ವ್ಯಾಪ್ತಿಯ ಕೊಡಳ್ಳಿ ಮರ, ಹೊಳೆಹುಂಡಿ, ಕೋಳಗಲ, ಸಿದ್ದರಾಮಯ್ಯನ ಹುಂಡಿ, ಕುಣಿಗಲ್, ಬಸಾಪುರ ಗ್ರಾಮಗಳ ರೈತರ ಜಮೀನಿನ ಮೇಲೆ ದಾಳಿ ಮಾಡಿದ ಮೂರು ಕಾಡಾನೆಗಳು ಕಳೆದ 4 ದಿನಗಳಿಂದ ಜೋಳ, ರಾಗಿ, ಭತ್ತ, ಕಬ್ಬು, ತರಕಾರಿ ಫಸಲನ್ನು ತಿಂದು ನಾಶಗೊಳಿಸಿವೆ. ಇದರಿಂದ ಕಷ್ಟಪಟ್ಟು ಫಸಲು ಬೆಳೆದ ರೈತರಿಗೆ ಲಕ್ಷಾಂತರ ರೂ.ನಷ್ಟ ಸಂಭವಿಸಿದೆ ಎನ್ನಲಾಗಿದೆ.

ಈ ಭಾಗದ ಹಳ್ಳಿಗಳಿಗೆ ಆಗಾಗ್ಗೆ ಹೆಡಿಯಾಲ ಅರಣ್ಯದಿಂದ ಕಾಡಾನೆಗಳು ಬರುತ್ತಿದ್ದು, ಅವುಗಳನ್ನು ತಡೆಯುವಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ವಿಫಲರಾಗಿದ್ದಾರೆ. ಈ ಸಂಬಂಧ ಸಾಕಷ್ಟು ಬಾರಿ ಅರಣ್ಯ ಇಲಾಖೆಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಹೀಗಾಗಿ ಸಂಬಂಧಪಟ್ಟ ಮೇಲಧಿಕಾರಿಗಳು ಈ ಸಂಬಂಧ ಕೂಡಲೇ ಕ್ರಮ ಕೈಗೊಳ್ಳಬೇಕು. ಹಾಗೂ ಫಸಲು ಕಳೆದುಕೊಂಡ ರೈತರಿಗೆ ಸೂಕ್ತ ಪರಿಹಾರ ನೀಡಬೇಕೆಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ತಾಲೂಕು ಅಧ್ಯಕ್ಷ ರಾಜೇಶ್, ರೈತ ರಾಮಚಂದ್ರ ಸೇರಿದಂತೆ ಇನ್ನಿತರರು ಒತ್ತಾಯಿಸಿದ್ದಾರೆ.

ಡಣಾಯಕನಪುರ ಡೈರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ

ಡಿ.ಎಲ್.ಮಹದೇವಪ್ಪ ಅಧ್ಯಕ್ಷ, ಶಿವರುದ್ರಮ್ಮ ಉಪಾಧ್ಯಕ್ಷೆ



ಡಣಾಯಕನಪುರ ಡೈರಿ ನೂತನ ಅಧ್ಯಕ್ಷರಾಗಿ ಡಿ.ಎಲ್.ಮಹದೇವಪ್ಪ, ಉಪಾಧ್ಯಕ್ಷೆಯಾಗಿ ಶಿವರುದ್ರಮ್ಮ ಅವಿರೋಧವಾಗಿ ಆಯ್ಕೆಯಾದರು.

ತಿ.ನರಸೀಪುರ, ಜ.8– ತಾಲೂಕಿನ ಡಣಾಯಕನಪುರ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಡಿ.ಎಲ್. ಮಹದೇವಪ್ಪ, ಉಪಾಧ್ಯಕ್ಷೆಯಾಗಿ ಶಿವರುದ್ರಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಮಹದೇವಪ್ಪ, ಉಪಾಧ್ಯಕ್ಷ ಸ್ಥಾನಕ್ಕೆ ಶಿವರುದ್ರಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಸವಿತಾ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ನಿರ್ದೇಶಕರಾದ ಸಿದ್ದಪ್ಪ ಚಿನ್ನಬುದ್ದಿ, ನೀಲಕಂಠಸ್ವಾಮಿ, ನಂಜುಂಡಸ್ವಾಮಿ, ನಾಗರಾಜು, ನಾಗಮ್ಮ, ಸುಶೀಲ, ಲಕ್ಷ್ಮಮ್ಮ ಹಾಗೂ ಸರೋಜ ಚುನಾವಣಾ ಸಭೆಯಲ್ಲಿ ಹಾಜರಿದ್ದರು.

ನೂತನ ಅಧ್ಯಕ್ಷ ಡಿ.ಎಲ್.ಮಹದೇವಪ್ಪ ಮಾತನಾಡಿ, ಡಣಾಯಕನಪುರ ಸಹಕಾರ ಸಂಘಕ್ಕೆ ನಾಲ್ಕನೇ ಬಾರಿಗೆ ನನ್ನನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಕೊಟ್ಟಿರುವ ಅವಕಾಶ ಸದುಪಯೋಗಪಡಿಸಿಕೊಂಡು ಸಹಕಾರ ಸಂಘದ ಅಭಿವೃದ್ಧಿಗೆ ಶಕ್ತಿಮೀರಿ ಪ್ರಯತ್ನಿಸುತ್ತೇನೆ. ಮುಂದಿನ 3 ತಿಂಗಳ ಅವಧಿಯಲ್ಲಿ ಡೈರಿಗೆ ನೂತನ ಕಟ್ಟಡ ಆಗಲಿದೆ ಎಂದ ಅವರು ಡಾ.ಕುರಿಯನ್ ಕಂಡಿದ್ದ ಕನಸು ರೈತರ ಮೂಲಕ ನನಸಾಗಬೇಕು. ಕ್ಷೀರ ಕ್ರಾಂತಿಯಾಗಬೇಕು. ಹೀಗಾಗಿ ಹಾಲು ಉತ್ಪಾದಕರು ಡೈರಿಗೆ ಗುಣಮಟ್ಟದ ಹಾಲು ಪೂರೈಕೆ ಮಾಡುವ ಮೂಲಕ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಪಿಎಸಿಎಸ್ ಅಧ್ಯಕ್ಷ ಮಲ್ಲಣ್ಣ ಮಾತನಾಡಿ, ಕಳೆದ ಹಲವು ವರ್ಷಗಳಿಂದ ಈ ಡೇರಿಯಲ್ಲಿ ನನ್ನ ನೇತೃತ್ವದಲ್ಲಿ ಚುನಾವಣೆ ನಡೆದಿದ್ದು, ಎಲ್ಲಾ ವರ್ಗದ ಜನತೆಗೆ ಅವಕಾಶ ಕಲ್ಪಿಸಿದ್ದೇನೆ. ಸಂಘ ಅಭಿವೃದ್ಧಿ ಹೊಂದಲು ಗುಣಮಟ್ಟದ ಹಾಲು ಪೂರೈಕೆಯಾಗಬೇಕು. ಕಳಪೆ ಹಾಲಿನಿಂದ ಸಂಘವು ನಷ್ಟ ಅನುಭವಿಸುವಂತಾಗಿದೆ. ನೂತನ ಅಧ್ಯಕ್ಷ–ಉಪಾಧ್ಯಕ್ಷರು ಜನ ಕೊಟ್ಟಿರುವ ಅಧಿಕಾರ ಬಳಸಿಕೊಂಡು ಸಂಘ ಉನ್ನತ ಸ್ಥಾನಕ್ಕೇರಲು ಪ್ರಾಮಾಣಿಕ ಪ್ರಯತ್ನ ಮಾಡುವಂತೆ ಸಲಹೆ ನೀಡಿದರು.

ಈ ವೇಳೆ ಬಿಜೆಪಿ ಮುಖಂಡ ರಾಜಬುದ್ದಿ, ಗ್ರಾಪಂ ಸದಸ್ಯ ವಸಂತ, ಬಿಲಿಗೆರೆಹುಂಡಿ ಬಸವರಾಜು, ಮಹೇಶ್, ಡಣಾಯಕನಪುರ ಸುರೇಶ್, ನಂಜಪ್ಪ(ಮಿಷನ್), ಸಂಘದ ಕಾರ್ಯದರ್ಶಿ ಗಿರೀಶ್ ಮತ್ತಿತರರಿದ್ದರು.

ಅನ್ನಪೂರ್ಣಮ್ಮ ವರದಿ ಜಾರಿಗೊಳಿಸಿ, ಮೀಸಲಾತಿ ಕಲ್ಪಿಸಿ

ಸರ್ಕಾರಕ್ಕೆ ಮಡಿವಾಳ ಸಂಘದ ತಾಲೂಕು ಅಧ್ಯಕ್ಷ ಪ್ರಸನ್ನಕುಮಾರ್ ಒತ್ತಾಯ



ಮಡಿವಾಳ ಸಂಘದ ಅಧ್ಯಕ್ಷ ಪ್ರಸನ್ನಕುಮಾರ್ ಸಂಘದ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು.

ನಂಜನಗೂಡು, ಜ.8– ಮಡಿವಾಳ ಜನಾಂಗ ಆರ್ಥಿಕ, ಸಾಮಾಜಿಕವಾಗಿ ಹಿಂದುಳಿದಿದೆ. ಜೊತೆಗೆ ಒಗ್ಗಟ್ಟಿನ ಕೊರತೆಯಿಂದಾಗಿ ರಾಜಕೀಯವಾಗಿಯೂ ಹಿಂದುಳಿದಿದೆ. ಜನಾಂಗಕ್ಕೆ ನ್ಯಾಯ ಒದಗಿಸಲು ಸರ್ಕಾರ ಅನ್ನಪೂರ್ಣಮ್ಮ ವರದಿ ಜಾರಿಗೊಳಿಸಿ ಮೀಸಲಾತಿ ಕಲ್ಪಿಸಬೇಕು ಎಂದು ಮಡಿವಾಳ ಸಂಘದ ತಾಲೂಕು ಅಧ್ಯಕ್ಷ ಪ್ರಸನ್ನಕುಮಾರ್ ಒತ್ತಾಯಿಸಿದರು.

ನಗರದ ಮಡಿವಾಳ ಸಮುದಾಯ ಭವನದ ಕಚೇರಿಯಲ್ಲಿ ನೂತನ ಕ್ಯಾಲೆಂಡರ್ ಬಿಡುಗಡೆಗೊಳಿಸಿ, ಸಮುದಾಯದ ಜಾಗೃತಿ ಸಭೆ ನಡೆಸಿ ಮಾತನಾಡಿದ ಅವರು, ಸಮುದಾಯವು ಶೈಕ್ಷಣಿಕವಾಗಿ ಹಿಂದುಳಿದಿದೆ. ಸಮುದಾಯದ ಮಕ್ಕಳು ಉನ್ನತ ಶಿಕ್ಷಣ ಪಡೆದು ಶಿಕ್ಷಿತರಾಗಬೇಕಾದರೆ ಅನ್ನಪೂರ್ಣಮ್ಮ ವರದಿ ಜಾರಿಗೊಳಿಸಿ, ನಮ್ಮ ಸಮುದಾಯವನ್ನು ಎಸ್ಸಿ ಪಟ್ಟಿಗೆ ಸೇರ್ಪಡೆ ಮಾಡಲು ಸರ್ಕಾರ ಕ್ರಮವಹಿಸಬೇಕು. ಮತ್ತು ಜಾತಿ ಜನಗಣತಿ ಆಯೋಗ ರಚಿಸಬೇಕು ಎಂದು ಒತ್ತಾಯಿಸಿದರು.

ಸಭೆಯಲ್ಲಿ ಶಿವಣ್ಣ ಕೆ.ಎಂ.ಬಸವರಾಜು, ಸೋಮಣ್ಣ, ನಾಗರಾಜು, ಮಹದೇವಸ್ವಾಮಿ, ಬಸವರಾಜು, ಸುರೇಶ್, ವೆಂಕಟೇಶ್, ಶಿವಕುಮಾರ್, ರವಿ, ಪ್ರಭುಸ್ವಾಮಿ, ಮಹದೇವಣ್ಣ ನಾರಾಯಣಸ್ವಾಮಿ, ನಂಜುಂಡ ಸೇರಿದಂತೆ ವಿವಿಧ ಗ್ರಾಮಗಳ ಸಮುದಾಯದ ಯಜಮಾನರು ಉಪಸ್ಥಿತರಿದ್ದರು.

4.5 ಕಿಮೀ ರಸ್ತೆ ಅಭಿವೃದ್ಧಿಗೆ 85.86 ಕೋಟಿ ಅನುಮೋದನೆ



ಹುಣಸೂರು, ಜ.8– ನಗರದ ಮೂಲಕ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ 275ರಲ್ಲಿ ಆಗಾಗ್ಗೆ ನಡೆಯುವ ಅಪಘಾತ ತಪ್ಪಿಸಲು ನಗರ ವ್ಯಾಪ್ತಿಯ 4.5 ಕಿಮೀ ಉದ್ದದ ರಸ್ತೆ ಅಭಿವೃದ್ಧಿಪಡಿಸಲು ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದಿಂದ 85.86 ಕೋಟಿ ರೂ. ಅನುಮೋದನೆ ದೊರೆತಿದೆ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ತಿಳಿಸಿದರು.

ಹೆದ್ದಾರಿ ಅಪಘಾತ ವಲಯದ ಸ್ಥಳ ಪರಿಶೀಲಿಸಲು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಆಗಮಿಸಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಇತ್ತೀಚೆಗೆ ನಗರದ ಆರ್‌ಟಿಓ ಕಚೇರಿ ಬಳಿ ಅಪಘಾತ ಸಂಭವಿಸಿ ಸ್ಥಳದಲ್ಲೇ ಮೂವರು ಮೃತಪಟ್ಟಿದ್ದಾರೆ. ಅದೇ ರೀತಿ ಹೆದ್ದಾರಿಯಲ್ಲಿ ಆಗಾಗ್ಗೆ ನಿರಂತರ ಅಪಘಾತಗಳು ನಡೆದು ಹಾನಿ ಸಂಭವಿಸುತ್ತಿದ್ದು, ಇದನ್ನು ನಿಯಂತ್ರಿಸಲು ಹೆದ್ದಾರಿ ಪ್ರಾಧಿಕಾರದೊಂದಿಗೆ ಚರ್ಚಿಸಿ ತಾಂತ್ರಿಕ ಸಲಹೆಗಾರರ ಮತ್ತು ತಂತ್ರಜ್ಞರ ಸೂಚನೆಯಂತೆ ನಗರದ ಎಪಿಎಂಸಿ ಜಂಕ್ಷನ್‌ನಿಂದ ಹಾಳಗೆರೆ ಬಳಿಯ ಜಂಕ್ಷನ್‌ವರೆಗೆ ಹೆದ್ದಾರಿ ಅಭಿವೃದ್ಧಿ, ಈಗಿರುವ ಸೇತುವೆ ಅಭಿವೃದ್ಧಿ ಹಾಗೂ ಮತ್ತೊಂದು ಹೊಸಸೇತುವೆ ನಿರ್ಮಾಣ ಅಭಿವೃದ್ಧಿ ಕಾಮಗಾರಿಗೆ ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದಿಂದ 4.5 ಕಿಮೀ ಉದ್ದದ ರಸ್ತೆ ಅಭಿವೃದ್ಧಿಗಾಗಿ 85.86 ಕೋಟಿ ರೂ. ಅನುಮೋದನೆ ದೊರೆತಿದೆ ಎಂದರು.

ಹೆದ್ದಾರಿ ಪ್ರಾಧಿಕಾರದ ಎಇಇ ಸದಾಶಿವಮೂರ್ತಿ ಮಾತನಾಡಿ, ಹುಣಸೂರು ನಗರ ಮಧ್ಯ ಹಾದು ಹೋಗಿರುವ ಹೆದ್ದಾರಿಯ ಲಕ್ಷ್ಮಣ ತೀರ್ಥ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆ ಅಭಿವೃದ್ಧಿ, ಮತ್ತೊಂದು ನೂತನ ಸೇತುವೆ ಹಾಗೂ ಈಗಿರುವ ರಸ್ತೆ ಬದಲಾಗಿ ನಾಲ್ಕು ಪಥದ ರಸ್ತೆ ಅಂದರೆ ರಸ್ತೆ ಮಧ್ಯದಿಂದ ಎಡಕ್ಕೆ 15 ಮೀ. ಬಲಕ್ಕೆ 15 ಮೀಟರ್ ಜೋಡಿ ರಸ್ತೆಗಳ ನಿರ್ಮಾಣ, ಸೇತುವೆಯಿಂದ ಪೂರ್ವಕ್ಕೆ ಮೈಸೂರು ಕಡೆಗೆ 2.1 ಕಿಮೀ ಹಾಗೂ ಸೇತುವೆಯಿಂದ ಪಶ್ಚಿಮಕ್ಕೆ ಪಿರಿಯಾಪಟ್ಟಣದ ಕಡೆಗೆ 2.4 ಒಟ್ಟು 4.5 ಕಿಮೀ ರಸ್ತೆ ಅಭಿವೃದ್ಧಿ, ಹೆದ್ದಾರಿಯ 2 ಬದಿ ಐದೂವರೆ ಮೀಟರ್ ಸರ್ವೀಸ್ ರಸ್ತೆಗಳು, ಸೇತುವೆ ಮೇಲೆ ಪಾದಚಾರಿಗಳ ಓಡಾಟಕ್ಕೆ ಪ್ರತ್ಯೇಕ ಪಾದಚಾರಿ ಮಾರ್ಗ ನಿರ್ಮಿಸಲಾಗುವುದು. ತಾಲೂಕು ಕಚೇರಿ ಬಳಿ ಸ್ಮಶಾನಕ್ಕೆ ಹಾಗೂ ತಾಲೂಕು ಕಚೇರಿಗೆ ಹೋಗುವ ರಸ್ತೆಗಾಗಿ ಹೆದ್ದಾರಿ ಕೆಳಗೆ ಅಂಡರ್ ಪಾಸ್ ನಿರ್ಮಿಸಲಾಗುವುದು ಎಂದರು.

ಈ ಕಾಮಗಾರಿಗೆ ಈಗಾಗಲೇ ಅನುಮೋದನೆ ದೊರೆತಿದ್ದು, ಸದ್ಯದಲ್ಲೇ ಟೆಂಡರ್ ಕರೆಯಲಾಗುವುದು. ಮುಂದಿನ 2 ತಿಂಗಳಲ್ಲಿ ಕಾಮಗಾರಿ ಪ್ರಾರಂಭವಾಗಲಿದೆ ಎಂದರು. ಈ ವೇಳೆ ಹೆದ್ದಾರಿ ಪ್ರಾಧಿಕಾರದ ಎಇ ಗುರುಮಲ್ಲಪ್ಪ, ನಗರಸಭಾ ಮಾಜಿ ಅಧ್ಯಕ್ಷ ಶಿವಕುಮಾರ್, ಸದಸ್ಯರಾದ ಹರೀಶ್, ವಿವೇಕ್, ಶಾಸಕರ ಆಪ್ತ ಸಹಾಯಕ ನಟರಾಜ್ ಸೇರಿದಂತೆ ಇನ್ನಿತರರಿದ್ದರು.

ಜನವರಿ ತಿಂಗಳು ಪೂರ್ತಿ ಕೊಠಾರೋತ್ಸವ ಕಾರ್ಯಕ್ರಮ



ತಿ.ನರಸೀಪುರ, ಜ.8– ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಾಲಯದಲ್ಲಿ ಜ.5ರಿಂದ ಕೊಠಾರೋತ್ಸವ ಕಾರ್ಯಕ್ರಮಗಳು ಸಂಜೆ 6ರಿಂದ 8ರವರೆಗೆ ನಡೆಯುತ್ತಿದ್ದು, ಈ ತಿಂಗಳ ಪೂರ್ತಿ ಉತ್ಸವ ನಡೆಯಲಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ದೇವಾಲಯಕ್ಕೆ ಆಗಮಿಸಬೇಕು ಎಂದು ಪಾರುಪತ್ತೇಗಾರರಾದ ತಿರುಮಕೂಡಲು ವಿ.ಪ್ರದೀಪ್ ತಿಳಿಸಿದ್ದಾರೆ.

ಯಾಚೇನಹಳ್ಳಿ ಪಿಎಸಿಎಸ್‌ನಲ್ಲಿ ವೈ.ಎನ್.ಶಂಕರೇಗೌಡರ ಪಾರುಪತ್ಯ

ನಿರ್ದೇಶಕರ ಚುನಾವಣೆಯಲ್ಲಿ ಗೌಡರ ಬೆಂಬಲಿಗರು ಭರ್ಜರಿ ಗೆಲುವು

ತಿ.ನರಸೀಪುರ, ಜ.8– ತಾಲೂಕಿನ ಯಾಚೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಸಂಸ್ಥಾಪಕ ಅಧ್ಯಕ್ಷ ವೈ.ಎನ್.ಶಂಕರೇಗೌಡರ ಪಾರುಪತ್ಯ ಮುಂದುವರೆದಿದ್ದು, ಚುನಾವಣೆಯಲ್ಲಿ ಗೌಡರ ಬೆಂಬಲಿಗರು ಭರ್ಜರಿ ಗೆಲುವು ಸಾಧಿಸಿದ್ದಾರೆ.

ಸಂಘದ ಒಟ್ಟು 11 ನಿರ್ದೇಶಕರ ಪೈಕಿ ಪ.ಜಾತಿಗೆ ಮೀಸಲಾಗಿದ್ದ ಸ್ಥಾನಕ್ಕೆ ಓರ್ವ ನಿರ್ದೇಶಕ ಅವಿರೋಧವಾಗಿ ಆಯ್ಕೆಯಾದರೆ, ಇನ್ನುಳಿದ 10 ಮಂದಿ ಆಯ್ಕೆಗೆ ಸಂಘದ ಆವರಣದಲ್ಲಿ ಚುನಾವಣೆ ನಡೆಯಿತು.

ಬಳಿಕ ನಡೆದ ಮತ ಎಣಿಕೆಯಲ್ಲಿ ಸಾಮಾನ್ಯ ಅಭ್ಯರ್ಥಿಯಾದ ವೈ.ಎನ್.ಶಂಕರೇಗೌಡ 461, ವೈ.ಹೆಚ್. ಹನುಮಂತೇಗೌಡ 410, ವೈ.ಜಿ.ಮಹೇಂದ್ರ 420, ವೈ.ಕೆ.ಬೋರೇಗೌಡ 370, ವೈ.ಎಂ.ಚಂದ್ರು 373, ಹಿಂದುಳಿದ 'ಎ' ವರ್ಗದ ದುರ್ಗೇಶ್ 370, ಹಿಂ.ವರ್ಗ 'ಬಿ' ರಾಜು 373, ಮಹಿಳಾ ಮೀಸಲಿನಡಿ ಕೆಂಪಮ್ಮ 376, ಹೆಚ್.ಪಿ.ಪ್ರತಿಭಾ 406 ಮತ ಪಡೆದು ಜಯ ಸಾಧಿಸಿದರೇ, ಸಾಲಗಾರರಲ್ಲದ ಕ್ಷೇತ್ರದಿಂದ ಸ್ಪರ್ಧಿಸಿದ್ದ ವೈ.ಎಂ.ನಾಗೇಂದ್ರ 267 ಮತ ಪಡೆದು ಚುನಾಯಿತರಾದರು. ಮೀಸಲು ಅಭ್ಯರ್ಥಿ ವೈ.ಎಸ್.ಶಿವರಾಮು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪ್ರತಿಸ್ಪರ್ಧಿಗಳಾದ ವೈ.ಎಸ್.ರಾಮಸ್ವಾಮಿ(248), ವೈ.ಕೆ.ಹೇಮಂತ್ ಕುಮಾರ್(274), ವೈ.ಎಸ್. ಸೋಮಶೇಖರ್(202), ವೈ.ಎಂ.ಕೃಷ್ಣ(248), ಕರಿಪುಟ್ಟಶೆಟ್ಟಿ(194), ವೈ.ಎನ್.ಗದ್ದೇಗೌಡ(257), ವೈ.ಎಸ್.ನರಸಿಂಹ(237), ವೈ.ಎಸ್.ರಶ್ಮಿ(207), ಸಾಕಮ್ಮ(188) ಸಾಲಗಾರರಲ್ಲದ ಕ್ಷೇತ್ರದ ವೈ.ಕೆ. ಕಾಂತರಾಜು(257) ಅವರು ಪರಾಭವಗೊಂಡರು.

ಸಂಘದ 670 ಷೇರುದಾರರ ಪೈಕಿ 600 ಮತದಾರರು ತಮ್ಮ ಹಕ್ಕನ್ನು ಚಲಾಯಿಸಿದರು. ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆ ಹಿರಿಯ ನಿರೀಕ್ಷಕ ಬಿ.ರಾಜು ಕಾರ್ಯ ನಿರ್ವಹಿಸಿದರು. ಚುನಾವಣೆಯಲ್ಲಿ ಶಂಕರೇಗೌಡರ ಬೆಂಬಲಿಗರು ಭರ್ಜರಿ ಗೆಲುವು ಸಾಧಿಸುತ್ತಿದ್ದಂತೆ ಕಾರ್ಯಕರ್ತರು ಹಾಗೂ ಮುಖಂಡರು ಪಟಾಕಿ ಸಿಡಿಸಿ, ವಿಜಯೋತ್ಸವ ಆಚರಿಸಿದರು.



ಯಾಚೇನಹಳ್ಳಿ ಪಿಎಸಿಎಸ್ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ ಸಂಸ್ಥಾಪಕ ಅಧ್ಯಕ್ಷ ವೈ.ಎನ್.ಶಂಕರೇಗೌಡರ ನೇತೃತ್ವದಲ್ಲಿ ಜಯಗಳಿಸಿದ ನಿರ್ದೇಶಕರು ವಿಜಯೋತ್ಸವ ಆಚರಿಸಿದರು.

ಜವಾಬ್ದಾರಿ ಹೆಚ್ಚಿಸಿದ ಸಹಕಾರಿ ಬಂಧುಗಳು

ಯಾಚೇನಹಳ್ಳಿ ಗ್ರಾಮವನ್ನು ಕೇಂದ್ರೀಕರಿಸಿ ಆರಂಭಿಸಿದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ತಾಲೂಕಿನಲ್ಲಿಯೇ ಪ್ರತಿಷ್ಠಿತ ಸಹಕಾರಿ ಸಂಸ್ಥೆಯಾಗಿ ಬೆಳೆದಿದೆ. ನಮಗೆ ಮತ್ತೊಮ್ಮೆ ಅಧಿಕಾರ ಕೊಟ್ಟಿರುವುದರಿಂದ ನಮ್ಮೆಲ್ಲರ ಜವಾಬ್ದಾರಿ ಹೆಚ್ಚಾಗಿದೆ. ಗ್ರಾಮದ ಅಭಿವೃದ್ಧಿಗೆ ಹಾಗೂ ರೈತರ ಕಲ್ಯಾಣಕ್ಕೆ ಸಹಕಾರಿ ಸಂಸ್ಥೆ ಮೂಲಕ ಶಕ್ತಿ ಮೀರಿ ಎಲ್ಲರೊಟ್ಟಿಗೆ ಶ್ರಮಿಸುತ್ತೇನೆ.

-ವೈಎನ್. ಶಂಕರೇಗೌಡ,
ಸಂಸ್ಥಾಪಕ ಅಧ್ಯಕ್ಷ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಡೆವಿಲ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸಲಾರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಟೇರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಟೇರ (ಕ)	4 ಪ್ರದರ್ಶನಗಳು
ರಾಜಕಮಲ್	
ಕಾಟೇರ (ಕ)	4 ಪ್ರದರ್ಶನಗಳು
ಸಂಗಂ	
ಸಲಾರ್ (ಕ)	4 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಟೈಗರ್–3 (ಹಿಂ)	4 ಪ್ರದರ್ಶನಗಳು
ಪ್ರಭಾ	
on line ಮದುವೆ off line ಶೋಭನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಪ್ರೇಮ ಕಥ (ತೆ): ಬೆ.10.20ಕ್ಕೆ, ಮಾಥಿಮಾರನ್ (ತ): ಮ.1.05ಕ್ಕೆ, ಸಲಾರ್–1 (ತೆ): ಮ.3.40ಕ್ಕೆ, ಕಾಟೇರ (ಕ): ರಾ.7.05ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಮ.12.05ಕ್ಕೆ, ಕಾಟೇರ (ಕ): ಮ.3.50ಕ್ಕೆ, ರಾ.10ಕ್ಕೆ, ಪ್ರೇಮ ಕಥ (ತೆ): ರಾ.7.15ಕ್ಕೆ.
ಸ್ಕ್ರೀನ್ 3	ಒಂಟಿ ಬಂಟಿ ಲವ್ ಸ್ಟೋರಿ (ಕ): ಬೆ.10.20ಕ್ಕೆ, ಡಂಕಿ (ಹಿಂ): ಮ.1.20ಕ್ಕೆ, ರಾ.7.10ಕ್ಕೆ, ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಸಂ.4.30ಕ್ಕೆ, ಆಟಂ (ಮ): ರಾ.10.15ಕ್ಕೆ.
ಸ್ಕ್ರೀನ್ 4	ಕಾಟೇರ (ಕ): ಬೆ.9.50ಕ್ಕೆ, ಮ.1.15ಕ್ಕೆ, ಸಂ.4.45ಕ್ಕೆ, ರಾ.8.30ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಕಾಟೇರ (ಕ): ಬೆ.11.30ಕ್ಕೆ, ಮ.3.10ಕ್ಕೆ, ಸಂ.6.50ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಕಾಟೇರ (ಕ): ಬೆ.10.30ಕ್ಕೆ, ಮ.2.10ಕ್ಕೆ, ಸಂ.5.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಸಲಾರ್–1 (ಕ): ಬೆ.11ಕ್ಕೆ, ಸಂ.6.10ಕ್ಕೆ, ರಾ.9.45ಕ್ಕೆ, ಸಲಾರ್ –1 (ಹಿಂ): ಮ.2.35ಕ್ಕೆ.
ಸ್ಕ್ರೀನ್ 4	ಮೈಗ್ರೇಷನ್ (3ಡಿ)(ಇಂ): ಬೆ.10.30ಕ್ಕೆ, ರಾ.7.55ಕ್ಕೆ, ಡಂಕಿ (ಹಿಂ): ಮ.12.35ಕ್ಕೆ, ಸಂ.4.35ಕ್ಕೆ, ಸಲಾರ್–1 (ಹಿಂ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, ಡಂಕಿ (ಹಿಂ): ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ನೆರು (ಮ): ರಾ.10.10ಕ್ಕೆ, ಸಲಾರ್ –1 (ಮ): ಸಂ.6.35ಕ್ಕೆ, ಸಲಾರ್–1 (ಹಿಂ): ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, ಸಲಾರ್–1 (ಕ): ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, ಸಲಾರ್– 1(ತೆ): ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಚುಂಚನಹಳ್ಳಿ ಡೇರಿಗೆ ನಿರ್ದೇಶಕರ ಅವಿರೋಧ ಆಯ್ಕೆ



ನಂಜನಗೂಡು ತಾಲೂಕಿನ ಚುಂಚನಹಳ್ಳಿ ಡೇರಿ ನಿರ್ದೇಶಕರ ಸ್ಥಾನಕ್ಕೆ ಸೋಮವಾರ ನಡೆದ ಚುನಾವಣೆಯಲ್ಲಿ 10 ಮಂದಿ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಂಜನಗೂಡು, ಜ.8– ತಾಲೂಕಿನ ಚುಂಚನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕರ ಸ್ಥಾನಕ್ಕೆ ಸೋಮವಾರ ನಡೆದ ಚುನಾವಣೆಯಲ್ಲಿ 10 ಮಂದಿ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬಿಜೆಪಿ ಬೆಂಬಲಿತ ಅಭ್ಯರ್ಥಿಗಳಾದ ಬಸಪ್ಪ ಹೇಮಪ್ಪ, ಸಿದ್ದರಾಜು, ಶಶಿಧರ್, ಮಹದೇವಪ್ಪ, ಪಿ.ಮಹದೇವಪ್ಪ, ಸಿದ್ದರಾಜು, ಮುದ್ದಮಲ್ಲಯ್ಯ, ಸುಬ್ಬಮ್ಮ, ಭಾಗ್ಯಮ್ಮ ಅವರನ್ನು ಹೊರತು ಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆ ಘೋಷಿಸಲಾಯಿತು. ಈ ವೇಳೆ ಮಾಜಿ ತಾಪಂ ಉಪಾಧ್ಯಕ್ಷ ಸಿ.ಎಂ.ಮಹದೇವಯ್ಯ, ಗ್ರಾಪಂ ಸದಸ್ಯರಾದ ರವಿಕುಮಾರ್, ಮಹದೇವ, ಮುಖಂಡರಾದ ನಾಗರಾಜು, ಮಂಜುಳಾ, ಪುಟ್ಟಪ್ಪ, ಸಿ.ಜಿ.ಮಂಜು, ರಾಜೇಂದ್ರ ಮಹದೇವಪ್ಪ ಉಪಸ್ಥಿತರಿದ್ದರು.



ವರುಣಾ ಕ್ಷೇತ್ರದ ಕೆಂಬಾಲ್ ಗ್ರಾಮದ ಶ್ರೀವೀರ ಮಡಿವಾಳ ಮಾಚಿದೇವರ ಗ್ರಾಮಾಭಿವೃದ್ಧಿ ಸಂಘದ 2024ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು. ಈ ವೇಳೆ ಹಲ್ಲಹಳ್ಳಿ ಅಧ್ಯಕ್ಷ ಚಂದ್ರು, ಸ್ವಾಮಿ, ಬೃಂದಾವನ ಬಡಾವಣೆ ಅಧ್ಯಕ್ಷ ಸಿ.ಎಸ್.ಮಹೇಶ್, ಸಂಘದ ಗೌರವಾಧ್ಯಕ್ಷ ರಮೇಶ್, ಸಂಘದ ಅಧ್ಯಕ್ಷ ಆರ್.ಶ್ರೀರಾಮ್, ಉಪಾಧ್ಯಕ್ಷ ಮೂರ್ತಿ, ಕಾರ್ಯದರ್ಶಿ ರಾಮಶೆಟ್ಟಿ, ನಿರ್ದೇಶಕರು, ಸದಸ್ಯರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥರ ಪರ್ಯಾಯಕ್ಕೆ ಹೈಕೋರ್ಟ್ ಅಸ್ತು

ಬೆಂಗಳೂರು, ಜ.8– ಉಡುಪಿ ಅಷ್ಟ ಮಠದ ಪರ್ಯಾಯ ಮಹೋತ್ಸವದಲ್ಲಿ ಪಾಲ್ಗೊಳ್ಳದಂತೆ ಪುತ್ತಿಗೆ ಮಠದ ಪೀಠಾಧಿಪತಿ ಸುಗುಣೇಂದ್ರ ತೀರ್ಥ ಅವರನ್ನು ತಡೆಯಬೇಕು ಎಂಬ ಮನವಿಯನ್ನು ಹೈಕೋರ್ಟ್ ಸಾರಾಸಗಟಾಗಿ ತಳ್ಳಿ ಹಾಕಿದೆ.



ಉಡುಪಿ ಅಷ್ಟ ಮಠದ ಪರ್ಯಾಯ ಮಹೋತ್ಸವ ಆಯೋಜನೆಗೆ ಮಾರ್ಗಸೂಚಿ ಅಥವಾ ಬೈಲಾ ರೂಪಿಸಲು ಸಮಿತಿ ರಚಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಕೋರಿ ಸೋದೆ ಮತ್ತು ಕೃಷ್ಣಾಪುರ ಮಠದ ಭಕ್ತರೂ ಆದ ದಕ್ಷಿಣ ಕನ್ನಡ ಜಿಲ್ಲೆ ಸುರತ್ಕಲ್‌ನ ಕುಳಾಯಿ ಹೊಸಬೆಟ್ಟು ಗ್ರಾಮದ ಗುರುರಾಜ ಜೀವನ ರಾವ್ ಸಲ್ಲಿಸಿದ್ದ ಅರ್ಜಿಯಲ್ಲಿ ಮಧ್ಯ ಪ್ರವೇಶಿಸಲು ನಿರಾಕರಿಸಿದೆ.

ಈ ಕುರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸೋಮವಾರ ವಿಚಾರಣೆ ನಡೆಸಿ, ವಜಾಗೊಳಿಸಿದ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ, ಜ್ಞಾನ ಸಂಪಾದನೆ ಹಾಗೂ ಪ್ರಸಾರಕ್ಕೆ ವಿದೇಶ ಪ್ರಯಾಣ ಬೆಳೆಸಿದರೆ ಅಥವಾ ಸಮುದ್ರೋಲ್ಲಂಘನ ಮಾಡಿದರೆ ತಪ್ಪೇನು ಎಂದು ಪ್ರಶ್ನಿಸಿದೆ. ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಇದೇ 8ರಿಂದ 18ರವರೆಗೆ ನಡೆಯಲಿರುವ ಅಷ್ಟ ಮಠದ ಪರ್ಯಾಯದಲ್ಲಿ ಪುತ್ತಿಗೆ ಮಠದ ಪೀಠಾಧಿಪತಿ ಸುಗಣೇಂದ್ರ ತೀರ್ಥರು ಪಾಲ್ಗೊಳ್ಳುವುದಕ್ಕೆ ನಿರ್ಬಂಧ ವಿಧಿಸಬೇಕು. ಪರ್ಯಾಯ ಆಯೋಜನೆಗೆ ಮಾರ್ಗಸೂಚಿ ಅಥವಾ ಬೈಲಾ ರೂಪಿಸಲು ಸಮಿತಿಯೊಂದನ್ನು ರಚಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಕೋರಿದರು.

ಈ ಮನವಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ನ್ಯಾಯಪೀಠ, ಸ್ವಾಮಿ ವಿವೇಕಾನಂದರು ವಿದೇಶದಲ್ಲಿ ಜ್ಞಾನದ ಪ್ರಸಾರ ಮಾಡಿಲ್ಲವೇ? ಸಾಮ್ರಾಟ್ ಅಶೋಕ ತನ್ನ ಮಕ್ಕಳಾದ ಮಹೇಂದ್ರ ಮತ್ತು ಸಂಘಮಿತ್ರೆಯನ್ನು ಬೌದ್ಧ ಧರ್ಮದ ಪ್ರಚಾರಕ್ಕಾಗಿ ವಿದೇಶಕ್ಕೆ ಕಳುಹಿಸಲಿಲ್ಲವೇ? ಇಷ್ಟೆಲ್ಲಾ ಇತಿಹಾಸ ಇರುವಾಗ ನೀವ್ಯಾಕೆ ಇನ್ನೂ 18ನೇ ಶತಮಾನದ ಮಾತುಗಳನ್ನಾಡುತ್ತಿದ್ದೀರಿ.ಈ ವಿಚಾರದಲ್ಲಿ ನಿರ್ಬಂಧ ವಿಧಿಸುವುದಕ್ಕಾದರೂ ಅವಕಾಶ ಎಲ್ಲಿದೆ ಎಂದು ಪ್ರಶ್ನಿಸಿತು.

ಪ್ರಕರಣವೇನು: ಪುತ್ತಿಗೆ ಮಠದ ಶ್ರೀ ಸುಗಣೇಂದ್ರ ತೀರ್ಥರು 1997ರಲ್ಲಿ ಸಾಗರವನ್ನು ದಾಟಿ ಅಮೆರಿಕಕ್ಕೆ ಹೋಗಿ ಬಂದಿದ್ದಾರೆ. ಆದ್ದರಿಂದ, ಅವರು ಶ್ರೀ ಕೃಷ್ಣನನ್ನು ಸ್ಪರ್ಶಿಸಲು ಮತ್ತು ಪೂಜಿಸಲು ಅರ್ಹರಲ್ಲ. ಅವರು ಪರ್ಯಾಯ ಮಹೋತ್ಸವದಲ್ಲಿ ಭಾಗಿಯಾಗಲೂ ಅವಕಾಶವಿಲ್ಲ ಎಂದು ಅರ್ಜಿದಾರರು ಆಕ್ಷೇಪಿಸಿದ್ದರು.

ಲೋಕಸಭಾ ಚುನಾವಣೆಗೆ ಬಿಜೆಪಿ ಮಹತ್ವದ ಸಭೆ

ಕಾಂಗ್ರೆಸ್ ವೈಫಲ್ಯಗಳೇ ಕಮಲಕ್ಕೆ ಅಸ್ತ್ರ

ಬೆಂಗಳೂರು, ಜ.8– ದೇಶ ಮತ್ತು ರಾಜ್ಯದಲ್ಲಿ ಬಿಜೆಪಿ ಪರ ವಾತಾವರಣ ಇದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ಅವರು ಇಂದು ವಿಶ್ಲೇಷಿಸಿದರು.

ಬೆಂಗಳೂರಿನ ಯಲಹಂಕದ ರಮಡ ರೆಸಾರ್ಟ್‌ನಲ್ಲಿ ಇಂದು ನಡೆದ ಬಿಜೆಪಿ ಲೋಕಸಭಾ ಚುನಾವಣಾ ಯೋಜನಾ ಸಭೆಯಲ್ಲಿ ಅವರು ಮಾತನಾಡಿದರು. ಮುಂದಿನ ಲೋಕಸಭಾ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲು ರಾಜ್ಯದ ಮತದಾರರು ಸಜ್ಜಾಗಿದ್ದಾರೆ. ಬಿಜೆಪಿ ಸಂಘಟನೆಗೆ, ಪೂರಕ ಕ್ರಮಗಳನ್ನು ಪಕ್ಷ ಕೈಗೊಳ್ಳಲಿದೆ ಎಂದು ಪ್ರಕಟಿಸಿದರು. ಪಕ್ಷವು ರಾಜ್ಯದಲ್ಲಿ ಎಲ್ಲ 28 ಸ್ಥಾನಗಳನ್ನೂ ಗೆಲ್ಲಲಿದೆ. ಇದಕ್ಕಾಗಿ ಎಲ್ಲರೂ ಶ್ರಮಿಸುವುದಾಗಿ ತಿಳಿಸಿದರು.

ಇತ್ತೀಚೆಗೆ ನಡೆದ ಪಂಚ ರಾಜ್ಯಗಳ ಚುನಾವಣೆಯಲ್ಲಿ ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸ್‌ಗಡದಲ್ಲಿ ಬಿಜೆಪಿ ಗೆದ್ದಿದೆ. ಐಎನ್‌ಡಿಐಎ (ಇಂಡಿಯಾ) ಒಕ್ಕೂಟ, ಕಾಂಗ್ರೆಸ್‌ಗೆ ಮರ್ಮಾಘಾತ ಆಗಿತ್ತು ಎಂದು ವಿವರಿಸಿದರು. ಇದೊಂದು ಸ್ಪಷ್ಟ ಸಂದೇಶವಾಗಿದೆ ಎಂದರು.

ಕೋಟ್ಯಂತರ ಹಿಂದೂಗಳು ಭಗವಾನ್ ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆಯನ್ನು ಎದುರು ನೋಡುತ್ತಿದ್ದು, ಹಬ್ಬದ ವಾತಾವರಣವಿದೆ. ಮನೆಮನೆಗಳಲ್ಲಿ ಹಬ್ಬದ ಸಂಭ್ರಮ ಇದೆ. ಆದರೆ ಭಗವಾನ್ ಶ್ರೀರಾಮನ ಅಸ್ತಿತ್ವವನ್ನೇ ಪ್ರಶ್ನಿಸಿದ್ದ ಕಾಂಗ್ರೆಸ್ ಪಕ್ಷದವರು ವಿಧಿ ಇಲ್ಲದೇ ರಾಜ್ಯದ ಎಲ್ಲ ದೇವ ಸ್ಥಾನಗಳಲ್ಲಿ ಪೂಜೆ ನೆರವೇರಿಸಲು ಸುತ್ತೋಲೆ ಹೊರಡಿಸಿದೆ. ಇದು ರಾಮಭಕ್ತರಿಗೆ ಸಂದ ಜಯ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯ ಮತ್ತು ರಾಜ್ಯದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ಕರ್ನಾಟಕದ ಉಸ್ತುವಾರಿ ಅರುಣ್ ಸಿಂಗ್, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯದ ಮಾಜಿ ಮುಖ್ಯಮಂತ್ರಿ ಮತ್ತು ಸಂಸದ ಡಿ.ವಿ. ಸದಾನಂದಗೌಡ, ವಿರೋಧ ಪಕ್ಷದ ನಾಯಕ ಆರ್. ಅಶೋಕ್, ವಿಧಾನಪರಿಷತ್ ವಿಪಕ್ಷ ನಾಯಕ ಕೋಟಾ ಶ್ರೀನಿವಾಸ ಪೂಜಾರಿ ಮತು ಮುಖಂಡರು ಉಪಸ್ಥಿತರಿದ್ದರು.

ಶೂಟಿಂಗ್‌ನಲ್ಲಿ ಪ್ಯಾರಿಸ್ ಒಲಿಂಪಿಕ್‌ಗೆ ಅರ್ಹತೆ ಪಡೆದ ಇಶಾ ಸಿಂಗ್, ವರುಣ್ ತೋಮರ್

ಜಕಾರ್ತ: ಭಾರತದ ಯುವ ಶೂಟರ್‌ಗಳಾದ ವರುಣ್ ತೋಮರ್ ಮತ್ತು ಇಶಾ ಸಿಂಗ್ ಅವರು ಸೋಮವಾರ ಜಕಾರ್ತನಲ್ಲಿ ನಡೆದ ಏಷ್ಯನ್ ಕ್ವಾಲಿಫೈಯರ್‌ನ



ಪುರುಷರ ಮತ್ತು ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ಒಲಿಂಪಿಕ್ ಗೆ ಅರ್ಹತೆ ಪಡೆದಿದ್ದಾರೆ.

ಇವರಿಬ್ಬರ ಅರ್ಹತೆಯೊಂದಿಗೆ ಪ್ಯಾರಿಸ್‌ಗೆ ಒಲಿಪಿಂಕ್‌ಗೆ ತೆರಳುವ ಒಟ್ಟು ಭಾರತೀಯ ಶೂಟರ್‌ಗಳ ಸಂಖ್ಯೆ 15ಕ್ಕೆ ಏರಿಕೆಯಾಗಿದೆ. ಇದು ಈ ಹಿಂದೆ ಟೋಕಿಯೊ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ಅತ್ಯಧಿಕ ಸಂಖ್ಯೆಗೆ ಸಮನಾಗಿದೆ.

ಈ ವರ್ಷ ಜುಲೈ–ಆಗಸ್ಟ್‌ನಲ್ಲಿ ಉಳಿದ ಅರ್ಹತಾ ಪಂದ್ಯಗಳು ನಡೆದಾಗ ಭಾರತದ ಇನ್ನಷ್ಟು ಕ್ರೀಡಾಪಟುಗಳು ಪ್ಯಾರಿಸ್ ಒಲಿಂಪಿಕ್‌ಗೆ ಅರ್ಹತೆ ಪಡೆಯಬಹುದು.

20ರ ಹರೆಯದ ತೋಮರ್ ಫೈನಲ್‌ನಲ್ಲಿ 239.6 ಅಂಕಗಳನ್ನು ಗಳಿಸಿ ಅಗ್ರಸ್ಥಾನಕ್ಕೇರಿದರೆ, ಅರ್ಜುನ್ ಚೀಮಾ ಅವರು 237.3 ಅಂಕಗಳೊಂದಿಗೆ ಬೆಳ್ಳಿ ಪದಕ ಗೆದ್ದರು. ಮಂಗೋಲಿಯಾದ ದವಾಖು ಎಂಖ್ತೈವಾನ್ (217.2) ಕಂಚಿನ ಪದಕಕ್ಕೆ ತೃಪ್ತಿಪಟ್ಟಿದ್ದಾರೆ. ಇನ್ನು 18ರ ಹರೆಯದ ಇಶಾ ಸಿಂಗ್ ಅವರು ಮಹಿಳೆಯರ ವಿಭಾಗದಲ್ಲಿ 243.1 ಅಂಕ ಗಳಿಸಿ ಚಿನ್ನ ಗೆದ್ದಿದ್ದಾರೆ. ಪಾಕಿಸ್ತಾನದ ಕಿಶ್ಮಲಾ ತಲಾತ್(236.3) ಬೆಳ್ಳಿ ಪದಕ ಗೆದ್ದರೆ, ಭಾರತದ ರಿದಮ್ ಸಾಂಗ್ವಾನ್(214.5) ಅವರು ಕಂಚಿನ ಪದಕ ಪಡೆದರು.

ಕಾಂತರಾಜ ವರದಿಗೆ ವಿರೋಧವಿಲ್ಲ; ಸರಿಪಡಿಸಲಷ್ಟೆ ನಮ್ಮ ಕೋರಿಕೆ

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಜನಗಣತಿ) ವರದಿಗೆ ನಮ್ಮ ವಿರೋಧವೇನೂ ಇಲ್ಲ. ಆದರೆ, ಅದನ್ನು ಸ್ವಲ್ಪ ಮಟ್ಟಿಗೆ ಸರಿಪಡಿಸುವಂತೆ ಮುಖ್ಯಮಂತ್ರಿ ಅವರಲ್ಲಿ ಕೇಳಿಕೊಂಡಿದ್ದೇವೆ ಎಂದು ವೀರಶೈವ ಲಿಂಗಾಯತ ಸಮುದಾಯದ ಪ್ರಮುಖರೂ ಆಗಿರುವ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಸ್ಪಷ್ಟಪಡಿಸಿದರು.



ಹಿಂದುಳಿದ ವರ್ಗಗಳ ಸ್ವಾಮೀಜಿಗಳ ತಂಡವೊಂದು ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ಕಾಂತರಾಜ ವರದಿ ಸ್ವೀಕರಿಸಲು ಆಗ್ರಹಿಸಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಈಗಿನ ನಿಯಮಗಳ ಪ್ರಕಾರ, ಜಾತಿ ನಮೂದಿಸುವಾಗ ಲಿಂಗಾಯತ ಉಪ ಪಂಗಡಗಳ ಹೆಸರನ್ನು ನಮೂದಿಸಿದರೆ ಸಮುದಾಯದ ಉಪಪಂಗಡಗಳಿಗೆ ಸೇರಿದವರಿಗೆ ಮೀಸಲಾತಿ ಸಿಗುವುದಿಲ್ಲ. ಆದ್ದರಿಂದ, ಸಮುದಾಯಕ್ಕೆ ಸೇರಿದವರು ಜಾತಿ ನಮೂದಿಸುವಾಗ ಲಿಂಗಾಯತ ಉಪಪಂಗಡದ ಹೆಸರು ಹಾಕುತ್ತಿಲ್ಲ. ಅದನ್ನು ಸರಿಪಡಿಸಿದರೆ, ಜಾತಿ ನಮೂದಿಸುವಾಗ ಲಿಂಗಾಯತ ಉಪಪಂಗಡಗಳ ಹೆಸರು ನಮೂದಿಸಲು ಸಾಧ್ಯವಾಗುತ್ತದೆ. ಹೀಗಾದಾಗ, ಲಿಂಗಾಯತ ಸಮುದಾಯದ ಜನಸಂಖ್ಯೆ ಶೇ 22ರವರೆಗೆ ಹೆಚ್ಚಾಗುವ ಸಂಭವವಿದೆ ಎಂದು ವಿವರಿಸಿದರು.

ರಹೀಂಖಾನ್ ಹೇಳಿಕೆ ತಪ್ಪೇನಿದೆ: ರಹೀಂ ಖಾನ್ ಅವರು ಮುಸ್ಲಿಂ ಸಮುದಾಯಕ್ಕೆ ಉಪ ಮುಖ್ಯಮಂತ್ರಿ ಹುದ್ದೆ ಕೇಳಿರುವುದರಲ್ಲಿ ತಪ್ಪೇನಿದೆ' ಎಂದು ಪಾಟೀಲ ಹೇಳಿದರು. 'ಉಪ ಮುಖ್ಯಮಂತ್ರಿ ಮಾಡಬೇಕೋ ಬೇಡವೋ, ಎಷ್ಟು ಮಾಡಬೇಕು, ಯಾವೆಲ್ಲ ವರ್ಗಕ್ಕೆ ಮಾಡಬೇಕು ಎಂಬುದನ್ನು ಹೈಕಮಾಂಡ್ ತೀರ್ಮಾನಿಸಲಿದೆ. ಹಿಂದೆ ಒಂದೇ ಉಪ ಮುಖ್ಯಮಂತ್ರಿ ಹುದ್ದೆ ಎಂದು ತೀರ್ಮಾನಿಸಿದ್ದರು. ಈಗ ಕೆಲವು ಬೇಡಿಕೆಗಳನ್ನು ನಾನು ಕೂಡ ಗಮನಿಸಿದ್ದೇನೆ. ನನ್ನ ಅಭಿಪ್ರಾಯವನ್ನು ಪಕ್ಷದ ನಾಲ್ಕು ಗೋಡೆ ಮಧ್ಯೆ ಹೇಳುತ್ತೇನೆ ಎಂದರು.

12ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 12 ವರ್ಷ ಕಳೆದರೂ ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಅಚ್ಚ ಹಸಿರಾಗಿದೆ. ನಿಮ್ಮ ಆತ್ಮಕ್ಕೆ ಶಾಂತಿ ಕೋರುವವರು ಪತ್ನಿ ಶ್ರೀಮತಿ ಗೌರಮ್ಮ ಹಾಗೂ ಕುಟುಂಬ ವರ್ಗದವರು, ಹೊಸಹುಂಡಿ

ಸಿ. ಕೆಂಚೇಗೌಡರು
ಮಾಜಿ ಅಧ್ಯಕ್ಷರು, ಟಿಎಪಿಸಿಎಂಎಸ್
ನಿಧನ: 09-01-2012

2ನೇ ವರ್ಷದ ಪುಣ್ಯಸ್ಮರಣೆ



ಶ್ರೀ. ಎಂ. ರಂಗಪ್ಪ
[Dy., Commissioner of Police (Retd.) Mysore]
ಸದಾ ನಿಮ್ಮ ಸ್ಮರಣೆಯಲ್ಲಿರುವ
ಪತ್ನಿ: ಶ್ರೀಮತಿ ರಾಧಮ್ಮ ರಂಗಪ್ಪ
ಮಗ: ಡಾ.ನರೇಂದ್ರ ರಂಗಪ್ಪ (Orthopaedic Surgeon)
ಮಗಳು: ಪೂರ್ಣಿಮ ರಂಗಪ್ಪ (Surgical Oncologist)
ತಮ್ಮ: ಡಾ. ಪ್ರಸನ್ನ ಕುಮಾರ್, ಅಧ್ಯಕ್ಷರು: ಮುನಿಸ್ವಾಮಿ ಮೆಮೋರಿಯಲ್ ಟ್ರಸ್ಟ್,
ಅರವಿಂದ ಆಸ್ಪತ್ರೆ, ಅರವಿಂದನಗರ, ಮೈಸೂರು
ಹಾಗೂ ಕುಟುಂಬವರ್ಗ